

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 30 ಜುಲೈ 28 ಆಗಸ್ಟ್ 3, 1997 ಬೆಲೆ ರೂ. 2.00

ಜನಸಾಮಾನ್ಯರಿಗೆ ನೀಡಿದ ವಚನಗಳನ್ನು ಸರಕಾರಕ್ಕೆ ನೆನಪಿಸಲು
ದೇಶಾದ್ಯಂತ ರಾಷ್ಟ್ರೀಯ ಪ್ರಚಾರಾಂದೋಲನ ಆರಂಭ

ಒಂದು ವರ್ಷದ ಹಿಂದೆ ಸಂಯುಕ್ತ ರಂಗ ತನ್ನ 'ಸಮಾನ ಕನಿಷ್ಠ ಕಾರ್ಯಕ್ರಮ'ದಲ್ಲಿ ಕಾರ್ಮಿಕರಿಗೆ, ಕೃಷಿ ಕೂಲಿಕಾರರಿಗೆ, ರೈತರಿಗೆ, ಮಹಿಳೆಯರಿಗೆ ಮತ್ತು ಇತರ ದಲಿತ-ಶೋಷಿತ ಜನ ವಿಭಾಗಗಳಿಗೆ ನೀಡಿದ ವಚನಗಳನ್ನು ಈಡೇರಿಸಲು ಸಿದ್ಧವಾಗುವ ಬದಲು ದೇಶಿ-ವಿದೇಶೀ ಬಂಡವಾಳಿಗರನ್ನು ಮೆಚ್ಚಿಸಲಿಕ್ಕೇ ಆದ್ಯತೆನೀಡಿರುವುದನ್ನು, ದೇಶದ ಸ್ವಾವಲಂಬನೆಯಮೇಲೆ ಪ್ರತಿಕೂಲ ಪರಿಣಾಮ ಬೀರುವ ಅದರ ಕ್ರಮಗಳನ್ನು ಪ್ರತಿಭಟಿಸಲು ಸಿಪಿಐ(ಎಂ) ಕೇಂದ್ರ ಸಮಿತಿಯ ಕರೆಯ ಮೇರೆಗೆ ಎರಡು ವಾರಗಳ 'ರಾಷ್ಟ್ರೀಯ ಪ್ರಚಾರಾಂದೋಲನ' ಜುಲೈ 15 ರಿಂದ ಆರಂಭವಾಗಿದೆ.

ಜುಲೈ 15 ರಂದೇ ಉತ್ತರ ಪ್ರದೇಶದ ರಾಜಧಾನಿ ಲಕ್ನೌನಲ್ಲಿ ಭರದಿಂದ ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೆ ಒಂದು ಬೃಹತ್ ರ್‍ಯಾಲಿ ನಡೆಯಿತು. ಈ ದೊಡ್ಡ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಬಂದಿದ್ದ ಸಾವಿರಾರು ಕಾರ್ಮಿಕರು, ರೈತರು, ಮಹಿಳೆಯರು, ಯುವಜನ, ವಿದ್ಯಾರ್ಥಿಗಳ ಹುಮ್ಮಸ್ಸನ್ನು ಧಾರಕಾರವಾಗಿ ಸುರಿಯುತ್ತಿದ್ದ ಮಳೆಯೂ ಇಳಿಸಲಾಗಲಿಲ್ಲ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್, ಉತ್ತರ ಪ್ರದೇಶ ಸಿಪಿಐ(ಎಂ) ಕಾರ್ಯದರ್ಶಿ ರಾಮ್ ಸುಮೇರ್ ಯಾದವ್, ಸುಭಾಷಿಣಿ ಅಲಿ ಮತ್ತಿತರರ ಮಾತುಗಳನ್ನು ಸುರಿಯುತ್ತಿದ್ದ ಮಳೆಯಲ್ಲೇ ಕೂತು 15 ಸಾವಿರ ಮಂದಿ ಆಲಿಸಿದರು. ಸಿಪಿಐ(ಎಂ) ಭ್ರಷ್ಟಾಚಾರ ಮತ್ತು ಕಾಂಗ್ರೆಸ್(ಐ) ನೀತಿಗಳ ಮುಂದುವರಿಕೆಯ ವಿರುದ್ಧ ಅವಿಶ್ರಾಂತ ಹೋರಾಟ ನಡೆಸುವುದು ಎಂದು ಸುರ್ಜಿತ್ ಸಾರಿದರೆ, ಪ್ರಕಾಶ್ ಕಾರಟ್‌ರವರು ಜನಗಳನ್ನು ಪ್ರಶ್ನೆಗಳ ಮೇಲೆ ರಾಜ್ಯಾದ್ಯಂತ ವ್ಯಾಪಕ ಪ್ರಚಾರ ನಡೆಸುವ ಕರೆ ನೀಡಿದರು. ರಾಮ್ ಸುಮೇರ್ ಯಾದವ್ ಬಿ.ಜೆ.ಪಿ, ಬಿ.ಎಸ್. ಪಿ.ಯು ಸಮಯಸಾಧಕ ಮೈತ್ರಿ ಕೂಟದ ಆಳ್ವಿಕೆಯಡಿ ಈ ಬೃಹತ್‌ರಾಜ್ಯದಲ್ಲಿ ಹರಡಿರುವ ಅರಾಜಕತೆಯ ಒಂದು ಚಿತ್ರಣ ನೀಡಿದರು. ಅಲ್ಲಿ ಈಗ ಆಗುತ್ತಿರುವ ಕೆಲಸ ಇಷ್ಟೆ - ಇತಿಹಾಸ, ಭೂಗೋಳವನ್ನು ಬದಿಗೊತ್ತಿ ಹೊಸ ಜಿಲ್ಲೆಗಳ ರಚನೆಗೆ ರಾಜ್ಯದ ಖಜಾನೆಯ ಸೂರೆ, ಹೆಸರುಗಳ ಬದಲಾವಣೆಗ (ಚಂದ್ರಶೇಖರ್ ಆಝಾದ್‌ರಂತಹ ಚಾರಿತ್ರಿಕ ವ್ಯಕ್ತಿಗಳ ಹೆಸರಿನ ಸ್ಥಳಗಳ ಹೆಸರಲ್ಲೂ ಬದಲಾವಣೆ!) ಹಾಗೂ ನೌಕರರ ವರ್ಗಾವರ್ಗಿಯಲ್ಲಿ ಹಣ ಸಂಪಾದನೆ ಇಷ್ಟೆ. ಈ ಕೋಮುವಾದಿ - ಜಾತೀವಾದಿ ಪಕ್ಷಗಳು, ಕೂಟಗಳು ಖಂಡಿತಾ ಕಾಂಗ್ರೆಸ್(ಐ) ದುರಾಡಳಿತಕ್ಕಿಂತ ಭಿನ್ನವಾದ ಆಡಳಿತವನ್ನು ಕೊಡಲಾರವು ಎಂಬುದಕ್ಕೆ ಈ ರಾಜ್ಯ ಒಂದು ಸಾಕ್ಷಿ.

ಇದರ ನಂತರ ಜುಲೈ 25 ರಂದು ಬೆಂಗಳೂರಿನಲ್ಲಿ, 26 ರಂದು ಚೆನ್ನೈಯಲ್ಲಿ, ಜುಲೈ 30 ರಂದು ಲೂಧಿಯಾನದಲ್ಲಿ ಮತ್ತು ಅಹಮದಾಬಾದಿನಲ್ಲಿ, ಜುಲೈ 31 ರಂದು ಅಗರ್ತಲಾ ಮತ್ತು ಶಿಮ್ಲಾಗಳಲ್ಲಿ ರಾಜ್ಯ ಮಟ್ಟದ ರ್‍ಯಾಲಿಗಳು ನಡೆಯುತ್ತವೆ.

ಇವಲ್ಲದೆ ಕೆಲವು ರಾಜ್ಯಗಳಲ್ಲಿ ವಿವಿಧ ಸ್ಥಳಗಳಲ್ಲಿ ಇಂತಹ ರ್‍ಯಾಲಿಗಳು ನಡೆಯಲಿವೆ. ಪಶ್ಚಿಮ ಬಂಗಾಳ, ಕೇರಳ, ಆಂಧ್ರಪ್ರದೇಶಗಳಲ್ಲಿ ವಿವಿಧ ಕೇಂದ್ರಗಳಲ್ಲಿ ಇಂತಹರ್‍ಯಾಲಿಗಳು ನಡೆಯಲಿವೆ. ತಮಿಳುನಾಡಿನಲ್ಲಿ ಚೆನ್ನೈಯಲ್ಲದೆ ಮಧುರೆ, ಕೊಯಮತ್ತೂರು, ತಂಜಾವೂರುಗಳಲ್ಲಿಯೂ ರ್‍ಯಾಲಿಗಳು ನಡೆಯುತ್ತವೆ. ಮಹಾರಾಷ್ಟ್ರದಲ್ಲಿ ಮುಂಬೈ ಮತ್ತಿತರ ಆರು ಕೇಂದ್ರಗಳಲ್ಲಿ ಪ್ರತಿಭಟನಾ ಸಭೆಗಳು ನಡೆಯುತ್ತವೆ. ರಾಜಸ್ಥಾನದಲ್ಲಿ ಉದಯಪುರ ಮತ್ತು ಕೋಟಾಗಳಿಂದ ಎರಡು ಜಾಥಾಗಳು ಹೊರಟಿದ್ದು ಇಡೀ ರಾಜ್ಯದಲ್ಲಿ ಈ ಜಾಥಾಗಳು ಪ್ರಚಾರಾಂದೋಲನ ನಡೆಸುತ್ತವೆ. ಸಂಯುಕ್ತ ರಂಗದ ಸರಕಾರಕ್ಕೆ ದೇಶದ ಈಗಿನ ರಾಜಕೀಯ ಸನ್ನಿವೇಶದಲ್ಲಿ ನೆರವೇರಿಸಬೇಕಾದ, ನೆರವೇರಿಸುವುದಾಗಿ ಹೇಳಿದ ಕರ್ತವ್ಯಗಳನ್ನು ಇವು ನೆನಪಿಸುತ್ತವೆ.

ದಲಿತರ ಮೇಲಿನ ದೌರ್ಜನ್ಯಕ್ಕೆ ತಡೆ ಎಂದು?

ಎಸ್.ಕೆ.ಉಪಾಧ್ಯಾಯ

ನಾವು ಈ ಆಗಸ್ಟ್ 15 ರಂದು ಭಾರತ ದೇಶದ ಸ್ವಾತಂತ್ರ್ಯದ 50ನೇ ದಿನಾಚರಣೆಯನ್ನು ಮಾಡಲಿದ್ದೇವೆ. ಅದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಕೋಟಿ ಗಟ್ಟಲೆ ಹಣ ಖರ್ಚು ಮಾಡಲು ತಯಾರಾಗಿದ್ದಾರೆ. ಆದರೆ ನಮ್ಮ ದೇಶ ಸ್ವಾತಂತ್ರ್ಯ ಪಡೆದ ಸ್ವರ್ಣಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಹೊರಟಾಗ ತ್ಯಾಗ-ಬಲಿದಾನಗಳ ಮೂಲಕ ನಾವು ದೇಶದ ಸ್ವಾತಂತ್ರ್ಯಕ್ಕಾಗಿ ಯಾಕೆ ಹೋರಾಡಿದ್ದೇವೆ, ಸ್ವಾತಂತ್ರ್ಯ ಗಳಿಸಿದ ನಂತರ ಏನು ಸಾಧಿಸಿದ್ದೇವೆಂಬುದರ ಕುರಿತು ವಿಮರ್ಶೆಯಲ್ಲಿ ಹಿಂದೆ ಬಿದ್ದಿದ್ದೇವೆ. ಐವತ್ತನೆಯ ಸ್ವಾತಂತ್ರ್ಯೋತ್ಸವದ ದಿನವನ್ನು ಅತ್ಯಂತ ಹೆಮ್ಮೆಯಿಂದ ಮುನ್ನೋಡುತ್ತಿರುವ ಈ ಕಣ್ಣಿಗೆ ಕತ್ತಲೆ ಕವಿದಂತಾಗಿದೆ. ಉಕ್ಕಿ ಬರುತ್ತಿರುವ ಉತ್ಸಾಹಕ್ಕೆ ನೀರೆರಚಿದಂತಾಗಿದೆ. ಸಮಾಜದಲ್ಲಿ ಎಲ್ಲ ಮೇಲ್ವರ್ಗದವರಿಂದಲೂ ಧಿಕ್ಕರಿಸಲ್ಪಟ್ಟು ತುಳಿತಕ್ಕೊಳಗಾಗಿರುವ ದಲಿತರಿಗೆ ಸಮಾಜದಲ್ಲಿ ಮನುಷ್ಯನಂತೆ ಬಾಳಲು ಸಮಾನ ಹಕ್ಕು, ಸಮಾನ ಅವಕಾಶ, ಸಮಾನ ಶಿಕ್ಷಣ ಸಿಗಬೇಕೆಂಬ ಮಹೋದ್ದೇಶ ಸ್ವಾತಂತ್ರ್ಯ ಚಳುವಳಿಯ ಗುರಿಯಾಗಿತ್ತು. ಅದನ್ನು ಮಣ್ಣು ಪಾಲು ಮಾಡಿ ದಲಿತ ಹೆಂಗಸರ ಮಕ್ಕಳ ಮೇಲಿನ ದೌರ್ಜನ್ಯ, ಅಪಮಾನಗಳಿಂದಾಗಿ ಎಲ್ಲರೂ ಕಣ್ಣೀರು ಕೋಡಿ ಹರಿಸುವಂತೆ ಮಾಡಿದೆ, ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡಿದೆ.

ಮೈಸೂರಿನಿಂದ 14 ಕಿ.ಮಿ. ದೂರದಲ್ಲಿರುವ ಉದ್ಬೂರು ಗ್ರಾಮದಲ್ಲಿ ಜುಲೈ 8 ರಂದು ದಲಿತರು ಮತ್ತು ನಾಯಕ ಜನಾಂಗದ ಗುಂಪುಗಳ ಘರ್ಷಣೆಯಲ್ಲಿ ಪೋಲೀಸರು ಗುಂಡು ಹಾರಿಸಬೇಕಾಯಿತು. 25 ಕ್ಕೂ ಮೇಲ್ಪಟ್ಟು ದಲಿತ ಮಹಿಳೆಯರೂ ಮಕ್ಕಳೂ ತೀವ್ರ ಗಾಯಗೊಂಡು ಆಸ್ಪತ್ರೆ ಸೇರಬೇಕಾದ ಪ್ರಸಂಗ ಉಂಟಾಗಿದೆ. ಊರಿನ ಮುಂಭಾಗದಲ್ಲಿ 'ರಾಷ್ಟ್ರನಾಯಕ ಸಂವಿಧಾನ ಶಿಲ್ಪಿ ಡಾ|| ಬಿ.ಆರ್.ಅಂಬೇಡ್ಕರ್ ಯುವಕರ ಸಂಘ" ಎಂಬ ನಾಮಫಲಕ ನಿಲ್ಲಿಸಿದ್ದೇ ದಲಿತ ಮತ್ತು ನಾಯಕ ಜನಗಳೊಳಗೆ ಘರ್ಷಣೆಗೆ ಮುಖ್ಯ ಕಾರಣ. ಮನೆಯಲ್ಲಿದ್ದ ದಲಿತ ಮಹಿಳೆಯನ್ನು ಬತ್ತಲೆಗೊಳಿಸಿ ಥಳಿಸುವ ಮಟ್ಟಕ್ಕೂ ಈ ದುಷ್ಕೃತ್ಯ ನಡೆಯಿತೆಂದರೆ ನಮ್ಮ ಮಾನವತೆ ಎಷ್ಟು ಅಧೋಗತಿಗಿಳಿಯುತ್ತಿದೆಂಬುದನ್ನು ಕಣ್ಣಾರೆ ಕಾಣಬಹುದಾಗಿದೆ.

ಮೈಸೂರಿನ ಉದ್ಬೂರಿನಲ್ಲಿ ಅಂಬೇಡ್ಕರ್ ಯುವಕ ಸಂಘವೆಂಬ ನಾಮಫಲಕ ನಿಲ್ಲಿಸಿದ್ದಕ್ಕಾಗಿ ಘರ್ಷಣೆ ನಡೆದರೆ ಮುಂಬಯಿಯ ಮಾತಾ ರಮಾಬಾಯಿ ಅಂಬೇಡ್ಕರ್ ನಗರದಲ್ಲಿ ಜೂನ್ 11 ರಂದು ಶಿವಸೇನೆ-ಬಿಜೆಪಿ ಸರಕಾರ ದಲಿತರ ಮೇಲೆ ಗೋಲಿಬಾರ್ ಮಾಡಿ ಹತ್ತು ಜನರನ್ನು ಕೊಂದು 25 ಕ್ಕೂ ಹೆಚ್ಚು ಜನರನ್ನು ಜಖಂಗೊಳಿಸಿದೆ. ಆ ಪ್ರದೇಶದಲ್ಲಿದ್ದ ಡಾ|| ಅಂಬೇಡ್ಕರ್ ಪ್ರತಿಮೆಗೆ ಯಾರೋ ಕಿಡಿಗೇಡಿಗಳು ಚಪ್ಪಲಿ ಹಾರ ಹಾಕಿದ್ದನ್ನು ಕಂಡ ದಲಿತ ಜನಾಂಗ ಅದರ ವಿರುದ್ಧ ಪ್ರತಿಭಟನೆ ವ್ಯಕ್ತಮಾಡುತ್ತಿದ್ದಾಗ ಯಾವ ಮುನ್ಸೂಚನೆಯಿಲ್ಲದೆ, ಕೊಲ್ಲಬೇಕೆಂದೆ ಗುರಿಯಿಟ್ಟು ಗೋಳಿಬಾರ್ ಮಾಡಿ ದಲಿತ ಯುವಕರನ್ನು ಕೊಲ್ಲಲಾಯಿತು. ಗೋಳೀಬಾರಿನಿಂದ ಸತ್ತವರಲ್ಲಿ ಡಿವೈಎಫ್‌ಐ ಕಾರ್ಯಕರ್ತ ಸುಭಾಷ್ ಕಾಂಬ್ಳೆ ಎಂಬುವರೂ ಸೇರಿದ್ದಾರೆ. ಸಿಪಿಐ(ಎಂ) ಪಕ್ಷ ಯಾವಾಗಲೂ ಸ್ಪರ್ಧಿಸುತ್ತಿರುವ ಬಾಂಡೂಪ್ ವಿಧಾನ ಸಭಾ ಕ್ಷೇತ್ರದಲ್ಲಿ ರಮಾಬಾಯಿ ನಗರ ಸೇರಿದೆ. ಅಲ್ಲಿ ಗೋಳೀಬಾರ್ ನಡೆದಿದೆ.

ಇದರ ಹಿನ್ನೆಲೆ ಏನೆಂದರೆ ಬಿಜೆಪಿಗೆ ಈ ಪ್ರದೇಶದಲ್ಲಿ ಯಾವ ಪ್ರಭಾವವೂ ಇರಲಿಲ್ಲ. ಮೇ 25 ರಂದು ಬಿಜೆಪಿ ಎಲ್ಲಾ ಪ್ರದೇಶದಲ್ಲಿ ಒಂದು ಆಫೀಸ್ ತೆರೆದು ಸಾರ್ವಜನಿಕ ಸಭೆ ನಡೆಸಿತು. ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರಮೋದ್ ಮಹಾಜನ್ ಅವರು ಪ್ರಚೋದನಕಾರಿ ಭಾಷಣ ಮಾಡಿ ಜಾತಿ ದ್ವೇಷ ಹುಟ್ಟುಹಾಕಿದ್ದರಂತೆ. ಸ್ನೇಹ ಮನೋಭಾವನೆಯನ್ನು ಕದಡಿದ್ದರಂತೆ. ಮೈಸೂರಿನ ಪ್ರಕರಣ ಸ್ಥಳೀಕವಾಗಿಯೇ ಮುಗಿದಿದೆ. ಆದರೆ ಮುಂಬಯಿಯ ಪ್ರಕರಣ ಇಡೀ ದೇಶವನ್ನೇ ಆವರಿಸಿ ಪ್ರತಿಭಟನೆ, ಬಂದ್, ಉಪವಾಸ ಸತ್ಯಾಗ್ರಹಗಳ ಮೂಲಕ ಪ್ರದರ್ಶಿಸಲ್ಪಡುತ್ತಿದೆ. ಮುಂಬಯಿ ಗೋಳಿಬಾರ್ ಶಿವಸೇನೆ-ಬಿಜೆಪಿ ಸರಕಾರಕ್ಕೂ ಗಂಡಾಂತರಕಾರಿಯಾಗುವ ಸಂಭವ ಕಾಣುತ್ತಿದೆ. ಯಾಕೆಂದರೆ ಈ ಘಟನೆಯನ್ನು ಶಿವಸೇನೆ ತನ್ನ ರಾಜಕೀಯಕ್ಕಾಗಿ, ಗೂಂಡಾಗಿರಿಗಾಗಿ ಉಪಯೋಗ ಮಾಡಿದೆ. ಮಹಾರಾಷ್ಟ್ರ ವಿಧಾನ ಸಭೆಯ ವಿರೋಧ ಪಕ್ಷದ ಮುಖಂಡರಾದ ಛಗನ್‌ಭುಜಬಲ್ ಅವರನ್ನು ಕೊಲ್ಲಲು ಪ್ರಯತ್ನಿಸಿ, ಅವರು ಸಿಗದಿದ್ದಾಗ ಅವರ ಮನೆಯನ್ನು ನಾಶಗೊಳಿಸಿದೆ. ಗೋಳಿಬಾರ್ ಮಾಡಿದ್ದನ್ನು ಖಂಡಿಸಿದಾಗ, ಪೋಲೀಸರ ವರ್ತನೆಯನ್ನು ಬೆಂಬಲಿಸಲು ಬಂಟುನೆವ ಮುಂದೆ ಮಾಡಲಾಗುತ್ತಿದೆ. ಭುಜಬಲ್ ಅವರ ಮನೆಯ ಮೇಲೆ ಗೂಂಡಾಗಿರಿ ನಡೆಸಿದ ಶಿವಸೇನೆಯವರನ್ನು ಬಂಧಿಸುವ ವಿಚಾರದಲ್ಲಿ ಬಾಳಾಠಾಕ್ರೆ ಮತ್ತು ಮುಖ್ಯಮಂತ್ರಿ ಜೋಶಿಯವರ ಮಧ್ಯೆ ಭಿನ್ನಾಭಿಪ್ರಾಯ ತೋರಿಬಂದಿದೆ. ಕೇಂದ್ರ ಗೃಹಮಂತ್ರಿ ಇಂದ್ರಜಿತ್ ಗುಪ್ತ ಈಗಾಗಲೇ ಮುಂಬಯಿಗೆ ಬಂದು ಹೋಗಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷದ ಪಾಲಿಟ್‌ಬ್ಯೂರೋ ಈ ಘಟನೆಯನ್ನು ಖಂಡಿಸಿದೆ. ಸಿಪಿಐ(ಎಂ) ದಿಲ್ಲಿ ಘಟಕ ಮತಪ್ರದರ್ಶನ ನಡೆಸಿದೆ. ಪೋಲೀಸರು ಮತ ಪ್ರದರ್ಶನಕಾರರನ್ನು ಚದುರಿಸುವ ಸಲುವಾಗಿ ಜಲಫಿರಂಗಿಯಿಂದ ನೀರು ಸುರಿಸಿದಾಗ ಕಮ್ಯುನಿಸ್ಟ್ ಕಾರ್ಯಕರ್ತನೊಬ್ಬ ತನ್ನ ಕಣ್ಣಿನ ದೃಷ್ಟಿಯನ್ನೇ ಕಳಕೊಳ್ಳುವ ಪ್ರಸಂಗ ಬಂದಿದೆ. ಗುಲ್ಬರ್ಗಾ, ಬಿಜಾಪುರ, ಸಿಪಿಐ(ಎಂ) ಘಟಕಗಳು ದಲಿತರ ಮೇಲಿನ ದೌರ್ಜನ್ಯವನ್ನು ಖಂಡಿಸಿವೆ.

ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಪ್ರಭಾವ ಹೆಚ್ಚಾಗುತ್ತಿರುವಂತೆ ದೇಶದ ಹಲವಾರು ಕಡೆ ದಲಿತರ ಮೇಲಿನ ದೌರ್ಜನ್ಯ ಹೆಚ್ಚಾಗುತ್ತಿದೆ. ತಮಿಳು ನಾಡಿನಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಯುವುದು ಕಡಿಮೆ. ಅಲ್ಲಿ ಕೂಡ ಇತ್ತೀಚೆಗೆ ಅತ್ಯಂತ ದಾರುಣ ರೀತಿಯ ದುಷ್ಕೃತ್ಯ ನಡೆಯಿತು.

ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಯನ್ನು ಕುಂಠಿತಗೊಳಿಸುವ ದುರುದ್ದೇಶದಿಂದ, ಚುನಾವಣೆಯಲ್ಲಿ ತಂತಮ್ಮ ಜಾತಿ, ಉಪಜಾತಿಗಳನ್ನು ಒಂದಾಗಿಸುವ ದೃಷ್ಟಿಯಿಂದ, ಧರ್ಮ, ಜಾತಿ, ಉಪಜಾತಿಗಳ ದ್ವೇಷದ ಕಿಡಿಯನ್ನು ಸೃಷ್ಟಿಸುತ್ತಿದ್ದಾರೆ ಬಂಡವಾಳ ಶಾಹಿ-ಭೂಮಾಲಕ ಪಕ್ಷಗಳೂ ರಾಜಕೀಯ ಮುಖಂಡರೂ.

ಪುಟ 6 ನೋಡಿ

ಮುಂಬೈಯಲ್ಲಿ ದಲಿತರ ಮೇಲೆ ಬರ್ಬರ ಗೋಳಿಬಾರ್
ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡನೆ

ಜುಲೈ 11ರಂದು ಈಶಾನ್ಯ ಮುಂಬೈಯಲ್ಲಿ ನಡೆದ ಗೋಳಿಬಾರ್‌ನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳು ದಲಿತರ ವಿರುದ್ಧ ನಡೆಸಿದ ಈ ಬರ್ಬರ ಕಾರ್ಯಾಚರಣೆಯನ್ನು ಬಲವಾಗಿ ಪ್ರತಿಭಟಿಸಬೇಕು ಎಂದು ಅದು ಕರೆ ನೀಡಿದೆ. ಗೋಳೀಬಾರಿನ ದಿನವೇ ನೀಡಿದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿಕೆ ಹೀಗಿದೆ - "ಹತ್ತು ಜನರನ್ನು ಸಾಯಿಸಿ 25 ಮಂದಿಯನ್ನು ಗಾಯಗೊಳಿಸಿರುವ ಈಶಾನ್ಯ ಮುಂಬೈಯಲ್ಲಿ ಇಂದು ನಡೆದ ಅಮಾನುಷ ಪೋಲೀಸ್ ಗೋಳಿಬಾರನ್ನು ಸಿಪಿಐ(ಂಎ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸುತ್ತದೆ. ಹೀಗೆ ಸತ್ತವರಲ್ಲಿ ಹೆಚ್ಚಿನವರು ಯುವಜನರು, ಡಾ|| ಅಂಬೇಡ್ಕರ್ ರವರ ಪ್ರತಿಮೆಯನ್ನು ಅಪವಿತ್ರಗೊಳಿಸಿದನ್ನು ಪ್ರತಿಭಟಿಸುತ್ತಿದ್ದ ಜನರ ಗುಂಪಿನ ಮೇಲೆ ಪೋಲೀಸರು ಈ ಹೇಯ ಕೃತ್ಯ ನಡೆಸಿದರು.


ದಲಿತ ಪ್ರತಿಭಟನಾಕಾರರ ಮೇಲೆ ನಡೆಸಿದ ಈ ಪೋಲೀಸ್ ಕಾರ್ಯಾಚರಣೆಯ ತೀವ್ರತೆ ಮತ್ತು ವೈಪರೀತ್ಯ ಶಿವಸೇನಾ ಸರಕಾರಕ್ಕೊಂದು ಕಳಂಕ. ಶಿವಸೇನೆ ದಲಿತ ಜನಗಳ ಹಕ್ಕುಗಳ ಬಗ್ಗೆ ಬಹಿರಂಗವಾಗಿಯೇ ವಿಷಕಾರುತ್ತಾ ಬಂದಿದೆ. ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ಬರ್ಬರ ಕಾರ್ಯಾಚರಣೆಯನ್ನು ಬಲವಾಗಿ ಪ್ರತಿಭಟಿಸಬೇಕು.

ಪೊಲಿಟ್‌ಬ್ಯೂರೋ ಈ ಗೋಳಿ ಬಾರನ್ನು ಕುರಿತಂತೆ ಒಂದು ನ್ಯಾಯಾಂಗ ತನಿಖೆ ನಡೆಸಬೇಕು ಹಾಗೂ ಗೋಳಿಬಾರಿಗೆ ಹೊಣೆಗಾರರಾದ ಪೋಲೀಸ್ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸುತ್ತದೆ"



ದಿಲ್ಲಿಯಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಮುಂಬೈ ಗೋಳೀಬಾರಿನ ವಿರುದ್ಧ ಪ್ರತಿಭಟಿಸುತ್ತಿದ್ದಾಗ ಪೋಲೀಸರ ಜಲಫಿರಂಗಿಯಿಂದಾಗಿ ದೃಷ್ಟಿ ಕಳಕೊಂಡ ಸಂಗಾತಿ

ಕಾ|| ನಲ್ಲಶಿವನ್ ಇನ್ನಿಲ್ಲ



ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ಸಿಪಿಐ(ಎಂ) ನ ಅತ್ಯುನ್ನತ ಪೊಲಿಟ್‌ಬ್ಯೂರೋದ ಸದಸ್ಯರೂ ಆದ ಕಾಂ|| ಎ.ನಲ್ಲಶಿವನ್ ಜುಲೈ 20 ರಂದು ಚೆನ್ನೈಯಲ್ಲಿ ನಿಧನರಾದರು. ಅವರಿಗೆ 76 ವರ್ಷವಾಗಿತ್ತು.

ಕಾಂಗ್ರೆಸ್ ಸಮಾಜವಾದಿ ಪಕ್ಷದ ಸದಸ್ಯರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ಕಾ|| ನಲ್ಲಶಿವನ್ ಸ್ವಾತಂತ್ರ್ಯ ಆಂದೋಲನದಲ್ಲಿ, ಸ್ವಾತಂತ್ರ್ಯಾನಂತರವೂ ಹಲವು ಬಾರಿ ಜೈಲು ವಾಸ ಅನುಭವಿಸಬೇಕಾಗಿ ಬಂತು. 1948-51 ರ ವೇಳೆಗೆ ಭೂಗತ ರಾಗಿಯೂ ಅವರು ಹೋರಾಟ ಮುಂದು ವರಿಸಿದರು. 1940 ರ ವೇಳೆಗೆ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ್ದ ಅವರು ತಮಿಳು ನಾಡಿನಲ್ಲಿ ಜವಳಿಕಾರ್ಮಿಕರ ಸಂಘಟನೆ ಗಾಗಿ ಶ್ರಮಿಸಿದರು. ತಮಿಳು ನಾಡಿನಲ್ಲಿ ಸಿಐಟಿಯುನ ಸಂಸ್ಥಾಪಕ ಕಾರ್ಯದರ್ಶಿ ಯಾಗಿದ್ದ ಅವರು ನಂತರ ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಮಿಕ ವರ್ಗದ ಪಕ್ಷವನ್ನು ಬೆಳೆಸುವಲ್ಲಿ ಶ್ರಮಿಸಿದರು.

ಮತ್ತೊಮ್ಮೆ ಪೆಟ್ರೋಲಿಯಂ ಬೆಲೆಯೇರಿಕೆ ಬಗ್ಗೆ



ಈಗ ಸರಕಾರ ತೈಲನಿಧಿ ಕೊರತೆಯ 24500 ಕೋಟಿ ರೂ.ಗಳಲ್ಲಿ 5500 ಕೋಟಿ ರೂ.ಗಳನ್ನು ತಾನೇ ಹೊತ್ತು 9000 ಕೋಟಿ ರೂ.ಗಳನ್ನಷ್ಟೇ ತುಂಬಿಸುವ ಬಗ್ಗೆ ಯೋಚಿಸುತ್ತಿದೆಯಂತೆ. ಒಳ್ಳೆಯದು, ಆದರೆ ಇದಕ್ಕೂ ಅದಕ್ಕೆ ಕಾಣುವ ದಾರಿ 'ಸ್ವಲ್ಪ ಪ್ರಮಾಣದಲ್ಲಿ' ಡೀಸೆಲ್ ಮತ್ತು ಅಡುಗೆ ಅನಿಲ ಬೆಲೆಯೇರಿಕೆಯ ದಾರಿ. ಈ ಬೆಲೆಯೇರಿಕೆಯೂ ಬೇಕಿಲ್ಲ ಎನ್ನುತ್ತಾರೆ ಪೆಟ್ರೋಲಿಯಂ ಬೆಲೆಯೇರಿಕೆಯ ವಿರುದ್ಧ ಹೋರಾಟದ ಮುಂಚೂಣಿಯಲ್ಲಿರುವ ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯ **ಸೀತಾರಾಂ ಯೆಚೂರಿ**

ಮನಸ್ಸಿದ್ದರೆ ಮಾರ್ಗ

ಸ್ವಲ್ಪ ತಣ್ಣಗಾದ ಮೇಲೆ ಮತ್ತೆ ಪೆಟ್ರೋಲಿಯಂ ಬೆಲೆಯೇರಿಕೆಯ ಬಗ್ಗೆ ಚರ್ಚೆ ಆರಂಭವಾಗಿದೆ. ಪ್ರಧಾನ ಮಂತ್ರಿಗಳು ಆಗಸ್ಟ್ ತಿಂಗಳ ಅಂತ್ಯದೊಳಗೆ ಬೆಲೆಯೇರಿಕೆ ಮಾಡುವುದಾಗಿ ಕನಿಷ್ಠ ಎರಡು ಬಾರಿ ಹೇಳಿದ್ದಾರೆ. ತೈಲ ನಿಧಿ ಕೊರತೆಯ ಬಹು ಪಾಲನ್ನು ಹಣಕಾಸು ಮಂತ್ರಾಲಯ ಹೊರುತ್ತದೆ ಎಂದೂ ಅದೇ ಉಸಿರಿನಲ್ಲಿ ಅವರು ಸಂಕೇತವನ್ನೂ ನೀಡಿದ್ದಾರೆ. ಯೋಜನಾ ಆಯೋಗದ ಸದಸ್ಯ ಅರ್ಜುನ್ ಸೇನ್‌ಗುಪ್ತಾ ನೇತೃತ್ವದ ಸಮಿತಿ ಯೆಂಬುದೊಂದು ಕೆಲವು ಸಲಹೆಗಳನ್ನು ನೀಡಿದೆ ಎಂದೂ ಪತ್ರಿಕೆಗಳಲ್ಲಿ ವರದಿಯಾಗಿದೆ.

ಸರಕಾರ ಈ ಕೆಳಗಿನ ದಾರಿ ಹಿಡಿಯುವ ಬಗ್ಗೆ ಯೋಚಿಸುತ್ತಿರುವಂತಿದೆ.

● ಈಗಾಗಲೇ ಹೇಳಿರುವಂತೆ ಮಾರ್ಚ್ 31, 1998 ರ ವೇಳೆಗೆ ತೈಲನಿಧಿ ಕೊರತೆ 24500 ಕೋಟಿ ರೂಗಳಾಗುವ ಅಂದಾಜು ಇದೆ. ಇದರಲ್ಲಿ 15500 ಕೋಟಿ ರೂ. ಇದುವರೆಗೆ ಆಗಿರುವುದು ಹಾಗೂ 9000 ಕೋಟಿ ರೂ. ಈ ವರ್ಷದ ಅಂತ್ಯದ ವರೆಗೆ ಸೇರುವಂತದ್ದು. ಅಕೌಂಟೆಂಟ್‌ಗಳ ಭಾಷೆಯಲ್ಲಿ 15500 ಕೋಟಿ ರೂ. 'ಸ್ಟಾಕ್' ಅಂದರೆ ಈಗಾಗಲೇ ದಾಸ್ತಾನಾಗಿರುವಂತದ್ದು. 9000 ಕೋಟಿ ರೂ. 'ಫ್ಲೋ' ಅಂದರೆ ಹರಿದು ಬರು ವಂತದ್ದು. ಹಣಕಾಸು ಇಲಾಖೆ ದಾಸ್ತಾನಿನ ಜವಾಬ್ದಾರಿ ವಹಿಸುತ್ತದೆ. ಮುಂದೆ ಹರಿದು ಬರುವಂತಹ ಕೊರತೆಯನ್ನು ಬೆಲೆಯೇರಿಕೆಯ ಮೂಲಕ ಸರಿ ಹೊಂದಿಸಲಾಗುತ್ತದೆ. ಅಂದರೆ 24500 ಕೋಟಿ ರೂ. ಗೆ ಬದಲಾಗಿ ಕೇವಲ 9000 ಕೋಟಿ ರೂ. ಪಡೆಯಲಷ್ಟೆ ಈಗ ತೈಲ ಬೆಲೆಯೇರಿಕೆ ಮಾಡಲಾಗುತ್ತದೆ. ಇದೇ ಸಮಗೊಂದು ಅಂದರೆ ಬೆಲೆಯೇರಿಸಬಾರದು, ಅದರಿಂದ ಜನಸಾಮಾನ್ಯರ ಮೇಲೆ ಅಭೂತಪೂರ್ವ ಹೊರೆ ಬೀಳುತ್ತದೆ, ತೈಲನಿಧಿ ಕೊರತೆಯನ್ನು ತುಂಬಿಸಲು ಪರ್ಯಾಯ ದಾರಿಗಳೂ ಇವೆ ಎಂದು ವಾದಿಸುತ್ತಿರು ವವರಿಗೆ ಗಮನಾರ್ಹ ವಿಜಯ.

ಆದರೂ ಉಳಿದಿರುವ ಪ್ರಶ್ನೆ

ಈ 9000 ಕೋಟಿ ರೂ. ಕೊರತೆಯನ್ನು ತುಂಬಿಸಲು ಬೇರೆದಾರಿಯೇ ಇಲ್ಲವೇ ಎಂಬ ಪ್ರಶ್ನೆಗೆ ಉತ್ತರ ನೀಡಲೇಬೇಕಾಗುತ್ತದೆ.

ಬೇರೆ ದಾರಿಯಿದೆ. ಈ 9000 ಕೋಟಿ ರೂ.ಗಳಲ್ಲಿ 1500 ಕೋಟಿ ರೂ. ರಸಗೊಬ್ಬರ ಉತ್ಪಾದನೆಗೆ ನೀಡುವ ಸಬ್ಸಿಡಿಯಿಂದಾಗಿ. ಇದನ್ನು ನಿಜವಾಗಿ ಹಣಕಾಸು ಇಲಾಖೆಯೇ ಹೊರಬೇಕು. ಏಕೆಂದರೆ ಈ ಸಬ್ಸಿಡಿ ಕೊಡುತ್ತಿರುವುದು ಸರಕಾರದ ಒಂದು ಧೋರಣೆಯ ಭಾಗವಾಗಿ. ಆಗ ಕೊರತೆ 7500 ಕೋಟಿ ರೂ. ಗೆ ಇಳಿಯುತ್ತದೆ. ಡೀಸೆಲ್‌ಗೆ ಲೀಟರ್‌ಗೆ ಎರಡು ರೂಪಾಯಿ ಹಾಗೂ ಅಡುಗೆ ಅನಿಲಕ್ಕೆ ಸಿಲಿಂಡರಿಗೆ 40 ರೂ. ಬೆಲೆಯೇರಿಸಿ ಇದನ್ನು ಸಂಗ್ರಹಿಸಬೇಕೆಂಬುದು ಸರಕಾರದ ಪ್ರಸ್ತಾಪ.

ಈಗಾಗಲೇ ಹಿಂದೆ ಮಾಡಿದಂತೆ ಈ ಬೆಲೆಯೇರಿಕೆಯೂ ಅನಗತ್ಯ. ಆದ್ಯತೆಯಿಲ್ಲದ ವಲಯಗಳಿಗೆ ನೈಸರ್ಗಿಕ ಅನಿಲದ ಬೆಲೆಗಳನ್ನು ತರ್ಕಬದ್ಧ ಗೊಳಿಸುವುದರಿಂದಲೇ 5000 ಕೋಟಿ ರೂ. ಬರುತ್ತವೆ. ಅಧಿಕೃತ ವಲಯಗಳಲ್ಲಿ ಹಲವರು ನಮ್ಮ ಲೆಕ್ಕ ಸರಿಯೇ ಎಂದು ಸಂದೇಹ ವ್ಯಕ್ತಪಡಿಸಿದರು. ಕೋಷ್ಟಕ-1 ರಲ್ಲಿ ಇದರ ಲೆಕ್ಕಾಚಾರವನ್ನು ಕೊಟ್ಟಿದೆ. ವಾಸ್ತವವಾಗಿ ಇದರಿಂದ ಬರುವ ಹಣ 5000 ಕೋಟಿ ರೂ.ಗಿಂತಲೂ ಹೆಚ್ಚು ಎಂಬುದನ್ನು ಈ ಕೋಷ್ಟಕದಲ್ಲಿ ಕಾಣಬಹುದು.

ಡೀಸೆಲ್ ಕಾರುಗಳ ಮೇಲೆ ಕರ

ಡೀಸೆಲ್ ಕಾರುಗಳ ಮೇಲೆ ವಿಶೇಷ ಕರ ಹಾಕಿ 1000 ಕೋಟಿ ರೂ. ಸಂಗ್ರಹಿಸಬಹುದು ಎಂದು ನಾವು ವಾದಿಸಿದ್ದೆವು. ಈ ಬಗ್ಗೆಯೂ ಕೆಲವರು ಗೇಲಿ ಮಾಡಿದ್ದಾರೆ. ವಾಸ್ತವವಾಗಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲಿನ ಅಂತರದಿಂದಾಗಿ ಡೀಸೆಲ್ ಕಾರು ಮಾಲಕರು ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ. ಡೀಸೆಲ್ ಕಾರುಗಳ ಆಯ್ಕೆ ಇದರಿಂದಾಗಿ ಎಷ್ಟು ಆಕರ್ಷಕವಾಗಿದೆಯೆಂದರೆ ಹಲವು ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಮಾರಾಟಕ್ಕೆಂದೇ ಡೀಸೆಲ್ ಕಾರುಗಳನ್ನು ಉತ್ಪಾದಿಸುತ್ತಿದ್ದಾರೆ. ನಾವು ಸೂಚಿಸಿದ ಕರ ತೆತ್ತ ನಂತರವೂ ಡೀಸೆಲ್ ಮಾಲಕರಿಗೆ ಒಟ್ಟು 15 ವರ್ಷಗಳಲ್ಲಿ 50000 ಕೋಟಿ ರೂಗಳ ಲಾಭ ಉಳಿಯುತ್ತದೆ. ಪ್ರಸಕ್ತ ವರ್ಷದ ಉತ್ಪಾದನೆಯ ಆಧಾರದಲ್ಲೇ 2500 ರಿಂದ 4500 ಕೋಟಿ ರೂ.ಗಳಷ್ಟು ಆದಾಯವನ್ನು ಈ ವಿಶೇಷ ಕರದಿಂದ ಸಂಗ್ರಹಿಸಲು ಸಾಧ್ಯ. (ಇದರ ಲೆಕ್ಕಾಚಾರಕ್ಕೆ ಕೋಷ್ಟಕ-2 ನೋಡಿ)

ಇದಲ್ಲದೆ ಸರಕಾರ ಈಗಿರುವ ಎಲ್ಲಾ ಡೀಸೆಲ್ ಕಾರುಗಳಿಗೆ ಹಾಗೂ ಕಾರು ಎಂದು ಅನಿಸಿಕೊಳ್ಳುತ್ತಿರುವ ವಾಹನಗಳಿಗೆ ಈ ಕೆಳಗಿನಂತೆ ಏಕ ಸಮಯದ ಕರ ವಿಧಿಸಬಹುದು.

ಒಂದು ವರ್ಷವಾಗದ ವಾಹನಗಳಿಗೆ ರೂ. 150000

1-3 ವರ್ಷ ಹಳೆಯದಾದ ವಾಹನಗಳಿಗೆ ರೂ.100000

3-5 ವರ್ಷ ಹಳೆಯದಾದ ವಾಹನಗಳಿಗೆ ರೂ.75,000

5-10 ವರ್ಷಗಳ ಹಳೆಯದಾದ ವಾಹನಗಳಿಗೆ ರೂ. 50,000

ಈಗಾಗಲೇ ಹೇಳಿದಂತೆ ಸಾರ್ವಜನಿಕ ಸಾರಿಗೆಗೆಂದು ಕಮ್ಮಿಬೆಲೆಯಲ್ಲಿ ಕೊಡುತ್ತಿರುವ ಡೀಸೆಲನ್ನು ಖಾಸಗೀ ವಾಹನಗಳಿಗೆ ಬಳಸದಂತೆ ತಡೆಯಲು ಈ ಕೆಳಗಿನ ಕ್ರಮಗಳನ್ನು ಸರಕಾರ ಕೈಗೊಳ್ಳಬಹುದು.

1.ಸವಕಳಿ ಅಥವಾ Depriceation ಪ್ರಮಾಣವನ್ನು 10% ಕ್ಕೆ ಇಳಿಸಬೇಕು.

2. ರಿಜಿಸ್ಟ್ರೇಶನ್ ದರಗಳನ್ನು ದ್ವಿಗುಣಗೊಳಿಸುವುದು.

3. ಇನ್ಸೂರೆನ್ಸ್ ಪ್ರೀಮಿಯಂನ್ನು ಮೂರು ಪಟ್ಟು ಮಾಡುವುದು.

4. ಈಗಿರುವ ಇಂತಹ ವಾಹನಗಳು ಒಂದು ಅಥವಾ ಎರಡು ಜಿಲ್ಲೆಗಳಿಗೆ ಮಾತ್ರವೇ ಸಂಚರಿಸುವಂತೆ ಮಾಡುವುದು. ದೂರದ ಪ್ರಯಾಣ ಮಾಡಬೇಕಾದಾಗಲೆಲ್ಲಾ ಅವು ಪರ್ಮಿಟ್ ತಗೊಳ್ಳಬೇಕು ಎಂದು ವಿಧಿಸುವುದು.

ಕೇವಲ ಈ ಎರಡು ಪ್ರಸ್ತಾವಗಳನ್ನು ಸ್ವೀಕರಿಸಿದರೂ 9000 ಕೋಟಿ ರೂಗಳ ಕೊರತೆಯನ್ನು ತುಂಬಿಸಬಹುದು. ಆದ್ದರಿಂದ ಪೆಟ್ರೋಲಿಯಂ ಬೆಲೆಗಳನ್ನು ಏರಿಸುವ ಅಗತ್ಯವೇ ಇಲ್ಲ.

ಈ ಲೇಖನವನ್ನು ಮುಗಿಸುವ ಮೊದಲು ಇನ್ನೊಂದು ಅಂಶವನ್ನು ಚರ್ಚಿಸಬೇಕಾಗಿದೆ. ಹಣಕಾಸು ಇಲಾಖೆ 15500 ಕೋಟಿ ರೂ. 'ದಾಸ್ತಾನು' ಹೊರೆ ಹೊರುವ ಬಗ್ಗೆ ಭಾರೀ ಬೊಬ್ಬೆ ಎಬ್ಬಿಸಲಾಗುತ್ತಿದೆ. ಇದರಿಂದ ಹಣಕಾಸು ಕೊರತೆ ಹೆಚ್ಚಿ ಹೊಸ ಆರ್ಥಿಕ ನೀತಿಯ ಗುರುಗಳ ಅಂದರೆ ಐಎಂಎಫ್-ವಿಶ್ವಬ್ಯಾಂಕ್‌ನ ಕ್ರೋಧಕ್ಕೆ ಪಾತ್ರವಾಗಬೇಕಾಗುತ್ತದೆ, ಅಲ್ಲದೆ ಹಣದುಬ್ಬರವೂ ಉಂಟಾಗುತ್ತದೆ ಎಂಬ ವಾದ ಹೂಡಲಾಗುತ್ತಿದೆ. ಈ ಸಂದೇಹಗಳು ಅರ್ಥಹೀನ. ಏಕೆಂದರೆ ಪೆಟ್ರೋಲಿಯಂ ಕಂಪನಿಗಳಿಗೆ ಕೊಡಬೇಕಾದ ಈ ಹಣವನ್ನು ಹಣದ ರೂಪದಲ್ಲಿ ಕೊಡುತ್ತಿಲ್ಲ. ಬದಲಾಗಿ ಸರಕಾರಿ ಸೆಕ್ಯೂರಿಟಿಗಳ ರೂಪದಲ್ಲಿ ಕೊಡಲಾಗುತ್ತದೆ. ಇದರಿಂದ ಈ ಪೆಟ್ರೋಲಿಯಂ ಕಂಪನಿಗಳಿಗೆ ಇನ್ನು ಮುಂದೆ ಸಾಲ ಪಡೆಯಲು ಹೆಚ್ಚಿನ ಅವಕಾಶ ಒದಗುತ್ತದೆ. ಆದರೆ ಹಣದ ಪೂರೈಕೆಯಲ್ಲಿ ಒಂದು ಪೈಸೆಯ ಹೆಚ್ಚಳವೂ ಆಗುವುದಿಲ್ಲ. ಅಂದರೆ ಹಣಕಾಸು ಕೊರತೆ ಹೆಚ್ಚುವುದಿಲ್ಲ. ಈ ಕ್ರಮದಿಂದ ಆಗುವ ಪರಿಣಾಮವೆಂದರೆ ಸರಕಾರದ ಆಂತರಿಕ ಸಾಲ ಹೆಚ್ಚುತ್ತದಷ್ಟೆ. ಆದ್ದರಿಂದ ಹಣಕಾಸು ಕೊರತೆ ಹೆಚ್ಚುತ್ತದೆ. ಹಣದುಬ್ಬರ ಉಂಟು ಮಾಡುತ್ತದೆ ಎಂಬುದೆಲ್ಲಾ ಬುಡವಿಲ್ಲದ ಭಯಗಳಷ್ಟೆ.

ಆದ್ದರಿಂದ ಸಂಯುಕ್ತ ರಂಗ ಸರಕಾರ ಈ ಪ್ರಶ್ನೆಯನ್ನು ಜನಗಳ ಮೇಲೆ ಇನ್ನಷ್ಟು ಹೊರೆ ಹಾಕದೆ ಪರಿಹರಿಸುವ ಶಕ್ತಿ, ಸಾಮರ್ಥ್ಯ ಮತ್ತು ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸುವುದು ಅತ್ಯಗತ್ಯ. ಇದು ಹೇಗೆ ಸಾಧ್ಯ ಎಂಬುದನ್ನು ನಾವು ತೋರಿಸಿದ್ದೇವೆ. ಈ ಸಾಧ್ಯತೆಯನ್ನು ವಾಸ್ತವಗೊಳಿಸದಿದ್ದರೆ ಜನಗಳು ಸಹಿಸುವುದಿಲ್ಲ.

○

ಕೋಷ್ಟಕ - 1

ನೈಸರ್ಗಿಕ ಅನಿಲದ ಬೆಲೆಗಳನ್ನು ತರ್ಕಬದ್ಧಗೊಳಿಸುವುದು ಹೇಗೆ?



1. ಒಟ್ಟು ನೈಸರ್ಗಿಕ ಅನಿಲದ ಪೂರೈಕೆ ವರ್ಷಕ್ಕೆ (ಒ.ಎನ್.ಟಿ.ಸಿ. ಲೆಕ್ಕಾಚಾರದ ಪ್ರಕಾರ) — 2 ಕೋಟಿ ಮೆಟ್ರಿಕ್ ಟನ್ (ಅಥವಾ 20 ಶತಕೋಟಿ ಘನಮೀಟರ್)

2. ಒ.ಎನ್.ಟಿ.ಸಿ. ಪ್ರಕಾರ ಇದರಲ್ಲಿ 20% ಆದ್ಯತೆಯಿಲ್ಲದ ವಲಯಕ್ಕೆ ಕೊಡುತ್ತಿದ್ದಾರೆ. ಈ ಆದ್ಯತೆಯಿಲ್ಲದ ವಲಯದಲ್ಲಿ ಬಳಕೆ — ವರ್ಷಕ್ಕೆ 40 ಲಕ್ಷ ಮೆಟ್ರಿಕ್ ಟನ್

3. ನೈಸರ್ಗಿಕ ಅನಿಲದಲ್ಲಿನ ಶಾಖದ ಅಂಶ ಕೆ.ಜಿ.ಗೆ 9000 ಕಿ.ಕ್ಯಾಲರಿ ಹಾಗೂ ದ್ರವ ಪೆಟ್ರೋಲಿಯಂ ಅನಿಲ(ಎಲ್.ಪಿ.ಜಿ)ದಲ್ಲಿನ ಶಾಖಾಂಶ ಕೆ.ಜಿ.ಗೆ 11700 ಕಿ.ಕ್ಯಾಲರಿ ಯಾಗಿರುವಾಗ ಆದ್ಯತೆಯಿಲ್ಲದ ವಲಯದಲ್ಲಿ ನೈಸರ್ಗಿಕ ಅನಿಲದ ಬಳಕೆಯ ಪ್ರಮಾಣಕ್ಕೆ ಸರಿಸಮನಾದ ಎಲ್.ಪಿ.ಜಿ. ಪ್ರಮಾಣ — 30,77,000 ಮೆಟ್ರಿಕ್ ಟನ್ (9000/11700X40 ಲಕ್ಷ)

4. ಎಲ್.ಪಿ.ಜಿ.(ಮೆಟ್ರಿಕ್ ಟನ್ 23000 ರೂ.) ಹಾಗೂ ನೈಸರ್ಗಿಕ ಅನಿಲ(2500 ರೂ.) ಬೆಲೆಗಳಲ್ಲಿನ ವ್ಯತ್ಯಾಸ — 23000 - 2500 ಅಂದರೆ 20500 ಪ್ರತಿ ಮೆಟ್ರಿಕ್ ಟನ್‌ಗೆ

5. ಇದರಿಂದಾಗಿ ನೈಸರ್ಗಿಕ ಅನಿಲ ಬಳಸುವವರಿಗೆ ಇಂಧನದ ಖರ್ಚಿನಲ್ಲಿ ಪಡೆಯುತ್ತಿರುವ ಪ್ರಯೋಜನ — 307700X20,500 = 6308 ಕೋಟಿ ರೂ.

ಅಂದರೆ ಆದ್ಯತೆಯಿರದ ವಲಯಗಳಲ್ಲಿ ನೈಸರ್ಗಿಕ ಅನಿಲದ ಬೆಲೆಗಳಲ್ಲಿನ ಸಬ್ಸಿಡಿಯನ್ನು ತೆಗೆದು ಅದನ್ನು ತರ್ಕಬದ್ಧಗೊಳಿಸುವುದರಿಂದ 6308 ಕೋಟಿ ರೂ.ಗಳನ್ನು ಗಳಿಸಬಹುದು.



ಕೋಷ್ಟಕ - 2 ಡೀಸೆಲ್‌ಕಾರುಗಳ ಮೇಲೆ ಎಷ್ಟು ದರ ಹಾಕಬೇಕು?

■ ಒಂದು ಡೀಸೆಲ್ ಕಾರು ವರ್ಷಕ್ಕೆ 30,000 ಕಿ.ಮೀ. ಸರಾಸರಿ ಚಲಿಸುತ್ತದೆ. ಸರಾಸರಿ 10 ಕಿ.ಮಿ.ಗೆ 1 ಲೀಟರ್ ಡೀಸೆಲ್ ಬಳಸುತ್ತದೆ.
ಹಾಗಿದ್ದರೆ ಪ್ರತಿ 15 ದಿನಗಳಲ್ಲಿ ಅದು ಬಳಸುವ ಡೀಸೆಲ್ 125 ಲಿ.

■ 125 ಲೀಟರ್ ಡೀಸೆಲ್‌ನಲ್ಲಿ ಸರಕಾರದ ಸಬ್ಸಿಡಿ ಅಂಶ 1000 ರೂ.
(ಅಂದರೆ ಪ್ರತಿ ಡೀಸೆಲ್‌ಕಾರಿಗೆ ಪ್ರತಿ 15 ದಿನಗಳಿಗೆ ಸರಕಾರ 1000 ರೂ. ಸಬ್ಸಿಡಿ ನೀಡುತ್ತದೆ!)

■ **ತಳಮೌಲ್ಯ ಅಥವಾ ಕನಿಷ್ಠ ಮೌಲ್ಯ**

ಒಂದು ಡೀಸೆಲ್‌ಕಾರು ಭಾರತದಲ್ಲಿ ಸರಾಸರಿ 15 ವರ್ಷ ಕೆಲಸ ಮಾಡುತ್ತದೆ. ಒಬ್ಬ ಡೀಸೆಲ್ ಕಾರು ಬಳಸುವಾತ 15 ವರ್ಷಗಳ ವರೆಗೆ ಪ್ರತಿ 15 ದಿನಕ್ಕೆ 1000 ರೂ. ಸಬ್ಸಿಡಿ ಲಾಭ ಪಡೆಯುತ್ತಿದ್ದರೆ, ಅದನ್ನು ನಿರ್ದಿಷ್ಟ ಬಡ್ಡಿ ದರದಲ್ಲಿ ಡಿಸ್ಕೌಂಟ್ ಮಾಡಿ ಅದರಪ್ರಸಕ್ತ ಮೌಲ್ಯವನ್ನು ಕಂಡು ಹಿಡಿಯಬಹುದು. ಸರಕಾರದ ಸೆಕ್ಯುರಿಟಿಗಳಿಗೆ ಕೊಡುವ 13.5% ದರದಲ್ಲಿ.

ಇದರ ಪ್ರಸಕ್ತ ಮೌಲ್ಯ — ರೂ. 174174

(ಅಂದರೆ ಇಂದು ಒಬ್ಬ ಬಳಕೆದಾರ 174174 ರೂ. ತೆತ್ತರೆ ಮುಂದಿನ 15 ವರ್ಷಗಳ ಕಾಲ ಪ್ರತಿ 15 ದಿನಗಳಿಗೆ 1000 ರೂ. ನಂತೆ ಪ್ರಯೋಜನ ಪಡೆಯಬಹುದು)

ಒಂದು ಡೀಸೆಲ್ ಕಾರಿನ ಸರಾಸರಿ ಆಯಸ್ಸು 10 ವರ್ಷ ಎಂದಿಟ್ಟುಕೊಂಡರೆ ಪ್ರಸಕ್ತ ಮೌಲ್ಯ ರೂ. 147087

ಇದು ಒಬ್ಬ ಡೀಸೆಲ್ ಕಾರ್ ಬಳಕೆದಾರ ಅನುಭವಿಸುವ ಪ್ರಯೋಜನದ ಕನಿಷ್ಟ ಮೌಲ್ಯ.

■ **ಗರಿಷ್ಠ ಮೌಲ್ಯ**

ಡೀಸೆಲ್ ಕಾರ್ ಬಳಕೆದಾರ ಸರಕಾರದ ಸಬ್ಸಿಡಿಯಿಂದ ಪಡೆಯುವ ಗರಿಷ್ಠ ಮೌಲ್ಯವನ್ನು ಲೆಕ್ಕ ಹಾಕಲು ಇದಕ್ಕೆ ಸರಕಾರ ತೆರುವ ಬೆಲೆಯನ್ನು ಲೆಕ್ಕಾ ಹಾಕಬಹುದು. ಅದೇ ವಾಹನವನ್ನು ಡೀಸೆಲ್ ಬದಲು ಪೆಟ್ರೋಲಿನಲ್ಲಿ ನಡೆಸಿದ್ದರೆ ವರ್ಷಕ್ಕೆ ಸರಾಸರಿ 25000 ಕಿ.ಮಿ. ಬಳಕೆ ಹಾಗೂ ಸರಾಸರಿ ಲೀಟರಿಗೆ 8 ಕಿ.ಮಿ. ಪೆಟ್ರೋಲ್ ಬಳಕೆದರದಲ್ಲಿ ಇವನ್ನೆಲ್ಲಾ ಲೆಕ್ಕ ಹಾಕೋಣ.

15 ದಿನಗಳಲ್ಲಿ ಪೆಟ್ರೋಲ್ ಬಳಕೆ 130 ಲಿ. ಇದರಿಂದ ಸರಕಾರ ಗಳಿಸಬಹುದಾಗಿದ್ದ ಆದಾಯ 1300 ರೂ.

15 ವರ್ಷಗಳ ಈ ಹೆಚ್ಚಿನ ಆದಾಯ ಬರುವಂತಿದ್ದರೆ ಅದರ ಪ್ರಸಕ್ತ ಮೌಲ್ಯ — ರೂ. 22,5000.

10 ವರ್ಷಗಳಲ್ಲಾದರೆ ಅದರ ಪ್ರಸಕ್ತ ಮೌಲ್ಯ — ರೂ. 193000

ಇದೀಗ ಖಾಸಗಿ ವಾಹನಗಳಲ್ಲಿ ಪೆಟ್ರೋಲ್ ಬದಲು ಡೀಸೆಲ್ ಬಳಕೆಯಿಂದ ಸರಕಾರಕ್ಕಾಗುತ್ತಿರುವ ನಷ್ಟದ ಮೌಲ್ಯ.

■ ಡೀಸೆಲ್ ವಾಹನಗಳಿಗೆ ಹಾಕುವ ವಿಶೇಷ ಕರ ಈ ಗರಿಷ್ಠ ಮೌಲ್ಯ ಮತ್ತು ಕನಿಷ್ಠ ಮೌಲ್ಯ ಅಥವಾ ತಳಮಟ್ಟದ ನಡುವೆ ಇರಬೇಕು. ಕನಿಷ್ಠ ಮೌಲ್ಯಕ್ಕಿಂತ ಅಥವಾ ತಳಮಟ್ಟಕ್ಕಿಂತ ಅದು ಕಮ್ಮಿಯಾದರೆ ಖಾಸಗಿ ವಾಹನಗಳಿಗೆ ಸಬ್ಸಿಡಿ ಮುಂದುವರಿಸಲಾಗುತ್ತಿದೆ ಎಂದೇ ಅರ್ಥವಾಗುತ್ತದೆ.

■ ಹತ್ತಕ್ಕಿಂತಲೂ ಹೆಚ್ಚಿನ ಬ್ರಾಂಡಿನ ಡೀಸೆಲ್ ಕಾರುಗಳು ಹಾಗೂ ಕಾರಿನ ಹೆಸರಿನ ವಾಹನಗಳು ಈಗ ಮಾರುಕಟ್ಟೆಯಲ್ಲಿವೆ. 1994-97 ರ ನಡುವೆ ಇಂತಹ 4 ಲಕ್ಷ ಕಾರುಗಳ ಮಾರಾಟವಾಗಿದೆ. 1996-97 ರಲ್ಲಿ 1.60 ಲಕ್ಷ ಇಂತಹ ಕಾರುಗಳ ಉತ್ಪಾದನೆಯಾಗಿದೆ.

■ ಇದಲ್ಲದೆ ಹಳೆಯ ಪೆಟ್ರೋಲ್ ಕಾರ್‌ಗಳನ್ನು ಬಜಾಜ್ ಮೆಟಾಡೋರ್, ಕಿರ್ಲೋಸ್ಕರ್, ಬಿ.ಎಂ.ಸಿ. ನಿಸ್ಸಾನ್, ಇಸುಝು ಮೊದಲಾದ ಡೀಸೆಲ್ ಯಂತ್ರಗಳನ್ನು ಅಳವಡಿಸಿ ಡೀಸೆಲ್ ಕಾರುಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಇವುಗಳ ಅಂದಾಜು ಸಂಖ್ಯೆ 1996-97 ರಲ್ಲಿ 15000

■ ಈಗ ಭಾರತದಲ್ಲಿ ಓಡಾಡುತ್ತಿರುವ ಡೀಸೆಲ್ ಕಾರುಗಳು ಅಥವಾ ಕಾರಿನ ಸ್ವರೂಪದ ವಾಹನಗಳ ಸಂಖ್ಯೆ — 10 ಲಕ್ಷ.

■ ಇವುಗಳು ಪ್ರತಿವರ್ಷದ ಡೀಸೆಲ್ ಸಬ್ಸಿಡಿಯಿಂದ ಪಡೆಯುತ್ತಿರುವ ಪ್ರಯೋಜನ : — 24 ಶತಕೋಟಿ ರೂ.

■ 2 ಲಕ್ಷ ಡೀಸೆಲ್‌ಕಾರು ಅಥವಾ ಕಾರಿನ ಸ್ವರೂಪದ ವಾಹನಗಳಿಗೆ ಇಂತಹ ಒಂದು ಕರ ವಿಧಿಸಿದರೆ ಸರಕಾರ ಸಂಗ್ರಹಿಸಬಹುದಾದ ವಾರ್ಷಿಕ ಆದಾಯ ರೂ. 2900 ಕೋಟಿಯಿಂದ ರೂ. 4500 ಕೋಟಿ ರೂ.ಗಳವರೆಗೆ.

ಈಗ ಓಡಾಡುತ್ತಿರುವ ಡೀಸೆಲ್ ಕಾರುಗಳು

ಕಾರಿನ ಬ್ರಾಂಡ್	ತಯಾರಕರು
ಅಂಬಾಸಿಡರ್ ಡೀಸೆಲ್	ಹಿಂದೂಸ್ಥಾನ್ ಮೋಟಾರ್ಸ್
ಟ್ರೆಕ್ಕರ್	ಹಿಂದೂಸ್ಥಾನ್ ಮೋಟಾರ್ಸ್
ಪ್ರೀಮಿಯರ್ 137D	ಪ್ರೀಮಿಯರ್-ಅಟೋ ಮೊಬೈಲ್
ಪ್ರೀಮಿಯರ್ 138D	ಪಿ.ಎ.ಎಲ್.ಪ್ಯೂಗೋ ಲಿ.
ಪ್ಯೂಗೋ 309D	ಪಿ.ಎ.ಎಲ್. ಪ್ಯೂಗೋ ಲಿ.
ಕಮಾಂಡರ್	ಮಹಿಂದ್ರಾ ಅಂಡ್ ಮಹೀಂದ್ರ
ಆರ್ಮಡಾ	ಮಹೀಂದ್ರಾ ಅಂಡ್ ಮಹೀಂದ್ರಾ
ಟಾಟಾ ಸುಮೋ	ಟೆಲ್ಕೋ
ಟಾಟಾ ಸಿಯಾರಾ	ಟೆಲ್ಕೋ
ಟಾಟಾ ಎಸ್ಟೇಟ್	ಟೆಲ್ಕೋ
ಟಾಟಾ 207ಟೆಲ್ಕೋ	
ಫೋರ್ಡ್ ಎಸ್ಕೋರ್ಟ್ ಡೀಸೆಲ್	ಮಹೀಂದ್ರ ಫೋರ್ಡ್ ಲಿ.
ಮರ್ಸಿಡಿಸ್ 250D	ಎಂ.ಬಿ.ಐ.ಎಲ್

ಮುಂದೆ ಬರಲಿರುವ ಬ್ರಾಂಡುಗಳು

ಒಪೆಲ್ ಅಸ್ಟ್ರಾ ಡೀಸೆಲ್	ಜನರಲ್ ಮೋಟಾರ್ಸ್ ಇಂಡಿಯಾ ಲಿ.
ಟಾಟಾ ಇಂಡಿಕಾ ಡೀಸೆಲ್	ಟೆಲ್ಕೋ
ಮಾರುತಿ ಝೆನ್ ಡೀಸೆಲ್	ಮಾರುತಿ ಉದ್ಯೋಗ್ ಲಿ.

ಮಂಡ್ಯದಲ್ಲಿ ಪ್ರಥಮ ಸಿಐಟಿಯು ಸಮ್ಮೇಳನ

ಮಂಡ್ಯ ಜಿಲ್ಲಾ ಸಿಐಟಿಯು ಪ್ರಥಮ ಸಮ್ಮೇಳನವು ಕೆ.ಎಂ.ದೊಡ್ಡಿಯ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರ ಸಂಘದ ಕಛೇರಿಯಲ್ಲಿ ಜುಲೈ 4-5 ರಂದು ನಡೆಯಿತು. ಸಮ್ಮೇಳನವನ್ನು ಉದ್ಘಾಟಿಸಿ ಸಿಐಟಿಯು ರಾಜ್ಯಾಧ್ಯಕ್ಷರಾದ ಸೂರ್ಯನಾರಾಯಣ ರಾವ್ ಮಾತನಾಡುತ್ತಾ ಕಾರ್ಮಿಕರನ್ನು ಭಾಷೆ ಆಧಾರದಲ್ಲಿ ರಾಜಕೀಯ ಮಾಡಲು ಕೆಲವು ರಾಜಕೀಯ ಪಕ್ಷಗಳು ಪ್ರಯತ್ನಿಸುತ್ತವೆ ಎಂದು ಹೇಳಿದರು. ಸ್ವಾತಂತ್ರ್ಯ ಬಂದು 50 ವರ್ಷವಾದರೂ ಗ್ರಾಮಾಂತರ ಪ್ರದೇಶಕ್ಕೆ ಕುಡಿಯುವ ನೀರು, ರಸ್ತೆ, ಆಸ್ಪತ್ರೆ ಇಲ್ಲದಂತಾಗಿದೆ ಎಂದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ|| ವಿ.ಜೆ.ಕೆ.ನಾಯರ್ ಮಾತನಾಡಿ, ಸಿಐಟಿಯು ಸಮಾಜದ ಹಿತ ದೃಷ್ಟಿಯಿಂದ ಕೆಲಸ ಮಾಡಬೇಕಾದರೆ ಕಾರ್ಮಿಕ ನಾಯಕರುಗಳಿಗೆ ತ್ಯಾಗ ಮನೋಭಾವ ಬೆಳೆಯಬೇಕೆಂದರು. ಸಮಾಜದ ಬದಲಾವಣೆಗೆ ಸಿಐಟಿಯುವನ್ನು ಗಟ್ಟಿಗೊಳಿಸಬೇಕೆಂದರು. ಸಮಾರಂಭದಲ್ಲಿ ಕಾ|| ಮೋಹನ್ ಕುಮಾರ್, ವರಲಕ್ಷ್ಮಿ, ಜಿ.ರಾಮಕೃಷ್ಣ ಉಪಸ್ಥಿತರಿದ್ದರು. ಸಮ್ಮೇಳನದ ಮೊದಲ ದಿನ ಅಧ್ಯಯನ ಶಿಬಿರ ನಡೆಯಿತು. ಸಮ್ಮೇಳನದಲ್ಲಿ ಬೀಡಿ ಕಾರ್ಮಿಕ ರು, ಸಕ್ಕರೆ ಕಾರ್ಖಾನೆ ಕಾರ್ಮಿಕರು, ಗ್ರಾಸೈಟ್ ಕಾರ್ಖಾನೆ ಕಾರ್ಮಿಕರು, ಪವರ್‌ಲೂಂ, ಅಂಗ ನವಾಡಿ ಕಾರ್ಯಕರ್ತರು ಭಾಗವಹಿಸಿದ್ದರು.

ಸಮ್ಮೇಳನವು ಕೆಲವು ನಿರ್ಣಯಗಳನ್ನು ಅಂಗೀಕರಿಸಿತು.

1. ಜಿಲ್ಲೆಯಾದ್ಯಂತ ಇರುವ ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ಕೂಲಿ ಜಾರಿಗಾಗಿ ಒತ್ತಾಯ.
2. ರೈತರಿಗೆ ಸಮರ್ಪಕ ಬೆಲೆ, ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕೆ ಒತ್ತಾಯ.
3. ಕಾರ್ಮಿಕರ ಮೇಲೆ ನಡೆಯುತ್ತಿರುವ ದೌರ್ಜನ್ಯಕ್ಕೆ ಖಂಡನೆ.

ಜಿಲ್ಲೆಯಾದ್ಯಂತ ನಡೆಯುತ್ತಿರುವ ದಲಿತ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ಖಂಡಿಸಿ ಇನ್ನೂ ಮುಂತಾದ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ಸಮ್ಮೇಳನ ಜಿಲ್ಲೆಗೆ ನೂತನ ಸಮಿತಿಯನ್ನು ಆಯ್ಕೆಮಾಡಿತು. ಅಧ್ಯಕ್ಷರಾಗಿ ಎನ್.ಶಂಕರಯ್ಯ, ಉಪಾಧ್ಯಕ್ಷರು: ಜಿ.ರಾಮಕೃಷ್ಣ, ಬೋರಯ್ಯ, ಪ್ರಧಾನ ಕಾರ್ಯದರ್ಶಿ; ಹನುಮಂತು, ಸಹಕಾರ್ಯದರ್ಶಿ : ಸಮೀರ ಪರ್ವಿನ್ ತಾಜ್, ಖಜಾಂಚಿ; ಕೆ.ಬಿ.ಜಯ ಶೇಖರಪ್ಪ ಅಲ್ಲದೆ 14 ಜನರ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ವಿದ್ಯುತ್ ಬೆಲೆ ಏರಿಕೆಗೆ ಸಿಪಿಐ(ಎಂ) ಪ್ರತಿಭಟನೆ

ಉಡುಪಿ: ಕರ್ನಾಟಕ ರಾಜ್ಯ ವಿದ್ಯುತ್ ಬೆಲೆ ಏರಿಸಿರುವುದನ್ನು ವಿರೋಧಿಸಿ ಉಡುಪಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕೆ.ಇ.ಬಿ.ಗೆ ಬೃಹತ್ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಹೋಗಿ ಪ್ರತಿಭಟನೆ ಸಲ್ಲಿಸಿತು. ಸಿಪಿಐ(ಎಂ) ಪಕ್ಷದ ಉಡುಪಿ ತಾಲ್ಲೂಕು ಸಮಿತಿ ಕಾರ್ಯದರ್ಶಿ ಪಿ.ವಿಶ್ವನಾಥ ರೈಯವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತಾ ರಾಜ್ಯ ಸರಕಾರವು ಒಂದು ವರ್ಷದಲ್ಲಿ ಎರಡು ಬಾರಿ ವಿದ್ಯುತ್ ದರ ಏರಿಸಿದೆ. ವಿದೇಶಿ ಕಂಪನಿಯಾದ ಕೊಜೆಂಟ್ರಿಕ್ಸ್ ಮುಂದಿನ ದಿನಗಳಲ್ಲಿ ಉತ್ಪಾದನೆ ಆರಂಭಿಸುವಾಗ ನಮ್ಮ ರಾಜ್ಯ ಸರಕಾರಕ್ಕೆ ಈಗಿನ ಒಪ್ಪಂದಕ್ಕಿಂತಲೂ ಅಧಿಕ ಬೆಲೆಗೆ ಮಾರಾಟ ಮಾಡಲಿದೆ. ಅದರ ಪೂರ್ವಭಾವಿಯಾಗಿ ಈಗಿನಿಂದಲೇ ದರವನ್ನು ಹಂತಹಂತವಾಗಿ ಏರಿಸುತ್ತಾ ಬಂದರೆ ಮುಂದೆ ಪ್ರತಿಭಟನೆ ಬರದೆ ಅನುಕೂಲವಾಗಬಹುದೆನ್ನುವ ಹಂಚಿಕೆಯಾಗಿದೆ. ದೊಡ್ಡ ಉದ್ದಿಮೆದಾರರು ಲಕ್ಷಗಟ್ಟಲೆ ಬಿಲ್ ಬಾಕಿ ಮಾಡಿದರೂ ಅವರ ವಿರುದ್ಧ ಕ್ರಮ ಕೈಗೊಳ್ಳದ ಕೆ.ಇ.ಬಿ. ಜನಸಾಮಾನ್ಯರು ಬಾಕಿಮಾಡಿದ ಎಷ್ಟೆ ಸಣ್ಣ ಮೊತ್ತವಾಗಿದ್ದರೂ ಕೂಡಲೇ ಕನೆಕ್ಷನ್ ತೆಗೆದುಬಿಡುತ್ತಾರೆ. ನಮ್ಮ ಪಕ್ಷವು ಸರಕಾರದ ಜನ ವಿರೋಧಿ ನೀತಿಗಳನ್ನು ಪ್ರತಿಭಟಿಸುವ ವ್ಯಾಪಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದರು.

ಸುಮಾರು ಮುನ್ನೂರಕ್ಕೂ ಅಧಿಕ ಸಂಖ್ಯೆಯಲ್ಲಿ ಕಾರ್ಮಿಕರು, ಸಾರ್ವಜನಿಕರು ಮೆರವಣಿಗೆಯಲ್ಲಿ ಕೆ.ಇ.ಬಿ.ಗೆ ಬಂದು ಪ್ರತಿಭಟನೆಯ ಘೋಷಣೆಗಳನ್ನು ಹಾಕಿ ಕೆ.ಇ.ಬಿ. ಅಧಿಕಾರಿಗಳ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು. ಈ ಮೆರವಣಿಗೆ ನೇತೃತ್ವವನ್ನು ಎನ್.ಸಾಧು ಅಮೀನ್, ಸಂಜೀವ ನಾಯಕ್, ದೋಗು ಸುವರ್ಣ, ಗುರುರಾಜ ಸೆಟ್ಟಿಗಾರ್, ನಾಗರಾಜ ಆಚಾರಿ ಇವರು ವಹಿಸಿದ್ದರು.

ಬಿಜಾಪುರ ಜಿಲ್ಲೆಯಲ್ಲಿ ಪ್ರಚಾರಾಂದೋಲನ

ಕೇಂದ್ರ ಸರಕಾರ ಅನುಸರಿಸುತ್ತಿರುವ ಸಾರ್ವಜನಿಕ ಕ್ಷೇತ್ರದ ಖಾಸಗೀಕರಣ ಮತ್ತು ರೋಗಗ್ರಸ್ತವೆಂಬ ನೆಪದಿಂದ ಕಾರ್ಖಾನೆಗಳ ಮುಚ್ಚುವಿಕೆ, ಖಾಸಗಿ ಬ್ಯಾಂಕುಗಳನ್ನು ತರೆಯಲು ಅವಕಾಶ, ಮಹಿಳೆಯರಿಗೆ ಮೀಸಲಾತಿ ಪಡಿತರ ಅಂಗಡಿಗಳಲ್ಲಿ ಸರಿಯಾಗಿ ಆಹಾರ ಧಾನ್ಯವಿತರಣೆ, ವಿದ್ಯುತ್ ದರ ಏರಿಕೆಯ ವಿರುದ್ಧ ದೇಶಾದ್ಯಂತ ರಾಜಕೀಯ ಪ್ರಚಾರಾಂದೋಲನ ನಡೆಸಿ, ಜನರಲ್ಲಿ ಜಾಗೃತಿಯನ್ನುಂಟು ಮಾಡಿ ಕೇಂದ್ರದಲ್ಲಿರುವ ಸಂಯುಕ್ತ ರಂಗ ಸರಕಾರ ತನ್ನ ಜನವಿರೋಧಿ ಧೋರಣೆಗಳನ್ನು ಕೈ ಬಿಡಬೇಕೆಂದು ಒತ್ತಾಯಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಕರೆ ಕೊಟ್ಟ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ ಹಲವಾರು ಕಡೆ ಪ್ರಚಾರ ಪ್ರಕ್ಷೋಭೆ ನಡೆಸಲಾಯಿತು. ದಿನಾಂಕ 15 ರಂದು ನೂರಕ್ಕೂ ಹೆಚ್ಚು ಮಹಿಳೆಯರನ್ನೊಳಗೊಂಡ ಮೆರವಣಿಗೆ ರೈತ ಸಂಘದ ಕಚೇರಿಯಿಂದ ಹೊರಟು ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿ ಧರಣಿ ನಡೆಸಿತು. ಸಭಿಕರನ್ನುದ್ದೇಶಿಸಿ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ರಾದ ಎನ್.ಕೆ. ಉಪಾಧ್ಯಾಯ, ಜಿಲ್ಲಾ ಕಾರ್ಯದರ್ಶಿ ಭೀಮಸಿ ಕಲಾದಗಿ, ರೈತ ಮುಖಂಡ ಅಣ್ಣಾರಾಯ ಇಳಿಗೇರ, ಮುನಿಸಿಪಲ್ ಕಾಮಗಾರ ಯೂನಿಯನ್ ಕಾರ್ಯದರ್ಶಿ ವಿ.ಎಂ.ಸೊನ್ನದ ಮೊದಲಾದವರು ಭಾಷಣ ಮಾಡಿದರು. ದಿ. 19 ರಂದು ಬಾಗಲಕೋಟೆ, ದಿ.20 ರಂದು ಗುಳೇದಗುಡ್ಡದಲ್ಲಿ ಸಾರ್ವಜನಿಕ ಸಭೆ ನಡೆದು ಎನ್.ಕೆ. ಉಪಾಧ್ಯಾಯ ಮತ್ತು ಡಿ.ಎಂ.ಖಿಲಾಸಿಯವರು ಭಾಷಣ ಮಾಡಿ ರಾಜಕೀಯ ಆಂದೋಲನದ ಮಹತ್ವ ತಿಳಿಸಿ ಹೇಳಿ, ಪೆಟ್ರೋಲ್ ದರ, ವಿದ್ಯುತ್ ದರ, ಆಹಾರ ಧಾನ್ಯಗಳ ದರ ಹೆಚ್ಚಳವನ್ನು ಖಂಡಿಸಿ, ಪಡಿತರ ಅಂಗಡಿಗಳಲ್ಲಿ ಸರಿಯಾಗಿ ಆಹಾರ ಧಾನ್ಯ ವಿತರಣೆಗೆ ಒತ್ತಾಯಿಸಿದರು. ಕೃಷ್ಣಾ ನದಿ ಯಲ್ಲಿ ಮಹಾಪೂರ ಹಾಗೂ ಅಣೆಕಟ್ಟಿನಿಂದಾಗಿ ಉಂಟಾದ ಹಿನ್ನೀರಿನಿಂದ 35 ಹಳ್ಳಿಗಳ ಜನರ ಬವಣೆಗೆ ನಿರ್ದಿಷ್ಟ ನಿಲುಮೆ ತಾಳದ ರಾಜ್ಯ ಸರಕಾರ ಜವಾಬ್ದಾರಿಯೆಂದು ಆರೋಪಿಸಿ, ಮುಳುಗಡೆ ಪ್ರದೇಶದ ಜನರಿಗೆ ಪುನರ್ವಸತಿ ಮತ್ತು ಯೋಗ್ಯ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿದರು. ಭೀಮಸಿ ಕಲಾದಗಿ, ಅಣ್ಣಾರಾಯ ಇಳಿಗೇರ, ನೂಪು ಮೊದಲಾ ದವರು ಇಂಡಿ, ಸಿಂದಗಿ, ಬಸವನ ಬಾಗೇ ವಾಡಿ ಮತ್ತು ಬಿಜಾಪುರ ತಾಲ್ಲೂಕಿನಲ್ಲಿ ಪ್ರಚಾರ ದ ಮೂಲಕ ಜನಜಾಗೃತಿ ಕಾರ್ಯ ಕೈಗೊಂಡರು.

ಹೋಟೆಲ್ ಕಾರ್ಮಿಕರ ಸರ್ವಸದಸ್ಯರ ಸಭೆ

ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ ಸರ್ವಸದಸ್ಯರ ಸಭೆ ಜುಲೈ 11 ರಂದು ಎನ್.ಜಿ.ಓ. ಹಾಲ್‌ನಲ್ಲಿ ನಡೆಯಿತು. ಸಂಘದ ಅಧ್ಯಕ್ಷರೂ ವಕೀಲರೂ ಆದ ಕಾಂ|| ಗಣಪತಿ ಹೆಗ್ಡೆಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕಳೆದ ಸರ್ವಸದಸ್ಯರ ಸಭೆಯ ನಂತರದ ಕಾರ್ಯಚಟುವಟಿಕೆಗಳ ವರದಿಯನ್ನು ಪ್ರಧಾನ ಕಾರ್ಯದರ್ಶಿ ಕಾ| ಇ.ಕೆ.ಎನ್.ರಾಜನ್ ರವರು ಮಂಡಿಸುತ್ತಾ ಸಂಘದ ನೇತೃತ್ವದಲ್ಲಿ ಕಳೆದ 6 ವರ್ಷಗಳ ಕಾಲ ನಡೆದ ಹೊಸ ಕನಿಷ್ಟ ವೇತನ ಹೋರಾಟವನ್ನು ವಿವರಿಸಿ ಈ ಬಗ್ಗೆ 1994 ರಲ್ಲಿ ಸರಕಾರ ಹೋಟೆಲ್ ಕಾರ್ಮಿಕರಿಗೆ ಹೊಸ ಕನಿಷ್ಟ ವೇತನ ಪ್ರಕಟಿಸಿದ್ದು, ಊಟದ ಬಾಬ್ತಿನ ಹೆಚ್ಚಳದ ಬಗ್ಗೆ ಹೈಕೋರ್ಟ್‌ನಿಂದ ಸರಕಾರದ ವಿರುದ್ಧ ತಡೆಯಾಜ್ಞೆ ಪಡೆದಿರುವುದು, ಸಂಘದ ನೇತೃತ್ವದಲ್ಲಿ ಸಿಐಟಿಯು-ಐಎಲ್‌ಓ ಸಹಕಾರದಿಂದ ಹೋಟೆಲ್ ಉದ್ಯಮದಲ್ಲಿ ಬಾಲ ಕಾರ್ಮಿಕರ ಬಗ್ಗೆ ಯಶಸ್ವಿಯಾಗಿ ನಡೆದ ಅಖಿಲ ಭಾರತ ಮಟ್ಟದ ಕಾರ್ಯಾಗಾರದ ಬಗ್ಗೆ ವಿವರಿಸಿದರು. ಚರ್ಚೆಯ ನಂತರ ವರದಿಯನ್ನು ಅಂಗೀಕರಿಸಲಾಯಿತು.

ಹಾಲಿ ಇರುವ ಕನಿಷ್ಟ ವೇತನ ಎಲ್ಲಾ ಹೋಟೆಲ್‌ಗಳಲ್ಲಿ ಜಾರಿ ಆಗಿಲ್ಲ. ಈ ಬಗ್ಗೆ ಕಾರ್ಮಿಕ ಅಧಿಕಾರಿಗಳು ಹಾಗೂ ಬೆಂಗಳೂರಿನ 26 ಲೇಬರ್ ಇನ್ಸ್‌ಪೆಕ್ಟರ್‌ಗಳು ಮಾಲೀಕರ ಏಜೆಂಟರಂತೆ ವರ್ತಿಸುತ್ತಿದ್ದಾರೆ. ಕನಿಷ್ಟ ವೇತನ ಜಾರಿ ಮಾಡಲು ಕಾರ್ಮಿಕ ಅಧಿಕಾರಿಗಳು, ಲೇಬರ್ ಇನ್ಸ್‌ಪೆಕ್ಟರುಗಳು ಹಾಗೂ ಹೋಟೆಲ್ ಕಾರ್ಮಿಕರ ಸಂಘದ ಪ್ರತಿನಿಧಿಗಳನ್ನೊಳಗೊಂಡ ಇಂಪ್ಲಿಮೆಂಟೇಷನ್ ಕಮಿಟಿ ರಚಿಸಬೇಕು. ಸ್ವಸಹಾಯ ಪದ್ಧತಿಯ ಹೋಟೆಲ್‌ಗಳಿಗೆ ಸರಕಾರ ಪರವಾನಗಿ ಕೊಡಬಾರದು. ಎರಡು ವರ್ಷಕ್ಕೊಮ್ಮೆ ಪುನರ್ ವಿಮರ್ಶೆ ಆಗಬೇಕಾದ ಕನಿಷ್ಟ ವೇತನ ಇನ್ನೂ ಪುನರ್ ವಿಮರ್ಶೆ ಆಗಿಲ್ಲ. ಕನಿಷ್ಟ ವೇತನ ಕೂಡಲೇ ಪುನರ್ ವಿಮರ್ಶೆ ಆಗಬೇಕು. ಎಕ್ಸೈಜ್ ಆಕ್ಟನ್ನು ಉಲ್ಲಂಘನೆ ಮಾಡುವ ಹೋಟೆಲ್ ಮಾಲೀಕರ ವಿರುದ್ಧ ಪೋಲೀಸರು ಕ್ರಮ ಕೈಗೊಳ್ಳಬೇಕೆಂಬ ಬೇಡಿಕೆಗಳಿಗೆ ಆಗಸ್ಟ್ ಕೊನೆ ವಾರದಿಂದ ವಿಧಾನ ಸೌಧದ ಎದುರು ಹಾಗೂ ಕಾರ್ಮಿಕ ಇಲಾಖೆ ಎದುರು ಹೋರಾಟ ನಡೆಸಲು ಸಭೆ ತೀರ್ಮಾನಿಸಿದೆ.

ಬಾಲ ಕಾರ್ಮಿಕರ ಪುನರ್ ವಸತಿ ಬಗ್ಗೆ ಸರ್ಕಾರ ರಚಿಸಿದ ಸಮಿತಿಯಲ್ಲಿ ಹೋಟೆಲ್ ಕಾರ್ಮಿಕರ ಸಂಘದ ಪ್ರತಿನಿಧಿಗಳು ಇಲ್ಲದ ಬಗ್ಗೆ ಸಭೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಶುಚಿತ್ವ ಕಾಪಾಡದ ಹೋಟೆಲ್‌ಗಳ ಮೇಲೆ ಬೆಂಗಳೂರು ಮಹಾನಗರಪಾಲಿಕೆ ದಾಳಿ ನಡೆಸಿ ಕ್ರಮವಹಿಸಿರುವುದನ್ನು ಸಭೆ ಸ್ವಾಗತಿಸಿದೆ.

ವಕೀಲರಾದ ಕಾ|| ಗಣಪತಿ ಹೆಗ್ಡೆಯವರು ತಮ್ಮ ಅಧ್ಯಕ್ಷತೆಯ ಭಾಷಣದಲ್ಲಿ ಕಾರ್ಮಿಕ ನ್ಯಾಯಾಲಯದ ಪರಿಸ್ಥಿತಿ ವಿವರಿಸಿ, ಕಾರ್ಮಿಕರ ವಿವಾದಗಳು ಶೀಘ್ರ ಇತ್ಯರ್ಥವಾಗದೇ ದೀರ್ಘಕಾಲ ನಡೆಯುವುದಕ್ಕೆ ಕಾರಣಗಳನ್ನು ತಿಳಿಸಿ ಹೇಳಿದರು.

ನೂತನ ಪದಾಧಿಕಾರಿಗಳು

ಗಣಪತಿ ಹೆಗ್ಡೆ: ಕಾನೂನು ಸಲಹೆಗಾರರು, ಇ.ಕೆ.ಎನ್.ರಾಜನ್: ಅಧ್ಯಕ್ಷರು, ಸದಾಶಿವ, ಗೋಪಿನಾಥ್: ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ: ಮೆಲ್ಕಿಯೋರ್ .ಆರ್.ಡಿ., ಜಂಟಿ ಕಾರ್ಯದರ್ಶಿ; ಶ್ರೀಧರಬಾಬು, ಸಂಘಟನಾ ಕಾರ್ಯದರ್ಶಿ: ಗೋಪಾಲ ಶೆಟ್ಟಿ, ಸಹಕಾರ್ಯದರ್ಶಿ: ಪ್ರಭಾಕರ, ಖಜಾಂಚಿ: ಪರಮೇಶ್ವರ.ಟಿ.ಕೆ.

ಬೀಡಿ ಕಾರ್ಮಿಕರ ವಾರ್ಷಿಕ ಮಹಾಸಭೆ

ಉಡುಪಿ: ಬೀಡಿ ಅಂಡ್ ಟೊಬ್ಯಾಕೋ ಲೇಬರ್ ಯೂನಿಯನ್(ಸಿಐಟಿಯು) 31 ನೇ ವಾರ್ಷಿಕ ಮಹಾಸಭೆಯು ಜುಲೈ 12 ರಂದು ಉಡುಪಿ ರಾಜ್ಯ ಸರಕಾರಿ ನೌಕರರ ಸಂಘದ ಸಭಾಭವನದಲ್ಲಿ ನಡೆಯಿತು. ದ.ಕ. ಜಿಲ್ಲಾ ಸಿಐಟಿಯು ಪ್ರಧಾನ ಕಾರ್ಯದರ್ಶಿ ಬಿ.ಮಾಧವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕಾರ್ಮಿಕರು ಇಂದು ಯಾವುದೇ ಪ್ರಯೋಜನಗಳನ್ನು ಪಡೆಯುತ್ತಿದ್ದರೂ ಅದು ಹೋರಾಟದಿಂದಲೇ ಸಿಕ್ಕಿರುವುದು. ನಾವು ಯಾವುದೇ ಜಾತಿ ಬೇಧವಿಲ್ಲದೆ ಕಾರ್ಮಿಕ ವರ್ಗಕ್ಕೆ ಸೇರಿದವರು. ನಮ್ಮದು ಕಾರ್ಮಿಕ ವರ್ಗದ ಜಾತಿ ಎಂದರು.

ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ ನಮ್ಮ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿದ್ದರೂ ಬಹಳಷ್ಟು ಮಂದಿ ಸಂಘಟನೆಯಿಂದ ಹೊರಗಿದ್ದಾರೆ. ಅಂತಹ ಕಾರ್ಮಿಕರು ಇಂದಿಗೂ ಕಂಟ್ರಾಕ್ಟರುಗಳ ಶೋಷಣೆಗೆ ಒಳಗಾಗಿದ್ದಾರೆ. ಅವರನ್ನು ಸಂಘಟಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ಸಿಪಿಐ(ಎಂ) ಉಡುಪಿ ತಾಲ್ಲೂಕು ಸಮಿತಿ ಕಾರ್ಯದರ್ಶಿ ಪಿ.ವಿಶ್ವನಾಥ ರೈಯವರು ಮಾತನಾಡುತ್ತಾ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಜನಪರವಾದ ಕೆಲಸ ಮಾಡುವ ಬದಲು ಜನವಿರೋಧಿ ಕೆಲಸದಲ್ಲಿ ತೊಡಗಿವೆ. ಇದರ ವಿರುದ್ಧ ನಮ್ಮ ಪಕ್ಷ ಮತ್ತು ಸಿಐಟಿಯು ಹೋರಾಟ ನಡೆಸಲಿದೆ. ಇದರಲ್ಲಿ ಎಲ್ಲಾ ಕಾರ್ಮಿಕರು ಪಾಲ್ಗೊಳ್ಳಬೇಕು ಎಂದರು. ನೇಯ್ಗೆ ಯೂನಿಯನ್ ಕಾರ್ಯದರ್ಶಿ ಗುರುರಾಜ ಕೆ.ಶೆಟ್ಟಿಗಾರರು ಶುಭ ಸಂದೇಶ ನೀಡಿದರು.

ಪ್ರಧಾನ ಕಾರ್ಯದರ್ಶಿ ಎನ್.ಸಾಧು ಅಮೀನ್ ವರದಿ ವಾಚನ ಮಾಡಿದರು. ಕೋಶಾಧಿಕಾರಿ ರಮೇಶ್ ಮೆಂಡನ್ 1996 ರ ಲೆಕ್ಕಪತ್ರ ಮಂಡಿಸಿದರು. ಮುಂದಿನ ಅವಧಿಗೆ ಯೂನಿಯನ್‌ಗೆ ಅಧ್ಯಕ್ಷರಾಗಿ ಗುರುವ ಪೂಜಾರಿ, ಉಪಾಧ್ಯಕ್ಷರಾಗಿ ರಾಜು ಪೂಜಾರಿ ಮತ್ತು ಎನ್.ಗಿರಿಜ, ಪ್ರಧಾನ ಕಾರ್ಯದರ್ಶಿಯಾಗಿ ಎನ್.ಸಾಧುಅಮೀನ್, ಜತೆ ಕಾರ್ಯದರ್ಶಿಯಾಗಿ ಗೋಪಾಲ ಸೆಟ್ಟಿಗಾರ್ ಮತ್ತು ಸುಶೀಲ ಎಸ್.ನಾಯ್ಕ್, ಕೋಶಾಧಿಕಾರಿಯಾಗಿ ರಮೇಶ್ ಮೆಂಡನ್ ಆಯ್ಕೆಯಾದರು. ಶ್ರೀಮತಿ ಎನ್.ಗಿರಿಜರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು

ಲೈನ್ ಮೆನ್‌ಗಳ ಭರ್ತಿಗೆ ಸಿಪಿಐ(ಎಂ) ಆಗ್ರಹ

ಕೊಡಗು: ಕೊಡಗಿನಲ್ಲಿ ಹೆಚ್ಚಿನ ಮಳೆಗಾಳಿಗಳಿಂದ ಅಲ್ಲಲ್ಲಿ ಮರ ಬೀಳುವುದು ಮೊದಲಾದ ಘಟನೆಗಳಿಂದ ಆಗಾಗ ವಿದ್ಯುತ್ ಸಂಚಾರದಲ್ಲಿ ಅಡಚಣೆ ಉಂಟಾಗುವುದು ಸಹಜ. ಇಂತಹ ಸಂದರ್ಭಗಳಲ್ಲಿ ಸ್ಥಳಕ್ಕೆ ಧಾವಿಸಿ ಕೆಲಸ ಮಾಡಬೇಕಾದವರು ಲೈನ್ ಮೆನ್ ಸಿಬ್ಬಂದಿಯವರು.

ವಿರಾಜಪೇಟೆ ವಲಯದಲ್ಲಿ 24 ಜನ ಲೈನ್ ಮೆನ್‌ಗಳು ಬೇಕಾಗಿದ್ದು, ಈಗ ಕೇವಲ 7 ಜನರಿದ್ದು ಎಲ್ಲಾ ಕೆಲಸ ಮಾಡುವುದೆಂದರೆ ಅವರೆಷ್ಟು ಕಷ್ಟದಲ್ಲಿದ್ದಾರೆ ಎಂದು ಅರ್ಥವಾಗುತ್ತದೆ. ಆದ್ದರಿಂದ ವಿದ್ಯುನ್ಮಂಡಳಿಯ ಅಸಮರ್ಪಕ ಸೇವೆಗೆ ನೌಕರರ ಕೊರತೆ ಮುಖ್ಯಕಾರಣವಾಗಿದೆ. ಇದಕ್ಕೆ ಮೇಲಧಿಕಾರಿಗಳ ನಿರ್ಲಕ್ಷ್ಯ, ಬೇಜವಾಬ್ದಾರಿ ಮನೋಭಾವವೇ ಮುಖ್ಯ ಕಾರಣವಾಗಿದೆ. ಆದ್ದರಿಂದ ಮೇಲಧಿಕಾರಿಗಳು ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸಿಪಿಐ(ಎಂ) ವಿರಾಜಪೇಟೆ ಶಾಖೆಯು ಒತ್ತಾಯಿಸಿದೆ.

ಸಿಪಿಐ(ಎಂ) ಜಯಭೇರಿ

ಉತ್ತರ ಕನ್ನಡ: ಹೊನ್ನಾವರ ತಾಲ್ಲೂಕಿನ ಮಾಪಿನಕುರ್ವೆ ಒಂದು ದ್ವೀಪದಂತಿರುವ ಗ್ರಾಮ. ಈಗ್ರಾಮದಲ್ಲಿ ಈಗಾಗಲೇ ಸಿಪಿಐ(ಎಂ) ನೇತೃತ್ವದ ಗ್ರಾಮ ಪಂಚಾಯತ್ ಇದ್ದು, ಇದರ ಅಧ್ಯಕ್ಷರು ಪಕ್ಷದ ಉತ್ತರ ಕನ್ನಡಜಿಲ್ಲಾ ಸಮಿತಿ ಸದಸ್ಯರಾದ ಕಾಂ. ತಿಲಕಗೌಡ.

ಇತ್ತೀಚೆಗೆ ನಡೆದ ಮಾಪಿನ ಕುರ್ವೆ ವ್ಯವಸಾಯ ಸೇವಾ ಸಹಕಾರ ಸಂಘದ ಚುನಾವಣೆಯಲ್ಲಿ ಕಾಂಗ್ರೆಸ್-ಬಿಜೆಪಿ ಮೈತ್ರಿಕೂಟವನ್ನು ಸಂಪೂರ್ಣವಾಗಿ ಸೋಲಿಸಿ ಎಲ್ಲಾ 11 ಸ್ಥಾನಗಳಲ್ಲಿ ಸಿಪಿಐ(ಎಂ) ನ ಸದಸ್ಯರು ಜಯಭೇರಿ ಬಾರಿಸಿದ್ದಾರೆ. ಅದರಲ್ಲಿ 7 ಜನರು ಹಂಚಿನ ಕಾರ್ಮಿಕರೆ ಆಗಿರುವುದು ವಿಶೇಷವಾಗಿದೆ. ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿಯೂ ಕಾಂ|| ತಿಲಕಗೌಡರು ಆಯ್ಕೆಗೊಂಡಿದ್ದಾರೆ. ಈಗಾಗಲೇ ಸಿಪಿಐ(ಎಂ) ನೇತೃತ್ವದ ಗ್ರಾಮ ಪಂಚಾಯತ್ ಹಲವಾರು ನಾಗರೀಕ ಸಮಸ್ಯೆಗಳನ್ನು ಪರಿಹರಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಸೇವಾ ಸಹಕಾರ ಸಂಘದ ಚುನಾವಣೆಯಲ್ಲೂ ಸಿಪಿಐ(ಎಂ) ಪಕ್ಷ ಸಂಪೂರ್ಣ ಜಯಗಳಿಸಿರುವುದರಿಂದ ಹೆಚ್ಚಿನ ಸ್ಫೂರ್ತಿದಾಯಕ ಕೆಲಸ ನಿರ್ವಹಿಸಲು ಸಹಕಾರಿಯಾಗಿದ್ದು ಸಿಪಿಐ(ಎಂ) ಮತ್ತಷ್ಟು ಜನಪ್ರಿಯಗೊಂಡಿದೆ.

ಕರ್ನಾಟಕದಲ್ಲಿ ಕಳೆದ ವಾರ

— ಜುಲೈ 17 —

- ಬೆಂಗಳೂರು ನಗರದಲ್ಲಿ ಹಾಲಿನ ದರಗಳಲ್ಲೂ ಜುಲೈ 1 ರಿಂದಲೇ ಜಾರಿಗೆ ಬರುವಂತೆ ಏರಿಕೆ.
- ಕರ್ನಾಟಕ ಅರಣ್ಯ ಇಲಾಖೆಯ 9 ಸಿಬ್ಬಂದಿಯನ್ನು ಒತ್ತೆಯಿಟ್ಟು ಕೊಂಡಿರುವ ವೀರಪ್ಪನ್ ಪೂರ್ಣ ಕ್ಷಮಾದಾನದ ಪಟ್ಟು ಹಿಡಿದಿರುವುದಾಗಿ ಮಧ್ಯಸ್ಥಿಕೆ ಹೊತ್ತಿರುವ 'ನಕ್ಕೀರನ್' ಪತ್ರಿಕೆಯ ಸಂಪಾದಕರು.

— ಜುಲೈ 18 —

- ಬಿಜಾಪುರ ಜಿಲ್ಲೆಯ ಇಂಚಗೇರಿ ಮಠದಲ್ಲಿ ಮಾರಾಮಾರಿ ಐವರ ಹತ್ಯೆ. 18 ಬಂಧನ
- 'ಜನುಮದ ಜೋಡಿ' ಚಿತ್ರದ ನಿರ್ದೇಶಕ ನಾಗಾಭರಣರಿಗೆ ಪ್ರಸಕ್ತ ಸಾಲಿನ ಫಿಲ್ಮ್‌ಫೇರ್ ಶ್ರೇಷ್ಠ ನಿರ್ದೇಶಕ ಪ್ರಶಸ್ತಿ, ನಟಿ ಶಿಲ್ಪಾಗೆ ಅತ್ಯುತ್ತಮ ನಟಿ ಪ್ರಶಸ್ತಿ, ಅತ್ಯುತ್ತಮ ನಟ ಪ್ರಶಸ್ತಿ 'ನಮ್ಮೂರ ಮಂದಾರ ಹೂವೆ' ಚಿತ್ರದ ಅಭಿನಯಕ್ಕಾಗಿ ಶಿವರಾಜ್‌ಕುಮಾರ್‌ಗೆ.

— ಜುಲೈ 19 —

- ಮುಂಬೈಯಲ್ಲಿ ದಲಿತರ ಮೇಲೆ ಗೋಳಿಬಾರ್ ವಿರೋಧಿಸಿ ಬೀದರ್ ಬಂದ್.

— ಜುಲೈ 20 —

- ಯಾವುದೇ ಕಾರಣಕ್ಕೆ 'ಆಕಾಶವಾಣಿ'ಯನ್ನು ವಾಣಿಜ್ಯೀಕರಿಸಬಾರದು ಎಂದು ವಾರ್ತಾಸಚಿವರು.
- ಆಗಸ್ಟ್ 5 ರಂದು ಕಾವೇರಿ ನದಿ ಪ್ರಾಧಿಕಾರ ಕರಡು ಸಲ್ಲಿಸಲು ಕೇಂದ್ರ ಸರಕಾರಕ್ಕೆ ಸುಪ್ರೀಂಕೋರ್ಟ್ ಅವಕಾಶ.

— ಜುಲೈ 21 —

- ಕೇಂದ್ರದಿಂದ ತಿಂಗಳೊಂದಕ್ಕೆ ಬರುತ್ತಿದ್ದ ಅಕ್ಕಿ ಪ್ರಮಾಣ 1.50 ಲಕ್ಷ ಮೆಟ್ರಿಕ್ ಟನ್‌ನಿಂದ 75 ಸಾವಿರ ಟನ್ನಿಗೆ ಇಳಿದಿರುವ ಹಿನ್ನೆಲೆಯಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿಸುವ ಪರ್ಯಾಯ ವ್ಯವಸ್ಥೆ ರೂಪಿಸುತ್ತಿರುವುದಾಗಿ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು.

— ಜುಲೈ 22 —

- ಹೆಕ್ಟೇರಿಗೆ ಎರಡು ಸಾವಿರ ಕಿ.ಜಿ.ಗಳಷ್ಟು ಏಲಕ್ಕಿ ಇಳುವರಿ ನೀಡುವಂತಹ ವ್ಯವಸಾಯ ತಂತ್ರಜ್ಞಾನವನ್ನು ರೂಪಿಸಿರುವುದಾಗಿ ಮಡಿಕೇರಿಯ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸ್ಪೈಸ್ ರಿಸರ್ಚ್‌ನ ವಿಜ್ಞಾನಿಗಳು.


— ಜುಲೈ 23 —

- ಜೇವರ್ಗಿಯಲ್ಲಿ ಡಾ|| ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿದ್ದಾರೆನ್ನುವ ವರದಿಯ ಹಿನ್ನಲೆಯಲ್ಲಿ ಹಿಂಸಾಚಾರ, ನಿಷೇಧಾಜ್ಞೆ.
- ಖಾಸಗಿ ಗುತ್ತಿಗೆ ರದ್ದುಪಡಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳಬೇಕೆಂದು ಬೆಂಗಳೂರು ಮಹಾನಗರ ಪಾಲಿಕೆ ಪೌರ ಕಾರ್ಮಿಕರ ಪ್ರತಿಭಟನಾ ಪ್ರದರ್ಶನ.

ಏಜೆನ್ಸಿದಾರರಿಗೆ ಸೂಚನೆ

ದುಡಿಯುವ ಜನರ ಪತ್ರಿಕೆ 'ಐಕ್ಯರಂಗ' ನಿರಂತರವಾದ ಬೆಲೆ ಏರಿಕೆಗಳಿಂದಾಗಿ ತೀವ್ರ ಹಣಕಾಸು ಮುಗ್ಗಟ್ಟು ಅನುಭವಿಸಬೇಕಾಗಿ ಬಂದಿದೆ. ಇದನ್ನು ಎದುರಿಸಲು ಏಜೆಂಸಿದಾರರ ಸಹಕಾರವನ್ನು ಮತ್ತೆ-ಮತ್ತೆ ಕೋರುತ್ತಿದ್ದರೂ ಬಹಳ ಮಂದಿ ಏಜೆಂಸಿದಾರರು ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಆದ್ದರಿಂದ ನಿರ್ವಾಹವಿಲ್ಲದೆ ವ್ಯವಸ್ಥಾಪಕ ಮಂಡಳಿ ಕೆಲವು ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ನಿರ್ಧರಿಸಿದೆ. ಏಜೆಂಸಿ ಬಿಲ್ ಬಾಕಿಯನ್ನು ಜುಲೈ 31, 1997 ರೊಳಗೆ ಪಾವತಿ ಮಾಡದ ಏಜೆಂಸಿಗಳನ್ನು ರದ್ದು ಮಾಡಲಾಗುವುದು. ಇದನ್ನು ಸಂಬಂಧ ಪಟ್ಟ ಎಲ್ಲಾ ಏಜೆಂಸಿದಾರರು ಗಮನಿಸಬೇಕಾಗಿ ಕೋರುತ್ತೇವೆ. ಏಜೆಂಸಿದಾರರಿಗೆ ಕಳಿಸಿರುವ ಜೂನ್ ತಿಂಗಳ ಬಿಲ್‌ನಲ್ಲಿ ಹಿಂದಿನ ಬಾಕಿಯನ್ನು ಪ್ರತ್ಯೇಕವಾಗಿ ನಮೂದಿಸಲಾಗಿದೆ.

— ವ್ಯವಸ್ಥಾಪಕರು



ಸಂಯುಕ್ತ ರಂಗವನ್ನು ಬಲಗೊಳಿಸುವ ಬಗ್ಗೆ ರಂಗದೊಳಗೆ ಈಗ ಎರಡು ಕಣ್ಣೋಟಗಳಿದ್ದಂತೆ ಇದೆ. ಒಂದು, ಕೆಲವು ವ್ಯಕ್ತಿಗಳು, ಗುಂಪುಗಳನ್ನು ಅವಲಂಬಿಸಿ ಅವರ ಸಂಖ್ಯೆಯ ಮೇಲೆ ರಂಗದ ಬಲ ಹೆಚ್ಚಿಸುವುದು ಆದರೆ

ಸಂಯುಕ್ತ ರಂಗದ ಬಲವಿರುವುದು ಜನಗಳ ಸಮಸ್ಯೆಗಳೊಂದಿಗೆ ಗುರುತಿಸಿಕೊಳ್ಳುವಲ್ಲಿ

ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್‌ರವರು ಈ ನೀತಿಬದ್ಧ ನಿಲುವುಗಳಿಂದಾಗಿಯೇ ಕೊನೆಗೆ ನಾವು ಜನರೊಂದಿಗೆ ಇರಲು ಸಾಧ್ಯವಾಗುತ್ತದೆ. ಈ ಜನರೇ ತಾನೇ ಶಕ್ತಿಯ ಮೂಲ?

ಜನತಾದಳದ ವಿಭಜನೆ ಒಂದು ನಿರಾಸೆ ತಂದ ಸುದ್ದಿ. ಜತೆಗೆ ಅದು ಸಂಯುಕ್ತ ರಂಗಕ್ಕೆ ಒಂದು ಕಷ್ಟಕರ ಪರಿಸ್ಥಿತಿಯನ್ನೂ ಉಂಟುಮಾಡಿತು. ಇದರಿಂದಾಗಿ ಹಲವು ಪ್ರಶ್ನೆಗಳು ಏಳಲು ಆ ಮೂಲಕ ಸಂಯುಕ್ತ ರಂಗದ ಸ್ಥಿರತೆ ಮತ್ತು ಭವಿಷ್ಯದ ಬಗ್ಗೆಯೇ ಸಂದೇಹ ಉಂಟಾಗಲು ಅವಕಾಶ ವಾಯಿತು. ವಿಭಿನ್ನ ಕಾರಣಗಳಿಂದ ದೀರ್ಘ ಅವಧಿಯವರೆಗೆ ಸಂಯುಕ್ತ ರಂಗದ ಸಭೆ ನಡೆಯದ್ದರಿಂದ ಜನತಾದಳದಲ್ಲಿನ ಒಡಕನ್ನು ತಡೆಯಲು ಸಾಧ್ಯವಾಗಲಿಲ್ಲ. ದುರದೃಷ್ಟ ವಶಾತ್ ಜನತಾದಳದಲ್ಲಿ ಒಡಕು ಉಂಟಾದದ್ದು ಬಿಹಾರದ ಮುಖ್ಯಮಂತ್ರಿ ಮತ್ತು ಆ ಪಕ್ಷದ ಅಧ್ಯಕ್ಷರೂ ಆದ ಲಾಲೂ ಪ್ರಸಾದ್ ಯಾದವ್‌ರ ಮೇಲೆ ಭ್ರಷ್ಟಾಚಾರದ ಆಪಾದನೆಗಳು ಬಂದ ಮೇಲೆ. ಕೋಟಿಗಟ್ಟಲೆ ರೂಪಾಯಿಗಳ ಪಶು ಸಂಗೋಪನಾ ಹಗರಣದಲ್ಲಿ ಅವರ ಮೇಲೆ ಆರೋಪ ಪತ್ರ ಹಾಕಿದ ಮೇಲೆ ಹಲವೆಡೆಗಳಿಂದ ಅವರ ರಾಜೀನಾಮೆಗೆ ಒತ್ತಾಯ ಬಂದರೂ ಅವರು ಹಠಮಾರಿತನ ಬಿಡಲಿಲ್ಲ. ಜೈಲಿಗೆ ಕಳಿಸಿದರೆ ಅಲ್ಲಿಂದಲೇ ರಾಜ್ಯದ ಆಡಳಿತ ನಡೆಸುವೆನೆಂದು ಅಸಂಬದ್ಧ ಹೇಳಿಕೆಯನ್ನೂ ಕೊಟ್ಟರು.

ಯಾದವ್‌ರ ಈ ಅಸಮರ್ಥನೀಯ ನಿಲುವು ಮತ್ತು ಅದರಿಂದಾಗಿ ಜನತಾದಳದಲ್ಲಿ ಅವರು ತಂದ ವಿಭಜನೆಯಿಂದಾಗಿ ಸಂಯುಕ್ತ ರಂಗದ ಹೆಸರಿಗೆ ಕಳಂಕ ಬಂತು. ರಂಗದ ಹಲವು ಅಂಗ ಪಕ್ಷಗಳು, ಎಡಪಕ್ಷಗಳು, ಜನತಾದಳ, ಸಮಾಜವಾದಿ ಪಕ್ಷ ಮುಂತಾದವುಗಳು ಆರೋಪ ಪತ್ರ ಹಾಕಿರುವ ಲಾಲೂ ಪ್ರಸಾದ್ ಯಾದವ್ ನೈತಿಕ ಆಧಾರದಲ್ಲಿ ರಾಜೀನಾಮೆ ಕೊಡಬೇಕೆಂಬ ದೃಢ ನಿಲುವು ತಳೆದವು. ಜನತಾದಳದಲ್ಲಿನ ವಿಭಜನೆಯನ್ನು ಖಂಡಿಸುವ ಈ ಪಕ್ಷಗಳು, ಇದು ಸಂಯುಕ್ತ ರಂಗವನ್ನು ದುರ್ಬಲಗೊಳಿಸುವ ಪ್ರಯತ್ನ ಎನ್ನುತ್ತಾ ಈ ಆಟವನ್ನು ವಿಫಲಗೊಳಿಸುವ ಪಣತೊಟ್ಟವು. ಭ್ರಷ್ಟಾಚಾರದಂತಹ ವಿಷಯದಲ್ಲಿ ರಂಗದ ಒಂದು ಪ್ರಧಾನ ಅಂಗವನ್ನು ಒಡೆದ, ಆ ಮೂಲಕ ಸಂಯುಕ್ತರಂಗವನ್ನು ದುರ್ಬಲಗೊಳಿಸಿ, ಅದರ ವಿಶ್ವಾಸಾರ್ಹತೆಯ ಬಗ್ಗೆ ಸಂದೇಹ ಮೂಡಿಸುವ ಒಂದು ಗುಂಪನ್ನು ರಂಗದೊಳಗೆ ತಗೊಳ್ಳಲು ಸಾಧ್ಯವಿಲ್ಲ ಎಂಬುದು ಈ ಪಕ್ಷಗಳ ಭಾವನೆ. ಆದರೆ ರಂಗದ ಇನ್ನೂ ಕೆಲವು ಪಕ್ಷಗಳ ವಿಚಾರ ಬೇರೆಯೇ ಆಗಿದೆ. ಲಾಲೂ ಪ್ರಸಾದ್ ಯಾದವ್‌ರ ಮೇಲೆ ಭ್ರಷ್ಟಾಚಾರದ ಆರೋಪಗಳಿದ್ದಾಗ್ಯೂ ಅವರಿಗೆ ಸಂಯುಕ್ತರಂಗದೊಳಗೆ ಮುಂದೆಯೂ ಅವಕಾಶ ಇರಬೇಕು ಎಂಬುದು ಅವರ ಅಭಿಪ್ರಾಯ. ಡಿ.ಎಂ.ಕೆ. ಯ ಕಣ್ಣೋಟ ಬೇರೆಯೇ ಆಗಿದೆ. ಡಿ.ಎಂ.ಕೆ.ಯ ಅಧ್ಯಕ್ಷ ಮತ್ತು ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿಯವರು ಪರಿಸ್ಥಿತಿ ಉಲ್ಬಣಗೊಳ್ಳಲು ಎಡಪಕ್ಷಗಳೇ ಕಾರಣ ಎಂದು ಎಡಪಕ್ಷಗಳ ಮೇಲೆಯೇ ದೂರು ಹೊರಿಸಿದ್ದಾರೆ.

ಆದರೆ ಸಂಯುಕ್ತ ರಂಗದಲ್ಲಿ ಲಾಲೂ ಯಾದವರ ಆರ್.ಜೆ.ಡಿ. ಪಕ್ಷಕ್ಕೆ ಸ್ಥಾನ ಕೊಟ್ಟರೆ ಅದರಿಂದ ಲಾಭವಾಗುವುದು ಬಿಹಾರದಲ್ಲಿ ಬಿಜೆಪಿಗೆ ಮಾತ್ರ. ಎಡಪಕ್ಷಗಳು ಮತ್ತು ಇತರ ಪಕ್ಷಗಳ ಮುತುವರ್ಜಿಯಿಂದಾಗಿ ಬಿಜೆಪಿಗೆ ಚಳುವಳಿಗೆ ನೇತೃತ್ವ ನೀಡಿ ಅದರ ಪ್ರಯೋಜನ ಪಡೆಯುವ ಅವಕಾಶ ಸಿಗದಂತಾಗಿದೆ. ಎಡಪಕ್ಷಗಳು ಬಿಹಾರದಲ್ಲಿ ಮುಖ್ಯಮಂತ್ರಿಗಳ ರಾಜೀನಾಮೆಗೆ ಒತ್ತಾಯಿಸಿ ಮೂರು ಬಂದ್‌ಗಳನ್ನು ನಡೆಸಿದವು. ಜುಲೈ 16 ರಂದು ಎಡಪಕ್ಷಗಳ 50000 ಮಂದಿ ಪಾಟ್ನಾದಲ್ಲಿ ಬಂಧನವನ್ನು ಎದುರಿಸಿದರು. ಮೇವು ಹಗರಣದಲ್ಲಿ ಲಾಲೂಯಾದವ್ ಸಿಲುಕಿಕೊಂಡ ಬಗ್ಗೆ ಜನಗಳಲ್ಲಿ ಎಂತಹ ಭಾವನೆಯಿದೆ ಎಂಬುದನ್ನು ಇದು ತೋರಿಸಿಕೊಟ್ಟಿದೆ.

ಡಿ.ಎಂ.ಕೆ. ವಾದ

ಒಡಕು ತಂದ ರಾಷ್ಟ್ರೀಯ ಜನತಾದಳವನ್ನು ರಂಗದಲ್ಲಿ ಸೇರಿಸಿಕೊಳ್ಳಲು ಡಿ.ಎಂ.ಕೆ. ಅಧ್ಯಕ್ಷರು ಹಲವು ಕಾರಣಗಳನ್ನು ಕೊಟ್ಟಿದ್ದಾರೆ. ಆದರೆ ಇವು ಯಾವುವೂ ತರ್ಕದ ಎದುರು ನಿಲ್ಲುವಂತದ್ದಲ್ಲ. ಕೆಲವು ಪಕ್ಷಗಳು (ಎಡಪಕ್ಷಗಳು ಎಂದು ನೀವು ಊಹಿಸಬಹುದು) ಸಂಯುಕ್ತ ರಂಗದ 'ಸಮಾನ ಕನಿಷ್ಟ ಕಾರ್ಯಕ್ರಮ' ದ ಮೇಲೆ ತಮ್ಮದೇ ಕಾರ್ಯಕ್ರಮವನ್ನು ಹೇರ ಬಯಸುತ್ತಾರೆ ಎಂದು ಪರೋಕ್ಷವಾಗಿ ಹೇಳಿದ್ದಾರೆ. ನಾಲ್ಕು ಎಡಪಕ್ಷಗಳಲ್ಲಿ ಮೂರು ಸರಕಾರದಲ್ಲಿ ಭಾಗವಹಿಸುತ್ತಿಲ್ಲ. ಅತ್ತ ಮೂರು ಪ್ರಮುಖ ಆರ್ಥಿಕ ಮಂತ್ರಿ ಖಾತೆಗಳು - ಹಣಕಾಸು, ಕೈಗಾರಿಕೆ ಮತ್ತು ವಾಣಿಜ್ಯ - ಟಿ.ಎಂ.ಸಿ, ಡಿ.ಎಂ.ಕೆ. ಕೈಗಳಲ್ಲಿವೆ. ಇತರ ಮಹತ್ವಪೂರ್ಣ ಇಲಾಖೆಗಳೂ ಅವರ ಕೈಯಲ್ಲಿವೆ. 'ಸಮಾನ ಕನಿಷ್ಟ ಕಾರ್ಯಕ್ರಮ'ದಲ್ಲಿ ಹೇಳಿದ ಅಜೆಂಡಾವನ್ನು ಅನುಸರಿಸಬೇಕಾದ್ದು ಈ ಇಲಾಖೆಗಳೇ. ಎಡಪಕ್ಷಗಳು ಕೆಲವು ಕ್ರಮಗಳಿಗೆ ತಮ್ಮ ವಿರೋಧದ ದನಿಯೆತ್ತಬಹುದಷ್ಟೆ(ಅದನ್ನು ಹಲವು ಸಲ ಕಿವಿಗೆ ಹಾಕಿಕೊಳ್ಳುವುದಿಲ್ಲ, ಗಮನಿಸುವುದೂ ಇಲ್ಲ).

ಜನಗಳಿಗಾಗಿ ಏನೂ ಮಾಡಿಲ್ಲ

ನಿಜ ಒಂದು ವರ್ಷದಲ್ಲೇ ಒಂದು ಸರಕಾರದ ಬಗ್ಗೆ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಆದರೆ ಅದು ಸಣ್ಣ ಅವಧಿ ಕೂಡ ಅಲ್ಲ. ವಿದೇಶ ವ್ಯವಹಾರಗಳು, ಕೇಂದ್ರ ರಾಜ್ಯ ಸಂಬಂಧಗಳು, ಪ್ರತ್ಯೇಕತಾವಾದಿ ಆಂದೋಲನಗಳನ್ನು ಎದುರಿಸುವುದು ಇತ್ಯಾದಿಗಳಲ್ಲಿ ಪ್ರಗತಿಯಾಗಿದೆಯಾದರೂ ಕಾರ್ಮಿಕ ವರ್ಗದ ಮತ್ತು ಇತರ ಶ್ರಮಜೀವಿಗಳ ಪರಿಸ್ಥಿತಿಯನ್ನು ಸುಧಾರಿಸಲು, ಅವರ ಸಮಸ್ಯೆಗಳನ್ನು ಎತ್ತಿಕೊಂಡು ಪರಿಹಾರ ನೀಡಲು ಏನೂ ಮಾಡಿಲ್ಲವೆಂದೇ ಹೇಳಬಹುದು. ಎಡಪಕ್ಷಗಳು ಉದಾರೀಕರಣವೆಂಬ ಪ್ರತಿಗಾಮಿ ನೀತಿಗಳನ್ನು ವಿರೋಧಿಸುತ್ತಾ 'ಸಮಾನ ಕನಿಷ್ಟ ಕಾರ್ಯಕ್ರಮ'ದಲ್ಲಿ ಜನಸಾಮಾನ್ಯರ ಸಮಸ್ಯೆಗಳನ್ನು ಕುರಿತಂತೆ ಹೇಳಿರುವ ಕ್ರಮಗಳನ್ನು ಜಾರಿಗೆ ತರಲು, ಸೂಕ್ತ ಕಾನೂನುಗಳನ್ನು ತರಲು ಸತತವಾಗಿ ಆಗ್ರಹಿಸುತ್ತಾ ಬಂದಿವೆ. ಇವುಗಳಲ್ಲಿ ಒಂದೆಂದರೆ ರೇಶನ್ ವ್ಯವಸ್ಥೆಯನ್ನು ಉತ್ತಮಪಡಿಸಿ ಬಡತನದ ರೇಖೆಯ ಕೆಳಗಿರುವ ಜನಗಳಿಗೆ ಅರ್ಧ ಬೆಲೆಗಳಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವುದು. ಇದಲ್ಲದೆ ಕೃಷಿ ಕಾರ್ಮಿಕರ ಹಕ್ಕುಗಳ ರಕ್ಷಣೆಗೆ, ಗುಪ್ತ ಮತದಾನದ ಮೂಲಕ ಕಾರ್ಮಿಕ ಚುನಾವಣಾ ಸುಧಾರಣೆ, ಮಹಿಳೆಯರಿಗೆ ಮೀಸಲಾತಿ ಇತ್ಯಾದಿಗಳನ್ನು ಕುರಿತಂತೆ ಶಾಸನವನ್ನು ಅಂಗೀಕರಿಸಬೇಕೆಂದು ಒತ್ತಾಯಿಸುತ್ತಿದ್ದೇವೆ. ಕಾಂಗ್ರೆಸ್ ಸೋಲಿನ ಹಿನ್ನೆಲೆಯಲ್ಲಿ ಲೋಕಪಾಲ್ ಮಸೂದೆಯ ಬಗ್ಗೆ ಬಹಳ ಉತ್ಸಾಹದ ಮಾತುಗಳು ಬಂದಿದ್ದವು. ಅದನ್ನು ಕೂಡಾ ಸದ್ಯಕ್ಕೆ ಬದಿಗೊತ್ತಲಾಗಿದೆ. ನಾವು ಈ ಎಲ್ಲಾ ಪ್ರಶ್ನೆಗಳನ್ನು ಎತ್ತುತ್ತಾ ಬಂದಿದ್ದೇವೆ.

ಜತೆಗೆ ಆರ್ಥಿಕ ನೀತಿಗಳ ಬಗ್ಗೆ ಮತ್ತು 'ಸುಧಾರಣೆ' ಯ ವೇಗ ಹೆಚ್ಚಿಸುವ ಪ್ರಯತ್ನಗಳ ಬಗ್ಗೆಯಂತೂ ನಮ್ಮ ವಿರೋಧವನ್ನು ವ್ಯಕ್ತಪಡಿಸಿಕೊಂಡು ಬಂದಿದ್ದೇವೆ. ವಾಸ್ತವವಾಗಿ 'ಸಮಾನ ಕನಿಷ್ಟ ಕಾರ್ಯಕ್ರಮ' ದ ಕರಡು ತಯಾರಿಸುತ್ತಿರುವಾಗಲೇ ನಮ್ಮ ಮೂಲಭೂತ ನಿಲುವುಗಳಿಗೆ ವಿರುದ್ಧವಾದ ನೀತಿಗಳನ್ನು ವಿರೋಧಿಸುವ ನಮ್ಮ ಹಕ್ಕನ್ನು ಕಾದಿರಿಸಿಕೊಂಡಿದ್ದೆವು.

ಕರುಣಾನಿಧಿಯವರ ಆತಂಕ ಯಾವ ಬಗ್ಗೆ?

1996 ರ ಚುನಾವಣೆಗಳ ಮೊದಲು ಸಂಯುಕ್ತ ರಂಗದ ವಿವಿಧ ಅಂಗಗಳು ಮಿತ್ರರಾಗಿರಲಿಲ್ಲ; 'ಚುನಾವಣೆಗಳ ನಂತರವೇ ಸಂಯುಕ್ತ ರಂಗ ರಚನೆಯಾಯಿತು ಎಂಬ ಡಿಎಂಕೆ ಅಧ್ಯಕ್ಷರ ಮಾತು ನಿಜ. ಬಿಜೆಪಿಯ ನೇತೃತ್ವದ ಕೋಮುವಾದಿ ಶಕ್ತಿಗಳು ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ನಿಜವಾದ ಬೆದರಿಕೆಯಿದ್ದ ನಿರ್ದಿಷ್ಟ ಸನ್ನಿವೇಶವನ್ನು ಎದುರಿಸಲು ಸಂಯುಕ್ತ ರಂಗ ರಚನೆಯಾಯಿತೆಂದು ಎಲ್ಲರಿಗೂ ಗೊತ್ತಿದೆ. ಆದರೆ ಡಿ.ಎಂ.ಕೆ. ಅಧ್ಯಕ್ಷರು ತಮ್ಮ ಹೇಳಿಕೆಯಲ್ಲಿ ಕೋಮುವಾದಿ ಶಕ್ತಿಗಳ ಬೆದರಿಕೆಯ ಬಗ್ಗೆ ಏನೂ ಪ್ರಸ್ತಾಪವೇ ಮಾಡುವುದಿಲ್ಲ. ಕರುಣಾನಿಧಿಯವರಿಗೆ ಜನತಾದಳದಿಂದ ಸಿಡಿದು ಹೋದ ಗುಂಪನ್ನು ಸಂಯುಕ್ತ ರಂಗದಲ್ಲಿ ಸೇರಿಸಿಕೊಳ್ಳುವುದರಲ್ಲೇ ಹೆಚ್ಚು ಆಸಕ್ತಿಯಿದ್ದಂತೆ ಕಾಣುತ್ತದೆ.

ಸಂಯುಕ್ತ ರಂಗ ನಾವು ಬಯಸುವ ಒಂದು ಮಾದರಿ ಪರ್ಯಾಯವೇನೂ ಅಲ್ಲ ಎಂದು ಸಿಪಿಐ(ಎಂ) ಮೊದಲಿಂದಲೂ ಹೇಳುತ್ತಲೇ ಬಂದಿದೆ. ಒಂದು ನಿಜವಾದ ಪರ್ಯಾಯ ದೇಶ ಎದುರಿಸುತ್ತಿರುವ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಪ್ರಶ್ನೆಗಳ ಮೇಲೆ ಒಂದು ಸಮಾನ ತಿಳುವಳಿಕೆ ಮತ್ತು ಕಣ್ಣೋಟದಿಂದ ಮಾತ್ರವೇ ಮೂಡಿಬರಲು ಸಾಧ್ಯ. ಆದರೆ ಈಗಿರುವ ವರ್ಗಬಲಾಬಲದಲ್ಲಿ ಇದು ಸಾಧ್ಯವಿರಲಿಲ್ಲ. ಒಂದು ರಾಜಕೀಯ ಪಕ್ಷವಾಗಿ ನಾವು ಎಲ್ಲ ಬೆಳವಣಿಗೆಗಳ ಹಂತಗಳಲ್ಲೂ ನಿರ್ದಿಷ್ಟ ರಾಜಕೀಯ ಪರಿಸ್ಥಿತಿಗಳಿಗನುಗುಣವಾಗಿ ಮಧ್ಯ ಪ್ರವೇಶಿಸಬೇಕಾಗುತ್ತದೆ. ಕೋಮುವಾದಿ ಗುಂಪು ತನ್ನ ಬಲ ಹಾಗೂ ಪ್ರಭಾವವನ್ನು ಹೆಚ್ಚಿಸಿಕೊಂಡು ಜಾತ್ಯಾತೀತ ಬಣದಲ್ಲಿರುವ ದೌರ್ಬಲ್ಯವನ್ನು ಬಳಸಿಕೊಂಡು ಮತ್ತು ಜನಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯ ಲಾಭ ಪಡೆದು ರಾಷ್ಟ್ರೀಯ ಐಕ್ಯತೆಯನ್ನು ಛಿದ್ರಗೊಳಿಸುತ್ತಿದ್ದಾಗ ಇದು ಇನ್ನಷ್ಟು ಮಹತ್ವಪೂರ್ಣ. ಈ ಹಿನ್ನೆಲೆಯಲ್ಲಿ ನಾವು ಸಂಯುಕ್ತ ರಂಗದ ರಚನೆಗೆ ಮುಂದಾದೆವು. ಕರುಣಾನಿಧಿಯವರೂ ಈ ದಿಕ್ಕಿನಲ್ಲಿ ನಮ್ಮ ಆತಂಕ ಮತ್ತು ಪ್ರಯತ್ನಗಳನ್ನು ಖಂಡಿತಾ ಮೆಚ್ಚಿಕೊಳ್ಳುತ್ತಾರೆ. ಸಂಯುಕ್ತ ರಂಗ ಕಾಂಗ್ರೆಸ್ ಮತ್ತು ಬಿಜೆಪಿ ಎರಡಕ್ಕೂ ಒಂದು ಪರ್ಯಾಯವೆಂದು ರಚನೆಗೊಂಡಿತು.


ಸನ್ನಿವೇಶದ ಇನ್ನೊಂದು ಅಂಶವೆಂದರೆ ಈ ಪರ್ಯಾಯ ಕಾಂಗ್ರೆಸ್(ಐ) ನ ಬೆಂಬಲವನ್ನು ಅವಲಂಬಿಸಬೇಕಾಗಿದೆ. ಆದರೆ ಇದರಿಂದ ಕಾಂಗ್ರೆಸ್‌ನ ಧೋರಣೆಗಳ ಬಗ್ಗೆ ನಮ್ಮ ಟೀಕೆಗಳಾಗಲಿ, ವಿರೋಧಗಳಾಗಲೀ ಸಡಿಲವಾಗಿಲ್ಲ. ಅತ್ತ ಕಾಂಗ್ರೆಸ್ ಕೂಡಾ ಕೇಂದ್ರದಲ್ಲಿ ಸಂಯುಕ್ತ ರಂಗವನ್ನು ಬೆಂಬಲಿಸುತ್ತಿದ್ದರೂ ಸಂಯುಕ್ತ ರಂಗದ ಪಕ್ಷಗಳ ಸರಕಾರಗಳಿರುವ ರಾಜ್ಯಗಳಲ್ಲಿ ಅವನ್ನು ವಿರೋಧಿಸುತ್ತಿದೆ, ಚಳುವಳಿ ನಡೆಸುತ್ತಿದೆ. ಕಾಂಗ್ರೆಸ್ ಸಂಯುಕ್ತ ರಂಗಕ್ಕೆ ಬೆಂಬಲ ನೀಡುವ ನಿರ್ಧಾರ ಕೈಗೊಂಡದ್ದು ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡುವ ಒತ್ತಡದಿಂದಾಗಿ. ಅಲ್ಲದೆ ಅವರು ತಕ್ಷಣ ಚುನಾವಣೆ ಎದುರಿಸಲು ಸಿದ್ಧರಿಲ್ಲ. ಏಕೆಂದರೆ ಅವರು ಅಧಿಕಾರದಲ್ಲಿದ್ದಾಗ ಅವರು ಅನುಸರಿಸಿದ ಧೋರಣೆಗಳಿಂದಾಗಿ ಜನರಿಂದ ದೂರ ಹೋಗಿದ್ದಾರೆ. ಇಷ್ಟೇ ಅಲ್ಲ, ಅವರ ಹಲವು ಉನ್ನತ ಮುಖಂಡರು ವಿಭಿನ್ನ ಹಗರಣಗಳಲ್ಲಿ ಆಪಾದಿತರಾಗಿದ್ದು ಆ ಪಕ್ಷದ ಹೆಸರಿಗೆ ಕಳಂಕ ತಟ್ಟಿದೆ.

ಸಂಯುಕ್ತ ರಂಗದ ಒಳಗೆ ಕೂಡಾ ಅಂಗಪಕ್ಷಗಳು ತಮಗೆ ಭಿನ್ನಾಭಿಪ್ರಾಯವಿರುವ ಪ್ರಶ್ನೆಗಳಲ್ಲಿ ಶರಣಾಗತ ರಾಗುತ್ತಾರೆ ಎಂದೂ ನಾವು ನಿರೀಕ್ಷಿಸುವುದಿಲ್ಲ. ವಿವಿಧ ಪ್ರಶ್ನೆಗಳ ಒಂದು ಸಮಾನ ತಿಳುವಳಿಕೆಗೆ ಬರಲೆಂದೇ 'ಸಮಾನ ಕನಿಷ್ಟ ಕಾರ್ಯಕ್ರಮ'ವನ್ನು ತಯಾರಿಸಿ ಅದು ಸರಕಾರ ಅನುಸರಿಸಬೇಕಾದ ನೀತಿಗಳಿಗೆ ಒಂದು ಚೌಕಟ್ಟು ಒದಗಿಸಲೆಂದು ರೂಪಿಸಲಾಗಿದೆ. ಈಗಾಗಲೇ ಹೇಳಿರುವಂತೆ ಎಡಪಕ್ಷಗಳಿಗೆ ನಿರ್ದಿಷ್ಟವಾಗಿ ಆರ್ಥಿ ನೀತಿಗಳ ಬಗ್ಗೆ, ಐಎಂಎಫ್ - ವಿಶ್ವಬ್ಯಾಂಕ್ ನಿರ್ದೇಶನಗಳಂತೆ ನಡೆಯುವ ನೀತಿಗಳ ಬ ಭಿನ್ನಾಭಿಪ್ರಾಯವಿದೆ. ಆರ್ಥಿಕ ನೀತಿಯ ವಿಷಯಗಳಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಸಂಯುಕ್ತ ರಂಗ ಸರಕಾರದ ನಡುವೆ ಬಹ ವ್ಯತ್ಯಾಸವೇನೂ ಇಲ್ಲ ಎಂಬುದು ಎಲ್ಲರಿಗ ಗೊತ್ತಿರುವ ಸಂಗತಿ.

ಪುಟ 5 ನೋಡಿ




ಸಂಯುಕ್ತ ರಂಗ ನಾವು ಬಯಸುವ ಒಂದು ಮಾದರಿ ಪರ್ಯಾಯವೇನೂ ಅಲ್ಲ ಎಂದು ಸಿಪಿಐ(ಎಂ) ಮೊದಲಿಂದಲೂ ಹೇಳುತ್ತಲೇ ಬಂದಿದೆ. ಒಂದು ನಿಜವಾದ ಪರ್ಯಾಯ ದೇಶ ಎದುರಿಸುತ್ತಿರುವ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಪ್ರಶ್ನೆಗಳ ಮೇಲೆ ಒಂದು ಸಮಾನ ತಿಳುವಳಿಕೆ ಮತ್ತು ಕಣ್ಣೋಟದಿಂದ ಮಾತ್ರವೇ ಮೂಡಿಬರಲು ಸಾಧ್ಯ. ಆದರೆ ಈಗಿರುವ ವರ್ಗಬಲಾಬಲದಲ್ಲಿ ಇದು ಸಾಧ್ಯವಿರಲಿಲ್ಲ.



1. ಲಾಭಕರ ಸಾರ್ವಜನಿಕ ವಲಯದ ಉದ್ದಿಮೆಗಳ ಹಾಗೂ ಮಹತ್ವದ ಮತ್ತು ಪ್ರಧಾನ ವಲಯಗಳಲ್ಲಿರುವ ಉದ್ದಿಮೆಗಳ ಶೇರುಗಳ ಮಾರಾಟದ ಮೂಲಕ ಸಾರ್ವಜನಿಕ ವಲಯವನ್ನು ಕಳಚಿಹಾಕುವುದನ್ನು ನಿಲ್ಲಿಸಬೇಕು.
2. ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ರೋಗಗ್ರಸ್ತ ಘಟಕಗಳನ್ನು ಪುನರುಜ್ಜೀವನ ಗೊಳಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.
3. ಒಟ್ಟಾರೆಯಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ಹಾಗೂ ಬಡತನದ ರೇಖೆಯ ಕೆಳಗಿರುವ ಜನರಿಗೆ ಸಹಾಯಧನದ ಬೆಲೆಗಳ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು.
4. ವಿಮಾ ವಲಯವನ್ನು ತೆರೆಯುವುದನ್ನು ನಿಲ್ಲಿಸಬೇಕು ಹಾಗೂ ವಿಮಾ ನಿಯಂತ್ರಣಾ ಪ್ರಾಧಿಕಾರ ಮಸೂದೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕು.
5. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಇರುವ ಹಣದ ಪ್ರಮಾಣವನ್ನು ಹೆಚ್ಚಿಸಬೇಕು. ಕೃಷಿ ಕಾರ್ಮಿಕರ ಪ್ರಯೋಜನಕ್ಕೆ ಕೃಷಿ ಕಾರ್ಮಿಕ ಮಸೂದೆಯನ್ನು ಅಂಗೀಕರಿಸಬೇಕು.
6. ಸಂಸತ್ತಿನ ಮುಂದಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಬೇಕು.
7. ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಶಾಸನವನ್ನು ತರಬೇಕು.
8. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸಲು ಪರಿಷ್ಕೃತ ಲೋಕಪಾಲ್ ಮಸೂದೆಯನ್ನು ಅಂಗೀಕರಿಸಬೇಕು.

ರಾಷ್ಟ್ರೀಯ ಪ್ರಚಾರಾಂದೋಲನ ಜುಲೈ 15-31, 1997

"ನವರತ್ನ"ಗಳಿಗೆ ನೀಡಿರುವ ಸ್ವಾಯತ್ತತೆ ಕೇವಲ ಹೆಸರಿಗೆ - ಡಾ॥ ಎಂ.ಕೆ.ಪಂಧೆ



ಕೇಂದ್ರ ಕೈಗಾರಿಕಾ ಮಂತ್ರಾಲಯ 'ನವರತ್ನ'(ಅಂದರೆ ಸಾರ್ವಜನಿಕ ವಲಯದ ಅತಿ ಹೆಚ್ಚು ಲಾಭಗಳಿಸುವ ಒಂಭತ್ತು ದೈತ್ಯ ಘಟಕಗಳಿಗೆ 'ಸ್ವಾಯತ್ತತೆ' ಕೊಡಲಾಗಿದೆ ಎಂಬ ಡಂಗುರ ಸಾರಿಸುತ್ತಿದೆ. ಆದರೆ ಇದು ಕೇವಲ ಕಾಗದದಲ್ಲೇ ಉಳಿದಿದೆ, ಮಹತ್ವದ ನಿರ್ಣಯ ಕೈಗೊಳ್ಳುವ ಅಧಿಕಾರ ಈಗಲೂ ಮಂತ್ರಾಲಯದ ಕೈಯಲ್ಲೇ ಇದೆ ಎನ್ನುತ್ತಾರೆ ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆ.

ಈ ಬಗ್ಗೆ ಐ.ಎನ್.ಎಸ್. ಸುದ್ದಿ ಸಂಸ್ಥೆಯೊಂದಿಗೆ ಮಾತನಾಡುತ್ತಾ ಈ 'ನವರತ್ನ'ಗಳ ಆಡಳಿತ ಮಂಡಳಿಗಳು ಪ್ರತಿಯೊಂದು ನಿರ್ಣಯವನ್ನು ಮಂತ್ರಾಲಯದ ಸಮಾಲೋಚನೆಯೊಂದಿಗೇ ಕೈಗೊಳ್ಳಬೇಕಾಗಿದೆ, ಈ ನಿರ್ಣಯಗಳು ಭಾರತ ಸರಕಾರದ ಧೋರಣಾ ಚೌಕಟ್ಟಿನಲ್ಲೇ ಇರಬೇಕಾಗುತ್ತದೆ, ಆದರೆ ಈ ಚೌಕಟ್ಟು ಹೆಚ್ಚೆಚ್ಚಾಗಿ ಸಾರ್ವಜನಿಕ ವಲಯದ ಹಿತಾಸಕ್ತಿಗಳಿಗೆ ಮಾರಕವಾಗುತ್ತಿರುವ ಚೌಕಟ್ಟು ಎಂದು ಪಂಧೆಯವರು ವಿವರಿಸಿದ್ದಾರೆ.

ಕಳೆದ ವಾರ ಕೇಂದ್ರ ಕೈಗಾರಿಕಾ ಮಂತ್ರಿ ಮುರಸೋಳಿಮಾರನ್ ಈ 'ಸ್ವಾಯತ್ತತೆ' ಯ ಪ್ರಕಟಣೆ ಮಾಡಿದ್ದರು. ಸಾರ್ವಜನಿಕ ವಲಯದಿಂದ ಶೇರು ಹಿಂಪಡತ ಆಯೋಗದ ಮಾರ್ಗನಿರ್ದೇಶನಗಳ ಮೇರೆಗೆ ಈ ಕ್ರಮವನ್ನು ಪ್ರಕಟಿಸಲಾಗಿತ್ತು. ಲಾಭ ಮಾಡುತ್ತಿರುವ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಸರಕಾರದ ಶೇರು ಬಂಡವಾಳವನ್ನು ಮಾರುವ ಭಾಗವಾಗಿ ಈ ಕ್ರಮವೆನ್ನು ಸೂಚಿಸಲಾಗಿತ್ತು. ಈ 'ಸ್ವಾಯತ್ತತೆ'ಯ ಮುಖ್ಯ ಅಂಶಗಳೆಂದರೆ ಇಂತಹ ಉದ್ದಿಮೆಗಳ ಆಡಳಿತ ಮಂಡಳಿಗಳು ವಿದೇಶಿ ಅಥವಾ ಖಾಸಗಿ ಕಂಪನಿಗಳೊಂದಿಗೆ ಜಂಟಿ ಪ್ರಯತ್ನ ನಡೆಸಬಹುದು. ದೇಶೀ ಬಂಡವಾಳ ಮಾರುಕಟ್ಟೆಯಿಂದ ಸಾಲ ಎತ್ತಬಹುದು. ಅಥವಾ ಅಂತರ್ರಾಷ್ಟ್ರೀಯ ಮಾರುಕಟ್ಟೆಯಿಂದಲೂ ಸಾಲಪಡೆಯಬಹುದು. ಈ ನವರತ್ನಗಳೆಂದರೆ ಬಿ.ಹೆಚ್.ಇ.ಎಲ್, ಭಾರತ್ ಪೆಟ್ರೋಲಿಯಂ, ಹಿಂದುಸ್ತಾನ್ ಪೆಟ್ರೋಲಿಯಂ, ಇಂಡಿಯನ್ ಆಯಿಲ್ ಕಾರ್ಪೋರೇಶನ್, ಎನ್.ಟಿ.ಪಿ.ಸಿ., ಓ.ಎನ್.ಜಿ.ಸಿ., ಐ.ಪಿ.ಸಿ.ಎಲ್., ಎಸ್.ಎ.ಐ.ಎಲ್., ಮತ್ತು ವಿ.ಎಸ್.ಎನ್.ಎಲ್.

ಈ ಸ್ವಾಯತ್ತತೆ ಕೇವಲ ಕಾಗದದ ಮೇಲಿದೆ ಎನ್ನುತ್ತಾರೆ ಪಂಧೆಯವರು. "ಈ ಯಾವುದೇ ಉದ್ದಿಮೆಯ ಆಡಳಿತ ಮಂಡಳಿಗೆ ಶೇರುಗಳ ಮಾರಾಟದ ವಿಷಯದಲ್ಲಿ ಯಾವುದೇ ಅಭಿಪ್ರಾಯ ಕೊಡುವ ಅಧಿಕಾರ ಈಗಲೂ ಇಲ್ಲ. ಶೇರುಗಳ ಮಾರಾಟವನ್ನು ಅದು ಇಷ್ಟಪಡದಿದ್ದರೂ ಮಾಡಲೇಬೇಕು. ಏಕೆಂದರೆ 'ಈ ಬಗ್ಗೆ ಸರಕಾರವೇ ನಿರ್ಣಯ ತಗೊಳ್ಳುವುದು" ಎಂದಿದ್ದಾರೆ. ಇದಕ್ಕೆ ಅವರು ಉದಾಹರಣೆಗಳನ್ನು ನೀಡಿದ್ದಾರೆ. ವಿದ್ಯುತ್ ಸಂಬಂಧಿಸಿದಂತೆ ಸ್ಥಾಯೀ ಸಮಿತಿಯ ಹದಿನಾರನೇ ವರದಿಯಲ್ಲಿ ವಿದ್ಯುತ್ ಮಂತ್ರಾಲಯದ ಕಾರ್ಯದರ್ಶಿಯವರು ಎನ್.ಟಿ.ಪಿ.ಸಿ. ಮತ್ತು ಇತರ ಪ್ರಮುಖ ವಿದ್ಯುತ್ ವಲಯ ಸಾರ್ವಜನಿಕ ವಲಯದ ಘಟಕಗಳ ಶೇರು ಮಾರಾಟದ ಬಗ್ಗೆ ತಮ್ಮ ಮಂತ್ರಾಲಯದೊಡನೆ ಯಾವುದೇ ಸಮಾಲೋಚನೆ ನಡೆಸಿಲ್ಲ ಎಂದಿದ್ದಾರೆ. "ಎನ್.ಟಿ.ಪಿ.ಸಿ, ಎನ್.ಹೆಚ್.ಪಿ.ಸಿ. ಮತ್ತು ಪವರ್ ಗ್ರಿಡ್ ನಿಜವಾಗಿ ಶೇರು ಮಾರಾಟದ ಪರವಾಗಿರಲಿಲ್ಲ" ಎಂದು ಅವರು ಸ್ಥಾಯಿ ಸಮಿತಿಗೆ ಹೇಳಿದರು. ಇದು ಇತರ ಹಲವು ಸಾರ್ವಜನಿಕ ವಲಯದ ಉದ್ದಿಮೆಗಳ ವಿಷಯದಲ್ಲೂ ನಿಜ. ಅವು ಹಣಕಾಸು ಮತ್ತು ಕೈಗಾರಿಕಾ ಮಂತ್ರಾಲಯದ ಖಾಸಗೀಕರಣದ ಹುರುಪಿನೆದುರು ಬಾಯಿ ಮುಚ್ಚಿ ಕುಳಿತುಕೊಳ್ಳಬೇಕಾಗಿದೆ ಎಂದು ಪಂಧೆಯವರು ಹೇಳುತ್ತಾರೆ.

ಡಾ॥ ಪಂಧೆಯವರ ಪ್ರಕಾರ ಇನ್ನೊಂದು ಪ್ರತಿಗಾಮಿ ಅಂಶವೆಂದರೆ ಸರಕಾರ ಈ 'ನವರತ್ನ'ಗಳು ವಿದೇಶಿ ಕಂಪನಿಗಳೊಂದಿಗೆ ಜಂಟಿ ಉದ್ದಿಮೆಗಳನ್ನು ಹಾಕುವಂತೆ ಒತ್ತಡ ತರುತ್ತಿದೆ. ಬಿ.ಹೆಚ್.ಇ.ಎಲ್. ಅಮೇರಿಕಾದ ಜನರಲ್ ಇಲೆಕ್ಟ್ರಿಕ್ ಮತ್ತು ಜರ್ಮನಿಯ ಸೀಮೆನ್ಸ್ ನೊಂದಿಗೆ ಜಂಟಿ ಉದ್ದಿಮೆ ಹಾಕುವಂತೆ ಒತ್ತಡ ಹೇರಲಾಗುತ್ತಿದೆ.

ಈ ಶೇರು ಹಿಂಪಡೆತದ ಪ್ರಶ್ನೆಯಷ್ಟೇ ಅಲ್ಲ, ಇನ್ನೂ ಹಲವು ನಿರ್ಣಾಯಕ ಅಧಿಕಾರಗಳು ಸರಕಾರದ ಕೈಯಲ್ಲೇ ಇರುತ್ತವೆ. "ಕಾರ್ಮಿಕರೊಂದಿಗೆ ಒಂದು ವೇತನ ಒಪ್ಪಂದಕ್ಕೆ ಸಹಿ ಹಾಕಬೇಕಾದರೆ ವೇತನ ಮಟ್ಟವನ್ನು ಆಡಳಿತ ಮಂಡಳಿ ನಿರ್ಧರಿಸುವಂತಿಲ್ಲ. ಅದನ್ನು ಸರಕಾರ ಮೊದಲು ಮಂಜೂರು ಮಾಡಬೇಕು. ಅದೇ ರೀತಿ ಉದ್ದಿಮೆಯ ಈಗಿರುವ ಸಾಮರ್ಥ್ಯವನ್ನು ವಿಸ್ತರಿಸುವ ಬಗ್ಗೆ ನಿರ್ಧರಿಸುವ ಹಕ್ಕು ಕೂಡಾ ಆಡಳಿತ ಮಂಡಳಿಗಿಲ್ಲ. ಅದನ್ನು ಸರಕಾರವೇ ನಿರ್ಧರಿಸಬೇಕು. ಬಂಡವಾಳದ ಪುನರ್ರಚನೆಯ ಬಗ್ಗೆ ಸಾರ್ವಜನಿಕ ವಲಯದ ಆಡಳಿತ ತಾನೇ ಮಾಡುವಂತಿಲ್ಲ" ಎಂದು ಪಂಧೆಯವರು ಹೇಳಿದ್ದಾರೆ.

ಈ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಸರಕಾರದ ನೀತಿಗಳನ್ನು ರೂಪಿಸುವಲ್ಲಿ ಯಾವುದೇ ಪಾತ್ರವಿರುವುದಿಲ್ಲ. ಆದರೆ ಆ ನೀತಿಗಳ ಪರಿಣಾಮವನ್ನು ಮಾತ್ರ ಅವೇ ಅನುಭವಿಸಬೇಕು. ತನ್ನ ಧೋರಣಾ ನಿರ್ಣಯಗಳು ಸಾರ್ವಜನಿಕ ವಲಯದ ಉದ್ದಿಮೆಗಳ ಲಾಭದಾಯಕತೆ ಹಾಗೂ ಕಾರ್ಯನಿರ್ವಹಣೆಯನ್ನು ಬಹಳವಾಗಿ ತಟ್ಟುವ ಸಂದರ್ಭದಲ್ಲೂ ಸರಕಾರ ಸಂಬಂಧಪಟ್ಟ ಉದ್ದಿಮೆಗಳೊಂದಿಗೆ ಸಮಾಲೋಚನೆ ನಡೆಸುವುದಿಲ್ಲ. ಇದಕ್ಕೊಂದು ದೊಡ್ಡ ಉದಾಹರಣೆಯೆಂದರೆ ಉಕ್ಕು ಕಲ್ಲಿದ್ದಲು ಮತ್ತು ಕೆಲವು ಪ್ರಮುಖ ಇಲೆಕ್ಟ್ರಾನಿಕ್ ಐಟಂಗಳ ಮೇಲಿನ ಆಮದು ಸುಂಕದಲ್ಲಿ ತೀವ್ರ ಕಡಿತ ತರುವಾಗ ಅವು ಸಂಬಂಧಪಟ್ಟ ಯಾವುದೇ ಸಾರ್ವಜನಿಕ ವಲಯದ ಉದ್ದಿಮೆಯ ಆಡಳಿತದೊಡನೆ ಸಮಾಲೋಚನೆ ನಡೆಸಲಿಲ್ಲ. ಐದು ವರ್ಷಗಳಲ್ಲಿ ಎಲ್ಲಾ ಪ್ರಮುಖ ಸರಕುಗಳ ಮೇಲಿನ ಆಮದು ಸುಂಕವನ್ನು 40% ಕ್ಕಿಳಿಸುವುದಾಗಿ ಭಾರತ ಸರಕಾರ ವಿಶ್ವ ವ್ಯಾಪಾರ ಸಂಘಟನೆಗೆ ಮಾತು ಕೊಟ್ಟಿದೆ. ಆದರೆ ಎರಡೇ ವರ್ಷಗಳಲ್ಲಿ ಅದು ಆಮದು ಸುಂಕಗಳನ್ನು ಕೇವಲ 20% ಕ್ಕೆ ಇಳಿಸಿದೆ. ಇದರಿಂದ ಸಾರ್ವಜನಿಕ ವಲಯದ ದೈತ್ಯ ಉದ್ದಿಮೆಗಳ ಮೇಲೆ ಭಾರೀ ಪ್ರತಿಕೂಲ ಪರಿಣಾಮವಾಗಿದೆ. ಏಕೆಂದರೆ ಆಮದುಗಳ ಖರ್ಚು ಈಗ ತುಂಬಾ ಕಡಿಮೆಯಾಗಿ ಬಿಟ್ಟಿದೆ. ಸರಕಾರದ ಪ್ರಕಟಣೆಯ 'ನವರತ್ನ'ಗಳಲ್ಲಿ ಒಂದಾದ ಭಾರತ ಉಕ್ಕು ಪ್ರಾಧಿಕಾರ (ಎಸ್.ಎ.ಐ.ಎಲ್)ಕಳೆದ ವರ್ಷದ ವರೆಗೆ ಭಾರೀ ಲಾಭ ಮಾಡುತ್ತಿದ್ದ ಉದ್ದಿಮೆಯಾಗಿತ್ತು. ಆದರೆ ಈ ಹಣಕಾಸು ವರ್ಷದ ಮೊದಲ ಎರಡು ತಿಂಗಳಲ್ಲೇ ಅದಕ್ಕೆ 279 ಕೋಟಿ ರೂ. ನಷ್ಟವಾಗಿದೆ. ಇದಕ್ಕೆ ಒಂದು ಕಾರಣ ಉಕ್ಕಿನ ಮೇಲಿನ ಆಮದು ಸುಂಕವನ್ನು ತೀವ್ರವಾಗಿ ಇಳಿಸಿದ್ದು. ಸರಕಾರದ 'ಇಡೀ ಧೋರಣೆಯ ಒತ್ತು ಸಾರ್ವಜನಿಕ ವಲಯದ ಲಾಭಗಳನ್ನು ಇಳಿಸಿ, ಕೊನೆಗೆ ಅವು ನಷ್ಟ ಮಾಡಿಕೊಳ್ಳುವ ದಿಕ್ಕಿನಲ್ಲಿರುವಾಗ ಲಾಭ ಹೆಚ್ಚಿಸಲಿಕ್ಕಾಗಿ 'ಸ್ವಾಯತ್ತತೆ' ಕೊಡುತ್ತೇವೆ ಎಂಬ ಮಾತಿಗೆ ಏನರ್ಥವಿದೆ ಎಂದು ಈ ಸಿಐಟಿಯು ಮುಖಂಡರು ಪ್ರಶ್ನಿಸುತ್ತಾರೆ.

'ಸ್ವಾಯತ್ತತೆ' ಎಂಬುದನ್ನು ಕೊಟ್ಟರೂ ಆಡಳಿತ ಮಂಡಳಿಗಳು ಕಾರ್ಮಿಕರಿಗೆ ಪ್ರಯೋಜನವಾಗುವ ಯಾವುದೇ ಸ್ವತಂತ್ರ ಯೋಜನೆಗಳನ್ನು ಕಾರ್ಯಗತಗೊಳಿಸಲು ಅವಕಾಶವಿಲ್ಲ, ಪ್ರತಿಯೊಂದು ಪ್ರಶ್ನೆಯಲ್ಲೂ ಅಂತಿಮ ಅಧಿಕಾರ ಇರುವುದು ಸರಕಾರದ ಕೈಯಲ್ಲೇ. ಉದಾಹರಣೆಗೆ, ಕಲ್ಲಿದ್ದಲು ಉದ್ದಿಮೆಯಲ್ಲಿನ ಪೆನ್ಷನ್ ಸ್ಕೀಮು ಈಗ ಸರಕಾರದ ಬಳಿ ಎರಡು ವರ್ಷಗಳಿಂದ ಧೂಳು ತಿನ್ನುತ್ತಾ ಬಿದ್ದಿದೆ. ಉಕ್ಕು ಪ್ರಾಧಿಕಾರದ ಆಡಳಿತ ಒಂದು ಪೆನ್ಷನ್ ಯೋಜನೆಯನ್ನು ಆರಂಭಿಸಲು ಸಿದ್ಧವಿದೆ. ಆದರೆ ಇದು ಹಾಗೆ ಮಾಡುವಂತಿಲ್ಲ, ಇತರ ಹಲವು ಸಾರ್ವಜನಿಕ ವಲಯದ ಉದ್ದಿಮೆಗಳಲ್ಲೂ ಇದೇ ಕಥೆ.

ಸಾರ್ವಜನಿಕ ವಲಯದ ಉದ್ದಿಮೆಗಳ ಕೆಲಸವನ್ನು ಉತ್ತಮ ಪಡಿಸುವ ಏಕೈಕ ದಾರಿಯೆಂದರೆ ಆಡಳಿತದಲ್ಲಿ ಕಾರ್ಮಿಕರಿಗೆ ಸಕ್ರಿಯ ಪಾತ್ರ ಎಂದು ಒತ್ತಿ ಹೇಳಿದ ಪಂಧೆಯವರು ಈ ಬಗ್ಗೆ ಸರಕಾರ ಕಾರ್ಮಿಕ ಸಂಘಟನೆಗಳೊಂದಿಗೆ ಚರ್ಚಿಸಿ ಒಂದು ವ್ಯವಸ್ಥೆಯನ್ನು ರೂಪಿಸಬೇಕು ಎಂದಿದ್ದಾರೆ.

ಸಂಯುಕ್ತ ರಂಗದ ಸಮಾನ ಕನಿಷ್ಠ ಕಾರ್ಯಕ್ರಮ ಈ ಬಗ್ಗೆ ವಚನ ನೀಡಿದೆ. ವಿ.ಪಿ. ಸಿಂಗ್ ಪ್ರಧಾನ ಮಂತ್ರಿಗಳಾಗಿದ್ದಾಗ 1990ರಲ್ಲಿ ಆಡಳಿತದಲ್ಲಿ ಕಾರ್ಮಿಕರ ಪಾತ್ರದ ಬಗ್ಗೆ ಒಂದು ಮಸೂದೆಯನ್ನು ಮಂಡಿಸಲಾಯಿತು. ಆದರೆ ನಂತರ ಅದನ್ನು ಪಾಸು ಮಾಡಲಾಗಲೀ, ಜಾರಿಗೆ ತರಲಾಗಲೀ ಯಾವುದೇ ಪ್ರಯತ್ನ ನಡೆಯಲಿಲ್ಲ. ಸರಕಾರ ಕಾರ್ಮಿಕರು ಮತ್ತು ಆಡಳಿತ ಜಂಟಿ ಸಮಿತಿಗಳಿಗೆ ಹೆಚ್ಚು ಅಧಿಕಾರ ಮತ್ತು ಸ್ವಾಯತ್ತತೆ ನೀಡಿದರೆ ಅದರಿಂದ ಸಾರ್ವಜನಿಕ ವಲಯದ ಉದ್ದಿಮೆಗಳ ಕೆಲಸ ಅಗಾಧ ರೀತಿಯಲ್ಲಿ ಉತ್ತಮಗೊಳ್ಳುತ್ತದೆ. "ಸರಕಾರ ಆಡಳಿತದಲ್ಲಿ ಕಾರ್ಮಿಕರು ಪಾತ್ರ ವಹಿಸುವಂತೆ ಒಂದು ನೈಜ ವ್ಯವಸ್ಥೆ ರೂಪಿಸಲು ಕ್ರಮ ಕೈಗೊಂಡರೆ ಪರಿಸ್ಥಿತಿ ಸುಧಾರಿಸಬಲ್ಲದು, ಸಾರ್ವಜನಿಕ ವಲಯದ ಕಂಪನಿಗಳ ಲಾಭ ಹೆಚ್ಚಾಗಬಲ್ಲದು ಹಾಗೂ ಕಾರ್ಮಿಕ ಸಂಘಗಳು ಒಂದು ಸಕ್ರಿಯಪಾತ್ರ ವಹಿಸಲು ಸಾಧ್ಯವಾಗುತ್ತದೆ" ಎನ್ನುತ್ತಾರೆ ಡಾ॥ ಪಂಧೆ.

ಸಂಯುಕ್ತ ರಂಗದ ಬಲವಿರುವುದು........

ಪುಟ ನಾಲ್ಕರಿಂದ

ನಮ್ಮ ಪ್ರಯತ್ನ

ಸಂಯುಕ್ತರಂಗವನ್ನು ಮೂರನೇ ಪರ್ಯಾಯವಾಗಿ ಮುಂದಿಡಲಾಗಿದೆ. ಅದರಲ್ಲಿ ಏನೇ ಮಿತಿಗಳಿದ್ದರೂ ರಂಗವನ್ನು ಬಲಪಡಿಸಲು ನಾವು ಪ್ರಯತ್ನಿಸಿದ್ದೇವೆ. ಆದ್ದರಿಂದ ಭಿನ್ನಾಭಿಪ್ರಾಯಗಳು ತಲೆದೋರಿದಾಗಲೆಲ್ಲಾ ಅವನ್ನು ಸೌಹಾರ್ದವಾಗಿ ಪರಿಹರಿಸಿಕೊಳ್ಳಲು ನಾವು ಪ್ರಯತ್ನಿಸಿದ್ದೇವೆ. ರಂಗದ ಇತರ ಪಕ್ಷಗಳಿಂದಲೂ ನಾವು ಇದೇ ನಿಲುವನ್ನು ನಿರೀಕ್ಷಿಸುತ್ತೇವೆ. ಹಲವಾರು ಪಕ್ಷಗಳು ಒಂದು ವೇದಿಕೆಯ ಮೇಲೆ ಬಂದಿರುವಾಗ ಭಿನ್ನಾಭಿಪ್ರಾಯಗಳು ಇರುವುದು, ಆಗಾಗ ಎದ್ದು ಬರುವುದು ಸಹಜ. ಇಂತಹ ಭಿನ್ನಾಭಿಪ್ರಾಯಗಳೇ ಇಲ್ಲ ಎಂದು ನಟಿಸಬೇಕಾಗಿಲ್ಲವಾದರೂ, ಇದನ್ನು ಪರಿಹರಿಸಿಕೊಳ್ಳಲು ಒಂದು ಸೂಕ್ತ ವ್ಯವಸ್ಥೆಯನ್ನು ವಿಕಾಸಗೊಳಿಸಬೇಕು. ಅದೇ ರೀತಿ ಇಂತಹ ಭಿನ್ನಾಭಿಪ್ರಾಯಗಳು ಯಾವುದೇ ರೀತಿಯ ಕಹಿ ಉಂಟು ಮಾಡದಂತೆಯೂ ಎಚ್ಚರ ವಹಿಸಬೇಕು. ಈ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಮತ್ತು ಪರಿಹರಿಸಿಕೊಳ್ಳುವಾಗ ಸಂಯುಕ್ತ ರಂಗದ ಸ್ಥಿರತೆ ಮತ್ತು ಅದನ್ನು ಬಲಪಡಿಸುವ ಅಗತ್ಯ ನಮ್ಮ ಮನಸ್ಸಿನಲ್ಲಿ ಪ್ರಧಾನ ವಾಗಿರಬೇಕು.

ಕಳೆದ ಕೆಲವು ತಿಂಗಳಲ್ಲಿ ಸಂಯುಕ್ತ ರಂಗದ ಹೆಸರಿಗೆ ಕಳಂಕ ತಟ್ಟಿದೆ. ಇದು ಸಂಯುಕ್ತ ರಂಗ ಸರಕಾರದ ಕಾರ್ಯನಿರ್ವಹಣೆಯ ಮೇಲೆ ಎಂತಹ ಪರಿಣಾಮ ಬೀರುತ್ತದೆ ಎಂಬುದರ ಆಧಾರದ ಮೇಲೆ ನಮ್ಮ ಪ್ರತಿಯೊಂದು ಹೆಜ್ಜೆಯನ್ನೂ, ಪ್ರಯತ್ನವನ್ನೂ ಕಾಣಬೇಕಾಗುತ್ತದೆ. ಈಗಿರುವ ಅಸ್ಥಿರ ರಾಜಕೀಯ ಸನ್ನಿವೇಶ ನೋಡಿದರೆ ನಮ್ಮ ನಿರೀಕ್ಷೆಗಿಂತ ಬಹಳ ಮೊದಲೇ ನಾವೊಂದು ಚುನಾವಣೆ ಎದುರಿಸಬೇಕಾಗಿ ಬರಬಹುದು. ಇಂತಹ ಸನ್ನಿವೇಶದಲ್ಲೂ ಕೂಡಾ ಸಂಯುಕ್ತ ರಂಗ ಐಕ್ಯತೆಯಿಂದ ಇದ್ದು ಬಡತನ, ನಿರುದ್ಯೋಗ, ಬೆಲೆಯೇರಿಕೆ, ಹಿಂದುಳಿಕೆ ಇತ್ಯಾದಿ ಜನಗಳ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿದರೆ ಚುನಾವಣೆಗಳಲ್ಲಿ ಉತ್ತಮ ಫಲ ಪಡೆಯಲು ಸಾಧ್ಯ. ಅದೇ ವೇಳೆಗೆ ತಾನೊಂದು ಸ್ವಚ್ಛ ಆಡಳಿತ ನೀಡುವ ರಂಗ ಎಂಬುದನ್ನು ಜನಗಳ ಮುಂದಿಡಬೇಕಾಗುತ್ತದೆ.

ಎರಡು ಕಣ್ಣೋಟಗಳು

ಜನಗಳು ಭ್ರಷ್ಟ ರಾಜಕಾರಣಗಳಿಂದ ಸಂಪೂರ್ಣ ಬೇಸತ್ತು ಹೋಗಿದ್ದಾರೆ. ಆದ್ದರಿಂದ ಈ ಪ್ರಶ್ನೆಯಲ್ಲಿ ನಾವು ರಾಜಿ ಮಾಡಿಕೊಳ್ಳುತ್ತಿದ್ದೇವೆ ಎಂದವರಿಗೆ ಅನಿಸಿದರೆ ಯಾರನ್ನೂ ಅವರು ಬಿಡುವುದಿಲ್ಲ. ಈ ಬಗ್ಗೆ ಸಂಯುಕ್ತ ರಂಗದೊಳಗೆ ಎರಡು ದೃಷ್ಟಿಗಳಿದ್ದ ಹಾಗಿದೆ. ಒಂದು ವಿಭಾಗದ ಅಭಿಪ್ರಾಯವೆಂದರೆ ಸಂಬಂಧಪಟ್ಟ ವ್ಯಕ್ತಿ ಅಥವಾ ಪಕ್ಷ ವಿಚ್ಛಿದ್ರಕಾರಿ ಪಾತ್ರ ವಹಿಸಿದರೂ ಅವರ ಸಂಖ್ಯೆ ಸಾಕಷ್ಟಿರುವುದರಿಂದ ಅವರಿಗೆ ರಂಗದೊಳಗೆ ಬರಲು ಅವಕಾಶ ಕೊಡಬೇಕು. ಇಂತಹ ಒಂದು ದೃಷ್ಟಿಕೋನ ಸಂಯುಕ್ತ ರಂಗದ ಪ್ರತಿಷ್ಟೆಗೆ ಕುಂದು ತರುತ್ತದಷ್ಟೆ. ಇನ್ನೊಂದು ವಿಭಾಗದ ಅಭಿಪ್ರಾಯವೆಂದರೆ ನಾವು ಜನಗಳ ಸಮಸ್ಯೆಗಳನ್ನು ಎದುರಿಸುವತ್ತ ಗಮನ ಕೇಂದ್ರೀಕರಿಸಿ ಹೆಚ್ಚೆಚ್ಚು ಜನರನ್ನು ನಮ್ಮತ್ತ ಆಕರ್ಷಿಸಿ ಸಂಯುಕ್ತ ರಂಗಕ್ಕೆ ವ್ಯಾಪಕ ಬೆಂಬಲವನ್ನು ಗಳಿಸಬೇಕು. ಅಲ್ಪಸಂಖ್ಯಾತರಲ್ಲಿ ವಿಶ್ವಾಸ ಮೂಡಿಸಿ ಯಾರಿಗೂ ರಾಷ್ಟ್ರೀಯ ಐಕ್ಯತೆಯನ್ನು ಮುರಿಯಲು ಅವಕಾಶ ಕೊಡಬಾರದು. ಇತ್ತೀಚೆಗೆ ಎಲ್ಲರ ಎದುರು ಬಂದಿರುವುದು ಈ ಎರಡು ಕಣ್ಣೋಟಗಳೇ.

ಈ ಹಿಂದೆ ಹಲವು ರಾಜಕೀಯ ಸನ್ನಿವೇಶಗಳನ್ನು, ಕ್ಲಿಷ್ಟ ಪರಿಸ್ಥಿತಿಗಳನ್ನು ಎದುರಿಸಿರುವ ಸಂಯುಕ್ತ ರಂಗದ ಪಕ್ಷಗಳು ಒಂದು ವಿಷಯವನ್ನಾದರೂ ಅರಿತುಕೊಳ್ಳುತ್ತಾರೆ ಎಂಬ ಭರವಸೆ ನಮಗಿದೆ - ಅದೆಂದರೆ ರಂಗದ ನಿಜವಾದ ಶಕ್ತಿಯಿರುವುದು ಕೆಲವು ನೀತಿ ಬದ್ಧ ನಿಲುವುಗಳನ್ನು ತಗೊಳ್ಳುವುದರಲ್ಲೇ ಹೊರತು ಅದನ್ನು ಹೇಗಾದರೂ ಬಲಗೊಳಿಸಲು ಕೆಲವು ವ್ಯಕ್ತಿಗಳ ಮೇಲೆ ಗುಂಪುಗಳ ಮೇಲೆ ಅವಲಂಬಿಸುವುದರಿಂದ ಅಲ್ಲ. ಈ ನೀತಿಬದ್ಧ ನಿಲುವುಗಳಿಂದಾಗಿಯೇ ಕೊನೆಗೆ ನಾವು ಜನರೊಂದಿಗೆ ಇರಲು ಸಾಧ್ಯವಾಗುತ್ತದೆ. ಈ ಜನರೇ ತಾನೇ ನಮ್ಮ ಶಕ್ತಿಯ ಮೂಲ? ಸಂಯುಕ್ತ ರಂಗ ರಚನೆಯಲ್ಲಿ ಒಂದು ಪಾತ್ರ ವಹಿಸಿದ ಎಡಪಕ್ಷಗಳು ರಂಗದ ಐಕ್ಯತೆಯನ್ನು ಬಲಪಡಿಸುವಲ್ಲೂ ತಮ್ಮ ಪಾತ್ರವನ್ನು ಮುಂದೆಯೂ ವಹಿಸುತ್ತವೆ.



ಜನಗಳು ಭ್ರಷ್ಟ ರಾಜಕಾರಣಗಳಿಂದ ಸಂಪೂರ್ಣ ಬೇಸತ್ತು ಹೋಗಿದ್ದಾರೆ. ಆದ್ದರಿಂದ ಈ ಪ್ರಶ್ನೆಯಲ್ಲಿ ನಾವು ರಾಜಿ ಮಾಡಿಕೊಳ್ಳುತ್ತಿದ್ದೇವೆ ಎಂದವರಿಗೆ ಅನಿಸಿದರೆ ಯಾರನ್ನೂ ಅವರು ಬಿಡುವುದಿಲ್ಲ.

ಮಹಿಳಾ ಮೀಸಲಾತಿ ಮಸೂದೆ, ಕೃಷಿಕಾರ್ಮಿಕರ ಮಸೂದೆ ಮತ್ತು ಓಬಿಸಿಗಳ ಬಗ್ಗೆ ಮೊಸಳೆ ಕಣ್ಣೀರು

ಸಂಯುಕ್ತ ರಂಗದ 'ಸಮಾನ ಕನಿಷ್ಟ ಕಾರ್ಯಕ್ರಮ' ನೀಡಿದ ಹಾಗೂ ಇದುವರೆಗೂ ಈಡೇರದ ವಚನಗಳಲ್ಲಿ ಮುಖ್ಯವಾದ ಎರಡು ಎಂದರೆ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಹಾಗೂ ಕೃಷಿ ಕಾರ್ಮಿಕರಿಗೆ ಒಂದು ಸಮಗ್ರ ಕೇಂದ್ರೀಯ ಕಾನೂನು, ಆದ್ದರಿಂದ ಸಿಪಿಐ(ಎಂ)ನ ರಾಷ್ಟ್ರೀಯ ಪ್ರಚಾರಾಂದೋಲನದ 8 ಮುಖ್ಯ ಬೇಡಿಕೆಗಳಲ್ಲಿ ಇವೆರಡೂ ಸೇರಿವೆ.

ಮಹಿಳಾ ಮೀಸಲಾತಿ ಮಸೂದೆ ಒಬಿಸಿ ಅಂದರೆ ಇತರ ಹಿಂದುಳಿದ ಮಹಿಳೆಯರಿಗೆ ನಿರ್ದಿಷ್ಟ ಪ್ರಮಾಣದ ಪ್ರಾತಿನಿಧ್ಯವನ್ನು ಗೊತ್ತು ಪಡಿಸದ್ದರಿಂದ ಮೇಲ್ಜಾತಿಗಳ ಮಹಿಳೆಯರಿಗೇ ಹೆಚ್ಚು ಪ್ರಾತಿನಿಧ್ಯ ಸಿಗುವಂತಾಗುತ್ತದೆ ಎಂಬುದು ಶರದ್ ಯಾದವ್, ಉಮಾ ಭಾರತಿ ಮತ್ತು ಅವರ ಬೆಂಬಲಿಗರ ವಾದ. ಇದಕ್ಕೆ ಒಪ್ಪದೇ ಮಹಿಳಾ ಮೀಸಲಾತಿ ಮಸೂದೆ ಪಾಸಾಗದಂತೆ ಅಡ್ಡಿಯಾಗಿರುವುದು ಮಹಿಳಾ ಸಂಘಟನೆಗಳು ಮತ್ತು ಎಡಪಕ್ಷಗಳು ಎಂಬುದು ಕೆಲವರ ವಾದ ಸರಣಿ. ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟುಗಳನ್ನು ಬಿಟ್ಟು ಇತರರಿಗೆ ಶಾಸನ ಸಭೆಗಳಲ್ಲಿ ಮೀಸಲಾತಿಗಳಿಗೆ ಈಗ ಸಂವಿಧಾನದಲ್ಲಿ ಅವಕಾಶವಿಲ್ಲ. ಅದಕ್ಕೆ ಅವಕಾಶ ಕಲ್ಪಿಸಿ ನಂತರ ಈ ಮಸೂದೆ ಪಾಸಾಗಲಿ ಎನ್ನುವುದು ವಾಸ್ತವವಾಗಿ ಹೇಗಾದರೂ ಮಾಡಿ ಮಸೂದೆಯ ಅಂಗೀಕಾರವನ್ನು ಮುಂದೂಡಿ ಅಷ್ಟರವರೆಗಾದರೂ ಪುರುಷ ಪ್ರಾಬಲ್ಯದ ರಾಜಕೀಯವನ್ನು ಕಾಪಾಡಿಕೊಳ್ಳುವ ಒಂದು ತಂತ್ರ ಎಂಬ ಬಗ್ಗೆ 'ಐಕ್ಯರಂಗ' ಓದುಗರಿಗೆ ಈಗಾಗಲೇ ತಿಳಿದಿದೆ.

ಇಂತಹ ವಾದ ಹೂಡುವವರ ಅಪ್ರಾಮಾಣಿಕತೆ(ಅಥವಾ ನಿಜ ಸ್ವರೂಪ!) ಈಗ ಮತ್ತೆ ಬಯಲಿಗೆ ಬಂದಿದೆ. 1980 ರಿಂದಲೂ ನೆನೆಗುದಿಗೆ ಬಿದ್ದಿರುವ ಕೃಷಿ ಕಾರ್ಮಿಕರಿಗೆ ಸಮಗ್ರಕೇಂದ್ರೀಯ ಕಾನೂನಿನ ಬಗ್ಗೆ ಎಡಪಕ್ಷಗಳ ಒತ್ತಾಯ ಹೆಚ್ಚಿದಾಗ ಕೇಂದ್ರವು ತಿಂಗಳ ಹಿಂದೆಯೇ ಎಲ್ಲಾ ರಾಜ್ಯಗಳಿಗೆ ಈ ಮಸೂದೆಯ ಕರಡನ್ನು ಕಳಿಸಿ ಆ ಬಗ್ಗೆ ಅಭಿಪ್ರಾಯ ಕಳಿಸಬೇಕು ಎಂದು ಮತ್ತೆ-ಮತ್ತೆ ನೆನಪಿಸಿದರೂ ಪಶ್ಚಿಮಬಂಗಾಳ, ಕೇರಳ ಮತ್ತು ತ್ರಿಪುರಾದ ಸಿಪಿಐ(ಎಂ) ನೇತೃತ್ವದ ಸರಕಾರಗಳು ಬಿಟ್ಟುಬೇರೆ ಯಾವವೂ ಉತ್ತರಿಸಿಲ್ಲವಂತೆ. ಮಹಾರಾಷ್ಟ್ರ, ಪಂಜಾಬ್, ಹರಿಯಾಣ ಮತ್ತು ಗುಜರಾತ್ ರಾಜ್ಯಗಳಂತೂ ಇದನ್ನು ಬಹಿರಂಗವಾಗಿಯೇ ವಿರೋಧಿಸಿವೆಯಂತೆ. ಕಳೆದ ವಾರ ಕೇಂದ್ರ ಕಾರ್ಮಿಕ ಸಚಿವರು ಕರೆದ ಎಲ್ಲಾ ರಾಜ್ಯಗಳ ಕಾರ್ಮಿಕ ಮಂತ್ರಿಗಳ ಸಭೆಯಲ್ಲಿ ಕೂಡ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳ ಕಾರ್ಮಿಕ ಮಂತ್ರಿಗಳು ಬಿಟ್ಟು ಉಳಿದೆಲ್ಲರಿಂದ ವಿರೋಧ ಬಂತಂತೆ. ಏಕೆ? ಈ ಕೋಟಿಗಟ್ಟಲೆ ಕೃಷಿ ಕಾರ್ಮಿಕರು ದಲಿತ ಜಾತಿಗಳಿಗೆ ಸೇರಿದವರು ಮತ್ತು ಇತರ ಒಬಿಸಿ ಜಾತಿಗಳಿಗೆ ಸೇರಿದವರು ಇವರಲ್ಲಿ 40% ಮಹಿಳೆಯರು. ಅವರಿಗೆ ಜೀವನದ ಕನಿಷ್ಟ ಹಕ್ಕುಗಳನ್ನಾದರೂ ಕೊಡಮಾಡಿಸುವ ಮಸೂದೆಯಿದು. ಇದನ್ನು ಬಹಿರಂಗವಾಗಿ ವಿರೋಧಿಸಿದ ನಾಲ್ಕು ರಾಜ್ಯಗಳಲ್ಲಿನ ಆಳುವ ಪಕ್ಷಗಳ ಸ್ವರೂಪವೂ ಅವರ ವಿರೋಧ ಏಕೆ ಎಂಬುದನ್ನು ಸ್ಪಷ್ಟಗೊಳಿಸುತ್ತದೆ. ಈ ಬಗ್ಗೆ ಶರದ್ ಯಾದವ್ ಅಥವಾ ಉಮಾಭಾರತಿ ತುಟಿಪಿಟಕ್ಕೆನ್ನುವುದಿಲ್ಲವೇಕೆ? ಅವರ ಬೆಂಬಲಿಗರು ವಿಚಾರಸಂಕಿರಣಗಳನ್ನು ನಡೆಸುವುದಿಲ್ಲವೇಕೆ? ಇದಕ್ಕೆ ಕಾರಣ ಸ್ಪಷ್ಟ. ಈಹಿಂದೆ 'ಐಕ್ಯರಂಗ' ದ ಲೇಖನವೊಂದರಲ್ಲಿ ಹೇಳಿದಂತೆ 'ಪುರುಷ ಪ್ರಾಬಲ್ಯದ ರಾಜಕೀಯಕ್ಕೆ ಜಾತಿ ಆಧಾರಿತ ತರ್ಕ ನ್ನೊಡ್ಡುವ' ಅಪ್ರಾಮಾಣಿಕತೆ ಅಥವಾ ನೇರವಂಚನೆ'.

ರಾಷ್ಟ್ರೀಯ ಪ್ರಚಾರಾಂದೋಲನ ಜುಲೈ 19-31, 1997





ಇನ್ನೊಂದು ಅಪಾಯಕಾರಿ 'ಸೇನೆ' ಉದಯ

ಮಹಾರಾಷ್ಟ್ರದ ರಾಜಕೀಯ ರಂಗದಲ್ಲಿ ಇನ್ನೊಂದು 'ಸೇನೆ' ಹುಟ್ಟಿಕೊಂಡಿದೆ. ಅದುವೇ 'ಅಖಿಲ ಭಾರತ ಸೇನಾ' (ಎಬಿಎಸ್) ಇದರ ಮುಖಂಡರು ಯಾರು ಗೊತ್ತಾ? ಭೂಗತ ಜಗತ್ತಿನ ದೊರೆ, ಕುಖ್ಯಾತ ಕ್ರಿಮಿನಲ್ ಅರುಣ್ ಗಾವ್ಳಿ.

ಸ್ವಲ್ಪ ಸಮಯದ ಹಿಂದೆ ರಚಿಸಲಾಗಿದ್ದ ಎಬಿಎಸ್ ಜುಲೈ 18 ರಂದು ಮುಂಬಯಿ ಯಲ್ಲಿ ಒಂದು ಬೃಹತ್ ರ್‍ಯಾಲಿ ನಡೆಸುವ ಮೂಲಕ 'ರಾಜಕೀಯ ಮಾನ್ಯತೆ' ಪಡೆಯಲು ಯತ್ನಿಸಿತು.

ರಾಜ್ಯದಲ್ಲಿ ಈಗ ಆಡಳಿತದಲ್ಲಿರುವ ಶಿವಸೇನೆಗೂ, ಈ ಸೇನೆಗೂ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ಧ್ವಜದ ಬಣ್ಣವೂ ಒಂದೆ, ಧ್ಯೇಯವೂ ಒಂದೇ, ಘೋಷಣೆ ಯೂ ಒಂದೆ. ಚಿಹ್ನೆ ಮಾತ್ರ ಬೇರೆ ಬೇರೆ. ಶಿವಸೇನೆಯ ಚಿಹ್ನೆ ವ್ಯಾಘ್ರ, ಎಬಿಎಸ್ ಚಿಹ್ನೆಗೋವು.

ಕಾಲಾ ಘೋಡಾದಲ್ಲಿ ನಡೆದ ಎಬಿಎಸ್ ರ್‍ಯಾಲಿ ಬಿಜೆಪಿ-ಶಿವಸೇನೆ ಸರಕಾರವನ್ನು ವಜಾ ಮಾಡುವಂತೆ ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಿತು.

ಬೆದರಿಕೆ

ಕ್ರಿಮಿನಲ್ ದೊರೆಯ ಹಿಂದಿನ ದುಷ್ಕೃತ್ಯಗಳನ್ನು ಮರೆಯಬೇಕು ಎಂಬುದು ಈ ರ್‍ಯಾಲಿ ನೀಡಿದ 'ಒಂದು ಸಂದೇಶ' ವಿದ್ದಂತಿತ್ತು. ಅರುಣ್ ಗಾವ್ಳಿಯನ್ನು ಇನ್ನು ಮುಂದೆ ಕುಖ್ಯಾತ ಗ್ಯಾಂಗ್ ನಾಯಕ ಅಥವಾ ಡಾನ್ ಎಂದು ಕರೆಯಬಾರದು ಎಂದು ಮುಂಬಯಿ ಪ್ರದೇಶ ಎಬಿಎಸ್ ಅಧ್ಯಕ್ಷ ಭರತ್ ಮಾತ್ರೆ ರಾಜ್ಯ ಸರಕಾರಕ್ಕೆ ಮತ್ತು ಪತ್ರಿಕೆಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಅಖಿಲ ಭಾರತ ಸೇನಾದ ಬಲ ಪ್ರದರ್ಶನದಿಂದ ಶಿವಸೇನೆಯಲ್ಲಿ ನಡುಕ ಉಂಟಾಗಿದೆ ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಏನೇ ಇದ್ದರೂ ಎಬಿಎಸ್ ರಚನೆ ಒಂದು ಕಳವಳಕಾರಿ ವಿದ್ಯಮಾನ ಎನ್ನುವುದರಲ್ಲಿ ಎರಡು ಮಾತಿಲ್ಲ.

ಕಾರ್ಪೊರೇಟರಿಂದ ಬಾಲಕಿಯ ಕೊಲೆ

ಅರುಣ್ ಗಾವ್ಳಿಯ 'ಪಕ್ಷ' ಮುಂದುವರಿಯಲಿರುವ ಹಾದಿಯ ದಿಕ್ಸೂಚಿಯೇನೋ ಎನ್ನುವಂಥ ಘಟನೆಯೊಂದು ನಾಗಪುರದಲ್ಲಿ ನಡೆದಿದೆ.

ನಾಗಪುರ ಮಹಾನಗರ ಪಾಲಿಕೆಯ ಪಕ್ಷೇತರ ಸದಸ್ಯ ಭರತ್ ಮೊಹಾದಿಕರ್ ಮತ್ತು ಆತನ ಬೆಂಬಲಿಗರು 18 ವರ್ಷದ ಬಾಲಕಿಯೊಬ್ಬಳನ್ನು ಕೊಂದು ಹಾಕಿದ್ದಾರೆ. ಹಾಗೂ ಆ ಹುಡುಗಿಯ ಇಬ್ಬರು ಸೋದರರನ್ನು ಗಾಯಗೊಳಿಸಿದ್ದಾರೆ. ಈ ಮೊಹಾದಿಕರ್ ಎಬಿಎಸ್ ನ ಸ್ಥಳೀಯ ಸಮಿತಿಯ ಪದಾಧಿಕಾರಿ ಆಗಿರುವುದು ಇಲ್ಲಿ ಗಮನಾರ್ಹ.

17 ರಂದು ಕೊಲೆ ನಡೆದಿದ್ದು 18 ರಂದು ಮುಂಬಯಿಯಲ್ಲಿನ ಎಬಿಎಸ್ ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ಭರತ್ ಮೊಹಾದಿಕರ್ ಹೋಗಿದ್ದ.

ಮೊಹಾದಿಕರ್ ಮತ್ತು ಆತನ ಬೆಂಬಲಿಗರು ಮನೆಯೊಂದರ ಮೇಲೆ ಧಾಳಿಮಾಡಿ ಆ ಮನೆಯಲ್ಲಿದ್ದ ಯುವಕನೊಬ್ಬನ ಮೇಲೆ ಹಲ್ಲೆಗೆ ಯತ್ನಿಸಿದಾಗ ಅದನ್ನು ಪ್ರತಿಭಟಿಸಿದ ಸೋದರಿ ರೇಖಾ(18ವರ್ಷ)ಳ ಕೈ ಕತ್ತರಿಸಿ ಇರಿದು ಕೊಲ್ಲಲಾಯಿತು.



ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್

ಕಾ|| ಜಸ್ಬೀರ್‌ಸಿಂಗ್ ಹಂತಕರಿಗೆ ಜೀವಾವಧಿ ಶಿಕ್ಷೆ

ಎಸ್.ಎಫ್.ಐ. ಹರ್ಯಾಣ ರಾಜ್ಯ ಸಮಿತಿಯ ಅಧ್ಯಕ್ಷರಾಗಿದ್ದ ಕಾಂ|| ಜಸ್ಬೀರ್ ಸಿಂಗ್ ಸುಮಾರು 11 ವರ್ಷಗಳ ಹಿಂದೆ ಕೊಲೆಯಾಗಿದ್ದರು. ಇದೀಗ ಈ ಹತ್ಯೆ ಪ್ರಕರಣದ ವಿಚಾರಣೆ ನಡೆಸುತ್ತಿದ್ದ ಸುಪ್ರೀಂಕೋರ್ಟ್ ತೀರ್ಪು ಹೊರಬಿದ್ದಿದ್ದು, ಹಂತಕರಿಗೆ ಹಲವು ರೀತಿಯ ಶಿಕ್ಷೆಯನ್ನು ಪ್ರಕಟಿಸಲಾಗಿದೆ. ನ್ಯಾಯಮೂರ್ತಿ ಎಂ.ಕೆ.ಮುಖರ್ಜಿ ಮತ್ತು ನ್ಯಾಯಮೂರ್ತಿ ಕೆ.ಟಿ.ಥಾಮಸ್ ಅವರುಳ್ಳ ವಿಭಾಗಪೀಠ ತೀರ್ಪನ್ನು ನೀಡಿದೆ.

ಸತ್ಯಪ್ರಕಾಶ್ ಮತ್ತು ಸತ್ಬೀರ್ ಮೋರೆಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಇನ್ನಿಬ್ಬರು ಆರೋಪಿಗಳಾದ ಹಿಮ್ಮತ್ ಸಿಂಗ್ ಮತ್ತು ದೇವೇಂದ್ರ ಭಾನ್ ಅವರಿಗೆ ಐದು ವರ್ಷಗಳ ಕಾರಾಗೃಹ ಶಿಕ್ಷೆಯನ್ನು ನೀಡಲಾಗಿದೆ.

1986 ರ ಅಕ್ಟೋಬರ್ 23 ರಂದು ಕಾ|| ಜಸ್ಬೀರ್ ಸಿಂಗ್‌ರ ಹತ್ಯೆಯಾಗಿತ್ತು.

ಕುರುಕ್ಷೇತ್ರ ವಿಶ್ವವಿದ್ಯಾಲಯದ ನರಹರಿ ಹಾಸ್ಟೆಲ್ ಆವರಣಕ್ಕೆ ಹಾಡುಹಗಲಲ್ಲೇ ಶಸ್ತ್ರಸಜ್ಜಿತರಾಗಿ ನುಗ್ಗಿದ್ದ ದುಷ್ಕರ್ಮಿಗಳು ಕಾ|| ಜಸ್ಬೀರ್ ಮತ್ತು ಡಾ|| ಸುಮೇರ್ ಸಿಂಗ್ ಅವರ ಮೇಲೆ ಮಾರಕ ಹಲ್ಲೆ ನಡೆಸಿದ್ದರು. ಜಸ್ಬೀರ್ ಮೃತರಾಗಿ ಸುಮೇರ್ ತೀವ್ರವಾಗಿ ಗಾಯಗೊಂಡಿದ್ದರು. ಸುಮೇರ್ ಶಸ್ತ್ರಚಿಕಿತ್ಸೆಗೆ ಒಳಗಾಗಿ ಎರಡು ತಿಂಗಳು ಆಸ್ಪತ್ರೆಯಲ್ಲಿದ್ದರು.

ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದ ಜಸ್ಬೀರ್ ಆಗ ಎಸ್.ಎಫ್.ಐ ಹರ್ಯಾಣ ರಾಜ್ಯ ಸಮಿತಿಯ ಅಧ್ಯಕ್ಷರಾಗಿದ್ದರು. ಕುರುಕ್ಷೇತ್ರ ವಿ.ವಿ.ಯ ಎಂ.ಎ.(ಅರ್ಥಶಾಸ್ತ್ರ) ಮೆರಿಟ್ ಲಿಸ್ಟ್‌ನಲ್ಲಿ ಎರಡನೇ ಸ್ಥಾನದಲ್ಲಿದ್ದರು.

1986 ರಲ್ಲಿ ದೇವಿಲಾಲರ ನೇತೃತ್ವದ ಲೋಕದಳ-ಬಿಜೆಪಿ ಮೈತ್ರಿಕೂಟ ರಾಜೀವ್-ಲೋಂಗವಾಲ್ ಒಪ್ಪಂದದ ವಿರುದ್ಧ 'ನ್ಯಾಯಯುದ್ಧ' ಸಾರಿತ್ತು. ಈ ಒಪ್ಪಂದ ಹರ್ಯಾಣದ ಹಿತಕ್ಕೆ ವಿರುದ್ಧವಾಗಿದೆ ಎಂಬ ಆಧಾರದಲ್ಲಿ ಪ್ರಾದೇಶಿಕ ಭಾವನೆಯನ್ನು ಬಡಿದೆಬ್ಬಿಸುವ ರೀತಿಯಲ್ಲಿ ಚಳುವಳಿ ಹುಟ್ಟಿಕೊಂಡಿತ್ತು. ವಿದ್ಯಾರ್ಥಿಗಳ ಬೆಂಬಲವನ್ನು ಪಡೆಯಲೂ ಅದು ಯತ್ನಿಸಿತು. ಕ್ರಿಮಿನಲ್ ಹಿನ್ನೆಲೆಯುಳ್ಳ ವಿದ್ಯಾರ್ಥಿ ನಾಯಕರ ಬೆಂಬಲ ಪಡೆಯಲಾಯಿತು. ಛಾತ್ರ ಸಭಾ ಎಂಬ ವಿದ್ಯಾರ್ಥಿ ಸಂಘಟನೆ ಈ ಮೈತ್ರಿಕೂಟ ಸ್ಥಾಪಿಸಿತು.

ಪ್ರಾದೇಶಿಕ ಆಧಾರದ ಈ ಆಂದೋಲನವನ್ನು ಎಸ್.ಎಫ್.ಐ. ಪ್ರಬಲವಾಗಿ ವಿರೋಧಿಸಿತ್ತು. ಈ ಚಳುವಳಿಯ ನಿಜ ಉದ್ದೇಶವನ್ನು ವಿವರಿಸುವ ಕಿರು ಹೊತ್ತಿಗೆಯೊಂದನ್ನು ಪ್ರಕಟಿಸಿತು. ಇದರ ಫಲವಾಗಿ 'ನ್ಯಾಯಯುದ್ಧ' ಕ್ಕೆ ರಾಜ್ಯದ ವಿದ್ಯಾರ್ಥಿ ಸಮುದಾಯದಿಂದ ಬೆಂಬಲ ಸಿಗಲಿಲ್ಲ. ಹೀಗಾಗಿ ಲೋಕದಳ-ಬಿಜೆಪಿ ಕೂಟದ ಕೆಂಗಣ್ಣು ಎಸ್.ಎಫ್.ಐ ಮೇಲೆ ಬಿತ್ತು.

1986 ರಲ್ಲಿ ಹಿಸ್ಸಾರ್ ಕೃಷಿ ವಿ.ವಿ.ಗೆ ನಡೆದ ಚುನಾವಣೆಯಲ್ಲಿ ಛಾತ್ರ ಸಭಾವನ್ನು ಸೋಲಿಸಿ ಎಸ್.ಎಫ್.ಐ ಜಯಭೇರಿ ಭಾರಿಸಿತು. ಕುರುಕ್ಷೇತ್ರ ವಿ.ವಿ. ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಸ್ಥಾನವನ್ನು ಎಸ್.ಎಫ್.ಐ ಗೆದ್ದುಕೊಂಡಿತು.

ಅದೇ ವರ್ಷ ಅಕ್ಟೋಬರ್‌ನಲ್ಲಿ ಕುರುಕ್ಷೇತ್ರ ವಿ.ವಿ.ಯ ಭೋದಕೇತರ ಸಿಬ್ಬಂದಿ ತಮ್ಮ ನ್ಯಾಯಸಮ್ಮತ ಬೇಡಿಕೆಗಳನ್ನು ಮುಂದಿಟ್ಟು ಹೋರಾಟಕ್ಕಿಳಿದರು. ಎಸ್.ಎಫ್.ಐ. ಅವರ ಬೆಂಬಲಕ್ಕೆ ನಿಂತಿತು. ನೌಕರರು ಹಾಗೂ ವಿದ್ಯಾರ್ಥಿಗಳ ಏಕತೆಯನ್ನು ಮುರಿಯಲು ವಿ.ವಿ. ಆಡಳಿತ ವರ್ಗ ಛಾತ್ರ ಸಭಾದ ನೆರವನ್ನು ಯಾಚಿಸಿತು. ವಿದ್ಯಾರ್ಥಿಗಳಲ್ಲದ ಹಾಗೂ ಕಟ್ಟಾ ಕ್ರಿಮಿನಲ್‌ಗಳನ್ನು ವಿ.ವಿ. ಕ್ಯಾಂಪಸ್ ಹಾಗೂ ಹಾಸ್ಟೆಲ್‌ಗೆ ಬರಲು ಬಿಡಲಾಯಿತು. ವಿದ್ಯಾರ್ಥಿ ಸಂಘದ ಹಣವನ್ನು ಕ್ರಿಮಿನಲ್‌ಗಳ ದುಷ್ಟ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಛಾತ್ರ ಸಭಾ ನಡೆಸಿದ ಯತ್ನವನ್ನು ಎಸ್.ಎಫ್.ಐ ಯಶಸ್ವಿಯಾಗಿ ತಡೆಯಿತು.

ಈ ಸೋಲಿನಿಂದ ಸಿಟ್ಟಿಗೆದ್ದ ಛಾತ್ರ ಸಭಾ ತನ್ನ ತಂತ್ರ ಫಲಿಸದ ಮರುದಿನವೇ ಅಂದರೆ 1986 ಅಕ್ಟೋಬರ್ 23 ರಂದು ಹತಾಶರಾಗಿ ಕಾ|| ಜಸ್ಬೀರ್ ಹಾಗೂ ಡಾ|| ಸುಮೇರ್ ಮೇಲೆ ಹಲ್ಲೆ ನಡೆಸಿತು. ಕಾ|| ಜಸ್ಬೀರ್ ಹುತಾತ್ಮರಾದರು.

ಸ್ವಾಗತ

ಸುಮಾರು ಒಂದು ದಶಕದಷ್ಟು ದೀರ್ಘ ಕಾಲದ ನಂತರ ಹೊರಬಿದ್ದಿರುವ ಸುಪ್ರೀಂ ಕೋರ್ಟ್ ತೀರ್ಪನ್ನು ಎಸ್.ಎಫ್.ಐ ಹರ್ಯಾಣ ರಾಜ್ಯ ಸಮಿತಿ ಸ್ವಾಗತಿಸಿದೆ.

ಹೇಯ ಅಪರಾಧಗಳನ್ನು ನಡೆಸುವ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಜಾಸತ್ತಾತ್ಮಕ ಚಳುವಳಿಗೆ ಅಡ್ಡಿಪಡಿಸುವ ಶಕ್ತಿಗಳಿಗೆ ಈ ತೀರ್ಪು ಒಂದು ಪಾಠವಾದೀತು ಎಂದು ಅದು ಆಶಯ ವ್ಯಕ್ತಪಡಿಸಿದೆ.

ನೆರೆ ಪರಿಹಾರ ಕಾರ್ಯಕ್ಕೆ ಡಿವೈಎಫ್‌ಐ ಕರೆ

ಕೇರಳ: ಪ್ರವಾಹ, ಸಮುದ್ರ ಕೊರತ ಮುಂತಾದ ಪ್ರಕೃತಿ ವಿಕೋಪಕ್ಕೆ ತುತ್ತಾಗಿರುವ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳನ್ನು ಹಮ್ಮಿಕೊಳ್ಳುವಂತೆ ಡಿವೈಎಫ್‌ಐ ಕೇರಳ ರಾಜ್ಯ ಸಮಿತಿ ತನ್ನ ಘಟಕಗಳು ಮತ್ತು ಕಾರ್ಯಕರ್ತರಿಗೆ ಕರೆ ನೀಡಿದೆ.

ಉತ್ತರದ ಕಾಸರಗೋಡು ಮತ್ತು ಪಾಲಕ್ಕಾಡ್ ಜಿಲ್ಲೆಗಳಲ್ಲಿ ಮುಖ್ಯವಾಗಿ ನೆರೆಯಿಂದ ಅಪಾರ ಹಾನಿ ಸಂಭವಿಸಿದ್ದು ಅನೇಕ ಜನರು ಮೃತಪಟ್ಟಿದ್ದಾರೆ.

ಭ್ರಷ್ಟಾಚಾರ ವಿರೋಧಿ ಆಂದೋಲನ

ಕೇರಳ ಡಿವೈಎಫ್‌ಐ ರೂಪಿಸಿದ್ದ ಭ್ರಷ್ಟಾಚಾರ ವಿರೋಧಿ ಆಂದೋಲನದ ಎರಡನೇ ಘಟ್ಟ ಮುಕ್ತಾಯಗೊಂಡಿದೆ. ಅದರ ಅಂಗವಾಗಿ ಜಿಲ್ಲಾ ಸಮಾವೇಶಗಳು ನಡೆದಿದ್ದು ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರು, ವಕೀಲರು, ಸಾಮೂಹಿಕ ಸಂಘಟನೆಗಳ ಮುಖಂಡರು ಮತ್ತು ಇತರ ಸಾಮಾಜಿಕ ಕಾರ್ಯಕರ್ತರು ಸಮಾವೇಶಗಳಲ್ಲಿ ಭಾಗವಹಿಸಿದ್ದರು.

ಸಮಾಜದ ಎಲ್ಲಾ ಮಟ್ಟಗಳಲ್ಲಿ ಕ್ಯಾನ್ಸರ್‌ನಂತೆ ಹುಟ್ಟುತ್ತಿರುವ ಭ್ರಷ್ಟಾಚಾರವನ್ನು ತಡೆಗಟ್ಟುವುದು ಅಗತ್ಯವಾಗಿದೆ ಎಂಬುದು ಭಾಷಣಕಾರರ ಒಮ್ಮತದ ಅಭಿಪ್ರಾಯವಾಗಿತ್ತು. ಭ್ರಷ್ಟಾಚಾರದಿಂದಾಗಿ ಎಲ್ಲಾ ರಾಜಕಾರಣಿಗಳನ್ನು ಕೀಳಾಗಿ ಕಾಣಲಾಗುತ್ತಿದೆ. ಯಾವುದಾದರೂ ಮಾರ್ಗದಿಂದ ಸಂಪತ್ತನ್ನು ಶೇಖರಿಸುವುದು ಹಾಗೂ ಇರುವ ಸಂಪತ್ತನ್ನು ರಕ್ಷಿಸಿಕೊಳ್ಳುವುದೇ ರಾಜಕೀಯ ಎಂಬ ಭಾವನೆ ಜನರಲ್ಲಿ ಬೇರೂರುವಂತೆ ಅನೇಕ ರಾಜಕೀಯ ಮುಖಂಡರು ಮಾಡಿರುವುದೇ ಇದಕ್ಕೆ ಕಾರಣ ಎಂದು ಅವರು ಹೇಳಿದರು.

ಈ ಕೆಟ್ಟ ಪ್ರವೃತ್ತಿಯ ಮೇಲೆ ಬೆಳಕು ಚೆಲ್ಲಿ ನಿರ್ದಿಷ್ಟ ಕಚೇರಿಗಳು ಮತ್ತು ಸ್ಥಳಗಳಲ್ಲಿ ಭ್ರಷ್ಟಾಚಾರ ವಿರೋಧಿ ಕಾರ್ಯಕ್ರಮದಲ್ಲಿ ಜನರು ಸಾಮೂಹಿಕವಾಗಿ ಪಾಲ್ಗೊಳ್ಳುವಂತೆ ಮಾಡುವುದು ಡಿವೈಎಫ್‌ಐ ಉದ್ದೇಶವಾಗಿದೆ.

ಪಂಚಾಯತಿ ಮಟ್ಟದಲ್ಲಿ

ಪಂಚಾಯತಿ ಮಟ್ಟಗಳಲ್ಲಿಯೂ ಸಮಿತಿಗಳನ್ನು ರಚಿಸುವುದು ಆಂದೋಲನದ ಮುಂದಿನ ಹೆಜ್ಜೆಯಾಗಿದೆ. ನಿರ್ದಿಷ್ಟ ವಿಷಯಗಳಲ್ಲಿ ನಿಜವಾದ ಹೋರಾಟಗಳನ್ನು ಮುಂದಿನ ತಿಂಗಳು ನಡೆಸಲಾಗುತ್ತದೆ.

ಮುಂಬಯಿ ಗೋಲಿಬಾರಿಗೆ ವ್ಯಾಪಕ ಪ್ರತಿಭಟನೆ

ಹತ್ತಾರು ದಲಿತರ ಸಾವಿಗೆ ಕಾರಣವಾದ ಮುಂಬಯಿ ಗೋಲಿಬಾರ್ ಪ್ರಕರಣಕ್ಕೆ ದೇಶದ ಹಲವು ಭಾಗಗಳಲ್ಲಿ ಭಾರಿ ಪ್ರತಿಭಟನೆ ವ್ಯಕ್ತವಾಗಿದೆ. ಗುಜರಾತ್, ಕರ್ನಾಟಕ ಮೊದಲಾದ ರಾಜ್ಯಗಳಲ್ಲಿ ದಲಿತ ಸಂಘಟನೆಗಳು ಬೀದಿಗಿಳಿದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದವು.

ಗುಜರಾತಿನಲ್ಲಿ ಪ್ರತಿಭಟನಾಕಾರರ ಮೇಲೆ ಪೋಲೀಸರು ಗೋಲಿಬಾರ್ ನಡೆಸಿದ್ದರಿಂದ ನಾಲ್ಕು ಜನರು ಮೃತಪಟ್ಟರು.

ದೆಹಲಿಯಲ್ಲಿ ಲಾಠಿ ಪ್ರಹಾರ

ಶಿವಸೇನೆ - ಬಿಜೆಪಿ ಆಡಳಿತ ಮಹಾರಾಷ್ಟ್ರದಲ್ಲಿ ದಲಿತರ ಕ್ರೂರ ಹತ್ಯೆಯನ್ನು ಪ್ರತಿಭಟಿಸಿ ದೆಹಲಿಯಲ್ಲಿ ಪ್ರದರ್ಶನ ನಡೆಸುತ್ತಿದ್ದ ಸಿಪಿಐ(ಎಂ) ನೇತೃತ್ವದ ನೂರಾರು ಕಾರ್ಯಕರ್ತರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದರು. ಜಲಫಿರಂಗಿಯನ್ನು ಪ್ರಯೋಗಿಸಿದರು. ಜಲಫಿರಂಗಿಯಿಂದಾಗಿ ಒಬ್ಬ ಕಾರ್ಮಿಕನ ಕಣ್ಣಿಗೆ ಹಾನಿಯಾಗಿದ್ದು ಆಸ್ಪತ್ರೆಗೆ ಸೇರಿಸಲಾಗಿದೆ.

'ದಲಿತರ ಕೊಲೆಗಡುಕ ಬಿಜೆಪಿ-ಶಿವಸೇನೆ ಸರಕಾರಕ್ಕೆ ಧಿಕ್ಕಾರ' ಮುಂತಾದ ಘೋಷಣೆಗಳನ್ನು ಕೂಗುತ್ತಾ ಭಿತ್ತಿ ಪತ್ರಗಳನ್ನು ಹಿಡಿದು ಮಹಾರಾಷ್ಟ್ರ ಸದನದತ್ತ ಸಾಗಿದ ಕಾರ್ಯಕರ್ತರ ಮೇಲೆ ಪೋಲೀಸರು ದಬ್ಬಾಳಿಕೆ ನಡೆಸಿದರು. ಆದರೆ ಅದನ್ನು ಲೆಕ್ಕಿಸದೆ ಮುನ್ನುಗ್ಗಿದ ಪ್ರದರ್ಶನಕಾರರು ಚದುರಲು ನಿರಾಕರಿಸಿದರು. ಮಹಾರಾಷ್ಟ್ರ ಸದನ ಆವರಣದ ದ್ವಾರದಲ್ಲಿ ಪ್ರತಿಭಟನಾ ಸಭೆಯನ್ನು ನಡೆಸುವಲ್ಲಿ ಯಶಸ್ವಿಯಾದರು.

ಸಿಪಿಐ(ಎಂ) ದೆಹಲಿ ರಾಜ್ಯಕಾರ್ಯದರ್ಶಿ ಜೋಗೇಂದ್ರ ಶರ್ಮಾ, ಕಾರ್ಯದರ್ಶಿ ಮಂಡಲಿ ಸದಸ್ಯೆ ಹಾಗೂ ಎಐಡಿಡಬ್ಲ್ಯೂಎ ಪ್ರಧಾನ ಕಾರ್ಯದರ್ಶಿ ಬೃಂದಾಕಾರಟ್, ದೆಹಲಿ ರಾಜ್ಯ ಸಿಐಟಿಯು ಕಾರ್ಯದರ್ಶಿ ಕೆ.ಎಂ.ತಿವಾರಿ, ದೆಹಲಿ ರಾಜ್ಯ ಡಿವೈಎಫ್‌ಐ ಕಾರ್ಯದರ್ಶಿ ಮಹೇಶ್ ಕುಮಾರ್, ಮತ್ತು ಜೆ.ಎನ್.ಯು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಬಟ್ಟಿಲಾಲ್ ಬೈವಾ ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದರು.

ಶಿವಸೇನೆ ಮತ್ತು ಬಿಜೆಪಿ ಕೋಮು ಹಾಗೂ ಜಾತೀವಾದಿ ಬಣ್ಣವನ್ನು ಬಹಿರಂಗಪಡಿಸಲು ಜನತೆಗೆ ಈ ಸಭೆ ಕರೆ ಕೊಟ್ಟಿತು.

ಕೊನೆ ಎಂದು?

ಪುಟ ಒಂದರಿಂದ

ದೇಶದ ಐವತ್ತನೆಯ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿರುವ ಈಗಲೂ ಹಲವಾರು ಹಳ್ಳಿಗಳಲ್ಲಿ ಹೋಟೆಲುಗಳಲ್ಲಿ ದಲಿತರಿಗಾಗಿ ಪ್ರತ್ಯೇಕ ಕಪ್ಪು, ಬಸಿ ಇಡಲಾಗುತ್ತಿದೆ. ದೇವಸ್ಥಾನಗಳಲ್ಲಿ ಪ್ರವೇಶ ನಿರಾಕರಿಸಲಾಗುತ್ತಿದೆ. ಶ್ರೀಮಂತರ ಮನೆಗಳಲ್ಲಿ ದನಕ ರುಗಳಂತೆ ಹೊರಗೇ ಇರಬೇಕಾಗುತ್ತದೆ. ಇವರೆಲ್ಲರಿಗಿಂತ ನಾಯಿಯೇ ವಾಸಿ. ಸಾವುಕಾರರ ಹಾಸಿಗೆಯ ಮೇಲೆ ಮಲಗುವ ಅವಕಾಶ ಅದಕ್ಕಿದೆ.

ಸಂವಿಧಾನದಲ್ಲಿ ದಲಿತರು- ಹಿಂದುಳಿದವರ ಸಲುವಾಗಿ ಸಾಕಷ್ಟು ರಕ್ಷಣೆಗಳಿದ್ದರೂ ಕೂಡ ಆ ಸಂವಿಧಾನವನ್ನು ಅನುಷ್ಠಾನದಲ್ಲಿ ತರಬೇಕಾಗಿರುವ ವರ್ಗಗಳೇ ಅದಕ್ಕೆ ಅಡ್ಡ ಬರುತ್ತಿವೆ. ಭೂಮಾಲಕ - ಬಂಡವಾಳಶಾಹಿ ಪ್ರಜಾಪ್ರಭುತ್ವ ಶಕ್ತಿಗಳ ಬಲಸಂವರ್ಧನೆಗೆ ದಲಿತರ ಮೇಲಿನ ದೌರ್ಜನ್ಯಕ್ಕೆ ತಡೆ ಅಗತ್ಯ. ಡಾ|| ಅಂಬೇಡ್ಕರ್ ಪ್ರತಿಮೆಗಾಗುವ ಅವಮಾನ ನಿಲ್ಲುವುದು ಅಗತ್ಯ.

ಇದೇ ಸಮಯದಲ್ಲಿ ದಲಿತರು ಕೂಡ ಹಲವಾರು ಸಂಘಟನೆಗಳಾಗಿ ವಿಭಜಿಸಿಕೊಳ್ಳುವುದು ಸರಿಯಲ್ಲ. ದಲಿತರಲ್ಲದವರನ್ನೆಲ್ಲಾ ತಮ್ಮ ಶತ್ರುಗಳೆಂದು ಭಾವಿಸುವುದೂ ಸರಿಯಲ್ಲ. ದಲಿತರ ಮೇಲಿನ ದೌರ್ಜನ್ಯ ನಿಲ್ಲಬೇಕಾದರೆ ಅವರು ಮಾನವರಂತೆ ಬಾಳಬೇಕಾದರೆ ಎಡ ವಿಚಾರಧಾರೆಯತ್ತ ಅವರು ಗಮನ ಹರಿಸಬೇಕು, ಎಡ ರಾಜಕೀಯ ಪಕ್ಷಗಳನ್ನು ಬೆಂಬಲಿಸಬೇಕು, ಎಡ ಸಿದ್ಧಾಂತವನ್ನು ಅಭ್ಯಾಸ ಮಾಡಿ ಜಾತಿಯ-ಮತೀಯ ಹಾಗೆಯೇ ಭೂಮಾಲಕ-ಬಂಡವಾಳ ಶಾಹಿ ವರ್ಗವನ್ನು ಸೋಲಿಸುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಅಗತ್ಯ. ಇನ್ನೊಂದು ಮಾತು, ಅನ್ಯಾಯವನ್ನು ಪ್ರತಿಭಟಿಸುವಾಗ ಹಿಂಸಾಚಾರ ನಡೆಯದಂತೆ ಸಾಧ್ಯವಾದಷ್ಟೂ ಜಾಗರೂಕತೆಯನ್ನು ವಹಿಸಬೇಕು

ಪೋಲೀಸ್ ಕಿರುಕುಳದ ವಿರುದ್ಧ ಆಟೋ ಚಾಲಕರ ಪ್ರತಿಭಟನೆ

ಸಂಚಾರಿ ಪೋಲಿಸ್ ಪೇದೆಯೊಬ್ಬ ಚಾಲಕನ ಮೇಲೆ ಹಲ್ಲೆ ನಡೆಸಿರುವುದನ್ನು ಮತ್ತು ವಿನಾಕಾರಣ ಸುಳ್ಳು ಮೊಕದ್ದಮೆ ಹೂಡಿ ಕಿರುಕುಳ ನೀಡುವುದನ್ನು ಪ್ರತಿಭಟಿಸಿ ಜುಲೈ 22 ರಂದು ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್(ಸಿಐಟಿಯು) ನೇತೃತ್ವದಲ್ಲಿ ಮಾರ್ಕೆಟ್ ಪೋಲೀಸ್ ಠಾಣೆ ಎದುರು ಆಟೋ ರಿಕ್ಷಾ ಚಾಲಕರು ಪ್ರತಿಭಟಿಸಿದರು.

ಆಟೋರಿಕ್ಷಾಗಳನ್ನು ನಿಲ್ಲಿಸಿಕೊಳ್ಳಲು ಸಾಕಷ್ಟು ನಿಲ್ದಾಣ ಕೊಟ್ಟಿಲ್ಲ, ಪ್ರಯಾಣಿಕರನ್ನು ಇಳಿಸಿ ಹಣ ಪಡೆಯಲು ಪೋಲೀಸರು ಅವಕಾಶ ಕೊಡುತ್ತಿಲ್ಲ. ಎಲ್ಲಡೆ ನೋಪಾರ್ಕಿಂಗ್ ಬೋರ್ಡ್‌ಗಳನ್ನು ಹಾಕಿರುತ್ತಾರೆ. ಒಂದೇ ತಪ್ಪಿಗೆ 4-5 ಕೇಸ್‌ಗಳನ್ನು ಹಾಕಿ ದಂಡ ವಸೂಲಿ ಮಾಡುತ್ತಿದ್ದಾರೆ. ಚಾಲಕರೊಡನೆ ಪೋಲೀಸರು ಅಸಭ್ಯ ರೀತಿಯಲ್ಲಿ ವರ್ತಿಸುತ್ತಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎ.ಎಸ್.ಟಿ.ಅರಸು ಆರೋಪಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಚಿಕ್ಕಪೇಟೆ ಸಂಚಾರ ವಿಭಾಗದ ಎ.ಸಿ.ಪಿ. ಎಂ.ಟಿ.ನಾಯಕ್ ಸಂಘದ ಮುಖಂಡರೊಡನೆ ಮಾತನಾಡುತ್ತಾ ಮಾರ್ಕೆಟ್‌ಗೆ ಬರುವ ಪ್ರಯಾಣಿಕರನ್ನು ಇಳಿಸಲು ಒಂದು ಸ್ಥಳ ನಿಗದಿಪಡಿಸುವುದಾಗಿ ಭರವಸೆ ನೀಡಿದರು.

ನೂರಾರು ಆಟೋ ಚಾಲಕರು ತಮ್ಮ ವಾಹನಗಳನ್ನು ರಸ್ತೆಯಲ್ಲೇ ನಿಲ್ಲಿಸಿದ್ದರಿಂದಾಗಿ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು.

ವೈದ್ಯರ ನೇಮಕಕ್ಕಾಗಿ ಸಿಪಿಐ(ಎಂ) ಆಗ್ರಹ

ಕೊಡಗು: ತೋಟ ಕಾರ್ಮಿಕರೇ ಹೆಚ್ಚಾಗಿರುವ ಜಿಲ್ಲೆಯ ಸಿದ್ದಾಪುರದ ಸರಕಾರಿ ಆಸ್ಪತ್ರೆಯಲ್ಲಿ ಕಳೆದ ನಾಲ್ಕು ತಿಂಗಳಿಂದ ಖಾಯಂ ವೈದ್ಯರಿಲ್ಲದೆ ಈ ಆಸ್ಪತ್ರೆಯನ್ನೇ ಅವಲಂಬಿಸಿರುವ ಬಡಜನತೆ ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ. ಜನತೆಯ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಆರೋಗ್ಯವನ್ನು ಒದಗಿಸುವಲ್ಲಿ ತಾತ್ಸಾರಧೋರಣೆಯನ್ನು ಅನುಸರಿಸುತ್ತಿರುವ ಸರಕಾರದ ಧೋರಣೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಸಿದ್ಧಾಪುರ ಶಾಖೆಯು ತೀವ್ರವಾಗಿ ಖಂಡಿಸಿ ಖಾಯಂ ವೈದ್ಯರನ್ನು ಕೂಡಲೇ ನೇಮಿಸುವಂತೆ ಸರಕಾರವನ್ನು ಒತ್ತಾಯಿಸಿದೆ.


ಲೋಕಸಂಚಾರ



ಕ್ಯೂಬಾದ ವಿರುದ್ಧ ಅಮೆರಿಕಾದ ದಿಗ್ಬಂಧನ
ಸಾರ್ವಭೌಮತೆಯ ಉಲ್ಲಂಘನೆ ಎಂದು ಅಲಿಪ್ತ ಆಂದೋಲನ

ಕ್ಯೂಬಾದ ವಿರುದ್ಧ ಕ್ರಿಮಿನಲ್ ದಿಗ್ಬಂಧ ನವನ್ನು ಇನ್ನಷ್ಟು ಬಿಗಿಗೊಳಿಸುವ, ಅದಕ್ಕಾಗಿ ಹೆಲ್ಮ್ - ಬರ್ಟನ್ ಕಾನೂನು ಗಳಂತಹ ಶಾಸನಗಳನ್ನು ತರಲೆತ್ನಿಸುವ ಅಮೆರಿಕಾದ ಸರಕಾರದ ಪ್ರಯತ್ನಗಳನ್ನು ಅಲಿಪ್ತ ಆಂದೋಲನ ತಿರಸ್ಕರಿಸಿದೆ. ಈ ಕಾನೂನು ಗಳು ಎಲ್ಲಾ ದೇಶಗಳ ಸಾರ್ವ ಭೌಮತೆಯನ್ನು ಉಲ್ಲಂಘಿಸುತ್ತವೆ ಎಂದು 'ಅಲಿಪ್ತ ಜಗತ್ತಿನ ಸುದ್ದಿ' ಪತ್ರಿಕೆ ತನ್ನ ಜುಲೈ 2 ರ ಸಂಚಿಕೆಯಲ್ಲಿ ಸ್ಪಷ್ಟವಾಗಿ ಹೇಳಿದೆ.

35 ವರ್ಷಗಳಿಂದ ಇರುವ ಕ್ಯೂಬಾದ ವಿರುದ್ಧದ ಅಮೆರಿಕನ್ ದಿಗ್ಬಂದನವನ್ನು ಇನ್ನಷ್ಟು ಬಿಗಿಗೊಳಿಸುವ ಕ್ರಮದ ಬಗ್ಗೆ ಅಮೆರಿಕಾದ ಸಂಸತ್ತು ಪರಿಶೀಲಿಸು ತ್ತಿರುವುದು ಆಂತಕಕಾರಿ ಎಂಬುದು ಅಲಿಪ್ತ ಆಂದೋಲನದ ಅಭಿಪ್ರಾಯ. ಇದು ಅಂತರ್ರಾಷ್ಟ್ರೀಯ ಕಾನೂನನ್ನು, ವಿಶ್ವಸಂಸ್ಥೆಯ ಸನ್ನದನ್ನು ಹಾಗೂ ವಿಶ್ವಸಂಸ್ಥೆಯ ಸಾಮಾನ್ಯಸಭೆ ಆಗಾಗ ಮತ್ತೆ ಮತ್ತೆ ಬಹುಪಾಲು ಅಂತರ್ರಾಷ್ಟ್ರೀಯ ಸಮು ದಾಯದ ಭಾವನೆಗಳನ್ನು ಅಭಿವ್ಯಕ್ತಗೊಳಿಸಿದ ಠರಾವುಗಳ ಉಲ್ಲಂಘನೆಯೆಂದು ಅಲಿಪ್ತ ಆಂದೋಲನ ಬಗೆಯುವುದಾಗಿ ಈ ಪತ್ರಿಕೆ ವರದಿಮಾಡಿದೆ. ಅಮೆರಿಕಾದ ಈ ಹೊಸ ಪ್ರಯತ್ನಗಳು ದೇಶ-ದೇಶಗಳ ನಡುವೆ ಉತ್ತಮ ತಿಳುವಳಿಕೆಗಳನ್ನು ಮೂಡಿಸುವ



ಪ್ರಯತ್ನಗಳಿಗೆ ಮಾರಕವಾಗುವಂತಹವು ಎಂದು ತನ್ನ ಅಭಿಪ್ರಾಯವನ್ನು ಅಲಿಪ್ತ ಆಂದೋಲನ ವ್ಯಕ್ತಪಡಿಸಿದೆ.

ಈ ಹಿಂದೆ ಏಪ್ರಿಲ್ 8 ರಂದು ನವ ದೆಹಲಿಯಲ್ಲಿ ನಡೆದ ಅಲಿಪ್ತ ಆಂದೋಲನದ ವಿದೇಶ ಮಂತ್ರಿಗಳ ಸಭೆ ಅಂಗೀಕರಿಸಿದ ನಿರ್ಣಯವನ್ನು ಈಗ ಪುನರುಚ್ಚರಿಸಲಾಗಿದೆ. ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರಕಾರ ಕ್ಯೂಬಾದ ವಿರುದ್ಧ ಆರ್ಥಿಕ, ವಾಣಿಜ್ಯ ಹಾಗೂ ಹಣಕಾಸು ಕ್ರಮ ಗಳನ್ನು ಹಾಗೂ ಕಾರ್ಯಾ ಚರಣೆಗಳನ್ನು ನಿಲ್ಲಿಸಬೇಕು- ಏಕೆಂದರೆ ಇವು ಏಕಪಕ್ಷೀಯ ಹಾಗೂ ವಿಶ್ವಸಂಸ್ಥೆಯ ಸನ್ನದು ಮತ್ತು ಅಂತರ್ರಾಷ್ಟ್ರೀಯ ಕಾನೂನುಗಳಿಗೆ ಹಾಗೂ ಉತ್ತರ ನೆರೆ-ಹೊರೆಯ ನೀತಿಗ ವಿರುದ್ಧವಾದದ್ದು ಮಾತ್ರವಲ್ಲದೆ ಈ ಪುಟ್ಟ ದೇಶಕ್ಕೆ ಅಪಾರ ಭೌತಿಕ ನಷ್ಟ ಹಾಗೂ ಆರ್ಥಿಕ ತೊಂದರೆ ಉಂಟುಮಾಡುತ್ತದೆ ಎಂದು ಏಪ್ರಿಲ್ 8 ರ ಸಭೆ ಹೇಳಿತ್ತು. ಅಮೆರಿಕಾ ವಿಶ್ವಸಂಸ್ಥೆಯ ಐದು ಠರಾವು ಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದೂ ಅಲಿಪ್ತ ಆಂದೋಲನ ಕರೆ ನೀಡಿದೆ.

ಅಧ್ಯಕ್ಷ ಕೆನಡಿಯ
(ಮತ್ತು ಅಮೆರಿಕನ್ 'ಪ್ರಜಾಪ್ರಭುತ್ವ'ದ) ನಿಜಸ್ವರೂಪ!

ಈ ನಡುವೆ ಕ್ಯೂಬಾದ ಕ್ರಾಂತಿಯ ಆರಂಭದಿಂದ ಅಮೆರಿಕನ್ ಸರಕಾರ ಗಳು ಫಿಡೆಲ್ ಕ್ಯಾಸ್ಟ್ರೋರವರನ್ನು ವ್ಯೆಯಕ್ತಿಕ ವಾಗಿ ಮಣಿಸಿಬಿಡಲು ಪ್ರಯತ್ನಿಸಿರುವುದರ ಬಗ್ಗೆ ನಡೆಸಿರುವ ಪಿತೂರಿಗಳ ಬಗ್ಗೆ ಇನ್ನಷ್ಟು ಗುಪ್ತ ದಾಖಲೆಗಳು ಬಯಲಿಗೆ ಬಂದಿವೆ. 'ಪ್ರಜಾಪ್ರಭುತ್ವದ', ಮಾನವ ಹಕ್ಕುಗಳ ಸಾಕಾರಮೂರ್ತಿ ಎಂದು ಈಗಲೂ ಡಂಗುರ ಹೊಡೆಸಿ ಕೊಳ್ಳುತ್ತಿರುವ ಜಾನ್‌ಕೆನಡಿ ಅಧ್ಯಕ್ಷರಾಗಿದ್ದ ಹಾಗೂ ಆತನ ಸೋದರ ರಾಬರ್ಟ್ ಕೆನಡಿ ಅಟಾರ್ನಿ ಜನರಲ್ ಆಗಿದ್ದಾಗ ನಡೆದ ಪಿತೂರಿಗಳ ದಾಖಲೆಗಳು ಈಗ ಬಯಲಾಗಿವೆ. ಇದರ ಪ್ರಕಾರ ಮೇ 1962 ರಲ್ಲಿ ಸಿಐಎ ಫಿಡೆಲ್ ಕ್ಯಾಸ್ಟ್ರೋರವರನ್ನು ಕೊಲ್ಲಲು ಚಿಕಾಗೋದ ಮಾಫಿಯಾ ದೊರೆ ಸಾಮ್ ಗಿಯಾಂಕಾ ನಾನಿಗೆ ಕಾಂಟ್ರಾಕ್ಟ್ ಕೊಡಲಾಗಿತ್ತು. ಇದಕ್ಕೆ ಆಗಲೇ ಒಂದೂವರೆ ಲಕ್ಷ ಡಾಲರುಗಳನ್ನು ಕೊಡುವುದಾಗಿ ಹೇಳಿದ್ದರೂ ಹಿಂದೆ ಕ್ಯೂಬಾದ ಸರ್ವಾಧಿಕಾರಿಯ ಕಾಲದಲ್ಲಿ ಕಾನೂನು ಬಾಹಿರವಾಗಿ ಮಿಲಿಯಗಟ್ಟಲೆ ಡಾಲರುಗಳನ್ನು ಸಂಪಾದಿಸಲು ಇದ್ದ ಅವಕಾಶವನ್ನು ನಿರಾಕರಿಸಿದ ಕ್ಯೂಬಾ ಕ್ರಾಂತಿಯ ಮುಖಂಡನನ್ನು ಪುಕ್ಕಟ್ಟೆಯಾಗಿ ಮುಗಿಸಿ ಬಿಡಲೂ ಈ ಕ್ರಿಮಿನಲ್ ದೊರೆಗಳು ಸಿದ್ಧರಾದರಂತೆ. ಆದರೂ ಸಿಐಎ ಅವರಿಗೆ ಈ ಕಾರ್ಯಾಚರಣೆಯ ಖರ್ಚಿಗೆಂದು 11000 ಡಾಲರುಗಳನ್ನು ಕೊಟ್ಟಿತ್ತಂತೆ. ಇದಕ್ಕೆ ಮೊದಲು 1961 ರಲ್ಲಿ ವಿಷಯುತ ಗುಳಿಗೆ ಹಾಗೂ ಗೂಂಡಾ ಧಾಳಿಯ ಮೂಲಕ ಕ್ಯಾಸ್ಟ್ರೋರವರನ್ನು ಕೊಲ್ಲುವ ಪ್ರಯತ್ನ ವಿಫಲವಾದ ಮೇಲೆ ಈ ಕಾಂಟ್ರಾಕ್ಟ್ ಕೊಡಲಾಗಿತ್ತು ಎಂದು. ಇತ್ತೀಚೆಗೆ ಬಯಲುಗೊಳಿಸಿದ ಅಮೆರಿಕಾದ ಗೃಹ ಇಲಾಖೆಯ ರಹಸ್ಯ ದಾಖಲೆಗಳಲ್ಲಿ ಇನ್ನೂ ಇಂತಹ ಹಲವಾರು ಅಂಶಗಳಿವೆ. ಏಪ್ರಿಲ್ 1961 ರಲ್ಲಿ ಅಮೆರಿಕಾ ಸರಕಾರದ ಕುಖ್ಯಾತ 'ಬೇ ಆಫ್ ಪಿಗ್ಸ್' ಆಕ್ರಮಣ ವಿಫಲವಾದ ಮೇಲೆ ಅಧ್ಯಕ್ಷ ಕೆನಡಿ ಹಾಗೂ ಆತನ ಸೋದರ ಹಾಗೂ ಅಟಾರ್ನಿ ಜನರಲ್ ರಾಬರ್ಟ್.ಕೆನೆಡಿ 'ಏನು ಬೇಕಾದರೂ ಮಾಡಿ ಕ್ಯಾಸ್ಟ್ರೋವನ್ನು ಮುಗಿಸಿ' ಎಂದು ಸಿಐಎ ಗೆ ತಿಳಿಸಿದ್ದರು ಎಂದು ಈಗ ಸ್ಪಷ್ಟವಾಗಿದೆ.

ಆಹಾ:, ಎಂತಹ ಪ್ರಜಾಪ್ರಭುತ್ವ!

ಭಾರತಕ್ಕೆ ಅಮೆರಿಕಾದ ಮುಂದಿನ ರಾಯಭಾರಿ ಯಾರು?

ಭಾರತದಲ್ಲಿ ಅಮೆರಿಕಾದ ರಾಯಭಾರಿ ಯಾಗಿದ್ದ ಫ್ರಾಂಕ್ ವಿಸ್ನರ್ ಅಮೆರಿಕನ್ ವಿದೇಶಿ ಸೇವೆ ಬಿಟ್ಟು ಒಂದು ಅಮೆರಿಕನ್ ಇನ್ಶೂರೆನ್ಸ್ ಕಂಪನಿ ಸೇರುತ್ತಿದ್ದಾರಂತೆ. ಅವರ ಜಾಗದಲ್ಲಿ ಇನ್ಯಾರು ರಾಯಭಾರಿ ಯಾಗಿ ಬರುತ್ತಾರೆ. ಈ ಬಗ್ಗೆ ರಾಯಭಾರಿ ಅಭ್ಯರ್ಥಿಗಳು ಅಷ್ಟೇನೂ ತಲೆಕೆಡಿಸಿ ಕೊಂಡಿಲ್ಲ. ಆದರೆ ಅಮೆರಿಕಾ 'ನಾಫ್ತಾ' ದಲ್ಲಿ ಸೇರಿಸಿಕೊಂಡಿರುವ ಮೆಕ್ಸಿಕೋಗೆ ಅಮೆರಿಕಾದ ರಾಯಭಾರಿಯಾರೆಂಬ ಬಗ್ಗೆ ಭಾರೀ ಜಗ್ಗಾಟ ನಡೆಯುತ್ತಿದೆಯಂತೆ. ರಿಪಬ್ಲಿಕನ್ ಪಕ್ಷದ ಮ್ಯಾಸಚುಸೆಟ್ಸ್ ರಾಜ್ಯ ಸರಕಾರದ ವಿಲಿಯಂ ವೆಲ್ಡ್ ಇದಕ್ಕೆ ಪ್ರಮುಖ ಅಭ್ಯರ್ಥಿ. ಆದರೇ ಅವರದೇ ಪಕ್ಷಕ್ಕೆ ಸೇರಿದ ಸೆನೆಟ್ ವಿದೇಶಿ ಸಂಬಂಧ ಸಮಿತಿಯ ಅಧ್ಯಕ್ಷ ಜೆಸ್ಸ್ ಹೆಲ್ಮ್ಸ್ ಇದನ್ನು ವಿರೋಧಿಸುತ್ತಿದ್ದಾರಂತೆ. ಅದಕ್ಕೆ ಕೊಡುವ ಕಾರಣ ವೆಲ್ಡ್ ಮರಿಜುವಾನಾ ಮಾದಕದ್ರವ್ಯವನ್ನು ಔಷಧಿಗೆ ಬಳಸುವುದನ್ನು ವಿರೋಧಿಸಿರಲಿಲ್ಲ ಎಂದು. ಅವರ ಬದಲು ವಿಲಿಯಂ ವೆಲ್ಡ್‌ರನ್ನು ಭಾರತಕ್ಕೆ ರಾಯಭಾರಿ ಕಳಿಸುವ ಈ ಸ್ಥಾನವೂ ಅಷ್ಟೇ ಮಹತ್ವದ್ದು. ಏಕೆಂದರೆ ಭಾರತವೂ ಒಂದು ಆರ್ಥಿಕ ಹಾಗೂ ಪರಮಾಣು ಶಕ್ತಿಯಾಗಿ ಬೆಳೆಯು ತ್ತಿದೆ ಎಂದು ಅವರನ್ನು ಒಪ್ಪಿಸಲು ಪ್ರಯತ್ನ ನಡೆಯುತ್ತಿದೆಯಂತೆ. ಹೀಗಿದೆ ಅಮೆರಿಕಾ ದಲ್ಲಿ ವಾಣಿಜ್ಯ ಮತ್ತು ರಾಜಕೀಯದ ನಡುವಿನ ನಂಟು.

ಕಾಂಗೋ ವಿರುದ್ಧ ಅಪಪ್ರಚಾರವನ್ನು ನಿಲ್ಲಿಸಲು ಆಫ್ರಿಕಾದ ಹಿರಿಯ ಮುಖಂಡರ ಆಗ್ರಹ

ಅಮೆರಿಕಾ ಬೆಂಬಲಿತ ಸರ್ವಾಧಿಕಾರಿ ಮೊಬುಟುನನ್ನು ಉರುಳಿಸಿ ಅಧಿಕಾರಕ್ಕೆ ಬಂದ ಕಬಿಲಾ ವಿರುದ್ಧ ಹಾಗೂ ಕಾಂಗೋ ಗಣತಂತ್ರದ ವಿರುದ್ಧ ಅನಾವಶ್ಯಕ ಸುಳ್ಳು ಸುದ್ದಿಗಳನ್ನು ಹರಡಿಸುವುದನ್ನು, ಅಪಪ್ರಚಾರ ನಡೆಸುವುದನ್ನು ನಿಲ್ಲಿಸಬೇಕು ಎಂದು ಇರಿಟೇರಿಯಾ, ನಮೀಬಿಯಾ, ಮಧ್ಯ ಆಫ್ರಿಕಾ ಗಣತಂತ್ರ, ಇಥಿಯೋಪಿಯಾ, ಗೇಬನ್, ಉಗಾಂಡಾ, ಜಿಂಬಾಬ್ವೆ ಹಾಗೂ ಝಾಂಬಿಯಾದ ಮುಖಂಡರು ಒಂದು ಹೇಳಿಕೆಯಲ್ಲಿ ಆಗ್ರಹಪಡಿಸಿದ್ದಾರೆ. ಕಾಂಗೋ ಗಣತಂತ್ರದ ಮೇಲೆ ಹಾಕುತ್ತಿರುವ ಅಸಮರ್ಥನೀಯ ಒತ್ತಡಗಳನ್ನು ಈ ಹೇಳಿಕೆ ಖಂಡಿಸಿದೆ.

ರ್‍ವಾಂಡಾದ ಹಲವು ನಿರಾಶ್ರಿತರ ಮೇಲೆ ಕಬೀಲಾ ಪಡೆಗಳು ನರಹತ್ಯಾಕಾಂಡ ನಡೆಸಿವೆ ಎಂದು ಆಪಾದಿಸಿ ಆ ಬಗ್ಗೆ ಅಂತ ರ್ರಾಷ್ಟ್ರೀಯ ತನಿಖೆ ನಡೆಸುವ ವಿಶ್ವಸಂಸ್ಥೆಯ ಪ್ರಯತ್ನವನ್ನು ಕಬೀಲಾ ವಿಫಲಗೊಳಿ ಸುತ್ತಿದ್ದಾರೆಂದು ಆಪಾದಿಸಲಾಗಿದೆ. ಆದರೆ ಈ ತನಿಖೆಯನ್ನು ಇತ್ತೀಚಿನ ಅವಧಿಗೇ ಮಿತ ಗೊಳಿಸದೆ ಮೊಬುಟು ಅಧಿಕಾರ ಅವಧಿ ಯಿಂದಲೇ ಆರಂಭಿಸಬೇಕು ಎಂದು ಕಾಂಗೋ ಸರಕಾರ ಒತ್ತಾಯಿಸುತ್ತಿತ್ತು. ಕೊನೆಗೂ ಈಗ ವಿಶ್ವಸಂಸ್ಥೆ ಈ ಬೇಡಿಕೆ ಯನ್ನು ಒಪ್ಪಬೇಕಾಗಿ ಬಂದಿದೆ. ಪಾಶ್ಚಿಮಾತ್ಯ ದೇಶಗಳ, ಮುಖ್ಯವಾಗಿ ಅಮೆರಿಕಾದ ಆಳ ರಸರಿಗೆ ಪ್ರಿಯ ವ್ಯಕ್ತಿಯಾಗಿದ್ದ ಮೊಬುಟು ಬಗ್ಗೆ ತನಿಖೆ ನಡೆಸಬಾರದೆಂಬ ಹುನ್ನಾರ ಇಷ್ಟರ ಮಟ್ಟಿಗೆ ಈಗ ವಿಫಲವಾಗಿದೆ.

ತಾಲಿಬಾನ್ ಆಡಳಿತಕ್ಕೆ ಮಾನ್ಯತೆ ನೀಡಲು ಮಧ್ಯ ಏಶ್ಯಾ ದೇಶಗಳ ನಿರಾಕರಣೆ

ಮಧ್ಯಏಶ್ಯಾದ ಐದು ದೇಶಗಳಲ್ಲಿ ಯಾವುದೂ ಅಫಘಾನಿಸ್ತಾನದ ತಾಲಿಬಾನ್ ಸರಕಾರಕ್ಕೆ ಮಾನ್ಯತೆ ನೀಡುವುದಿಲ್ಲ, ಪಾಕಿ ಸ್ತಾನ ಅಫಘಾನಿಸ್ತಾನದ ಆಂತರಿಕ ವ್ಯವಹಾರ ಗಳಲ್ಲಿ ತಲೆ ಹಾಕುವುದನ್ನು ನಿಲ್ಲಿಸಬೇಕು ಎಂದು ಕಝಾಕಿಸ್ತಾನದ ವಿದೇಶಾಂಗ ಮಂತ್ರಿ ಗಳು ಹೇಳಿದ್ದಾರೆ. ತಾಲಿಬಾನ್ ಸಾಕಷ್ಟು ಪ್ರದೇಶಗಳ ಮೇಲೆ ಹತೋಟಿ ಹೊಂದಿರು ವುದರಿಂದ ಈ ವಿವಾದದ ಮಾತುಕತೆಯಲ್ಲಿ ಪಾಲ್ಗೊಳ್ಳ ಬಹುದು ಎಂದು ಅವರು ಹೇಳಿದ್ದಾರೆ. ಅಫಘಾನಿಸ್ತಾನದಲ್ಲಿ ಪಾಕಿಸ್ತಾನದ, ಅಮೆರಿಕಾದ ಹಸ್ತಕ್ಷೇಪ ಈಗ ಹೆಚ್ಚೆಚ್ಚು ಮಂದಿಯ ಅರಿವಿಗೆ ಬರುತ್ತಿದೆ.

ಈ ನಡುವೆ ಉತ್ತರದಲ್ಲಿ ಭಾರೀ ನಷ್ಟಗಳನ್ನು ಅನುಭವಿಸಿದ ತಾಲಿಬಾನ್ ತನ್ನ ಪರವಾಗಿ ಸಮರ ನಡೆಸಲು ಪಾಕಿಸ್ತಾನದ ಯುವಕರನ್ನು ಭರ್ತಿ ಮಾಡಿಕೊಳ್ಳುತ್ತಿದೆ ಎಂಬ ಸುದ್ದಿ ಬಂದಿದೆ.

ಐರ್ಲೆಂಡಿನಲ್ಲಿ ಮತ್ತೆ ಕದನ ವಿರಾಮ

ಹಿಂಸಾಚಾರ ಪೀಡಿತ ಉತ್ತರ ಐರ್ಲೆಂಡಿನಲ್ಲಿ ಜನಕ್ಕೆ ಈಗ ಮತ್ತೆ ತಾತ್ಕಾಲಿಕ ಶಾಂತಿ ದೊರೆತಿದೆ. ಐರಿಷ್ ರಿಪಬ್ಲಿಕನ್ ಆರ್ಮಿ ಕದನ ವಿರಾಮ ಘೋಷಿಸಿ ಅದೀಗ ಮತ್ತೆ ಜಾರಿಗೆ ಬಂದಿದೆ. ಇಂಗ್ಲೆಂಡಿನಲ್ಲಿ ಈಗ ಲೇಬರ್ ಸರಕಾರ ಬಂದಿರುವುದರಿಂದ ಐರ್ಲೆಂಡ್ ಸಮಸ್ಯೆ ಈಗಲಾದರೂ ಬಗೆಹರಿಯಬಹುದೇ ಎಂಬ ಸಂದೇಹ ಮಿಶ್ರಿತ ನಿರೀಕ್ಷೆ ಜನಗಳ ಮುಂದಿದೆಯೆಂದು ವರದಿಯಾಗಿದೆ.

ಗ್ರಾಮ ಪಂಚಾಯತ್ ನೌಕರರ ಅಧ್ಯಯನ ಶಿಬಿರ

ಧಾರವಾಡ: ಭಾರತದ ಸ್ವಾತಂತ್ರ್ಯದ 50ನೇ ವರ್ಷಾಚರಣೆಯ ಅಂಗವಾಗಿ ಧಾರವಾಡ ಜಿಲ್ಲೆಯ ಗ್ರಾಮ ಪಂಚಾಯತ್ ನೌಕರರಿಗೆ ಸ್ಥಳೀಯ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಜುಲೈ 12 ಮತ್ತು 13 ರಂದು ನಡೆದ ಅಧ್ಯಯನ ಶಿಬಿರವನ್ನು ಜಿಲ್ಲಾ ಪಂಚಾಯತ್‌ನ ಸಹಾಯಕ ಕಾರ್ಯದರ್ಶಿಗಳಾದ ಎನ್.ಟಿ.ಬೇವಿನಕಟ್ಟಿ, ಉದ್ಘಾಟಿಸಿದರು. ಸ್ವಾತಂತ್ರ್ಯದ ಸುವರ್ಣ ಉತ್ಸವದ ಸಂದರ್ಭ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಆಶ್ರಯದಲ್ಲಿ ಈ ಶಿಬಿರ ನಡೆಯುತ್ತಿರುವುದು ಅರ್ಥಪೂರ್ಣವಾಗಿದೆ, ಇದೇ ಮಾದರಿಯಲ್ಲಿ ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿಯೂ ಅಧ್ಯಯನ ಶಿಬಿರಗಳನ್ನು ಏರ್ಪಡಿಸಬೇಕೆಂದೂ ಬೇವಿನಕಟ್ಟಿ ಹೇಳಿದರು. ಅತ್ಯಂತ ಕೆಳಮಟ್ಟದಲ್ಲಿ ಇರುವ ಗ್ರಾಮ ಪಂಚಾಯತ್ ನೌಕರರ ಸೇವಾ ಸೌಲಭ್ಯಗಳಿಗಾಗಿ ಜಿಲ್ಲಾ ಮಟ್ಟದಲ್ಲಿ ಸಾಧ್ಯವಿದ್ದಷ್ಟು ಸೂಕ್ತ ಕ್ರಮ ಕೈಗೊಳ್ಳುತ್ತಿ ರುವುದಾಗಿಯು, ರಾಜ್ಯ ಮಟ್ಟದಲ್ಲಿ ನೌಕರರ ಬೇಡಿಕೆಗಳ ಈಡೇರಿಕೆಯನ್ನು ಪರಿಶೀಲಿಸಿ ಇತ್ತೀಚೆಗೆ ಕರ್ನಾಟಕ ಸರಕಾರದ ಅಧಿಕಾರಿಗಳ ಹಾಗೂ ಶಾಸಕರ ದ್ವಿಸದಸ್ಯರ ನಿಯೋಗವು ಪ.ಬಂಗಾಳಕ್ಕೆ ಹೋಗಿರುವುದನ್ನು ತಿಳಿಸಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರದ ನಿರ್ದೇಶಕರಾದ ಡಾ।। ವಿ.ಎನ್.ದೇಶಪಾಂಡೆ ವಹಿಸಿದ್ದರು. ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಬಿ.ಆರ್.ಪಾಟೀಲ ಪ್ರಾರಂಭದಲ್ಲಿ ಸ್ವಾಗತಿಸಿದರು.

ಎರಡು ದಿನಗಳ ಅವಧಿಯಲ್ಲಿ ಸಿಐಟಿಯು ವಿನ ರಾಜ್ಯ ಉಪಾಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಕಾರ್ಮಿಕರ ಆಂದೋಲನ ಮತ್ತು ಸಾಮಾಜಿಕ ಬದಲಾವಣೆ ಕುರಿತು ವಿಮಾ ನೌಕರರ ಸಂಘದ ಅಧ್ಯಕ್ಷರಾದ ಆರ್.ಎಚ್.ಅಯ್ಯ ಮತ್ತು ಡಾ।। ವಿ.ಎನ್.ದೇಶಪಾಂಡೆ 'ಸ್ವಾತಂತ್ರ್ಯ ಹೋರಾಟ ಅಂದು ಇಂದು' ಕುರಿತು ಮತ್ತು ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಸಿ.ಆರ್.ಭಟ್ ಹಾಗೂ ನವಲಗುಂದದ ಹೈಸ್ಕೂಲ್ ಮುಖ್ಯೋಪಧ್ಯಾಯರಾದ ಬಿ.ಎಸ್.ಸೊಪ್ಪಿನ ಪ್ರಜಾಪ್ರಭುತ್ವ ಮತ್ತು ಪಂಚಾಯತ್ ರಾಜ್ ಕುರಿತು ಉಪನ್ಯಾಸಗಳನ್ನು ಮಾಡಿದರು. ತರಬೇತಿ ಕೇಂದ್ರದ ಪ್ರಾಂಶುಪಾಲರಾದ ನೂರ್‌ಮನ್ಸೂರ್, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಆಡಳಿತಕ್ಕೆ ಸಂಬಂಧಿಸಿದ ಜ್ವಲಂತ ಸಮಸ್ಯೆಗಳ ಮೇಲೆ ಶಿಬಿರಾರ್ಥಿಗಳಿಂದ ಗುಂಪು ಚರ್ಚೆ ಏರ್ಪಡಿಸಿ ಸಾಮಾಜಿಕ ಅಸಮಾನತೆಯನ್ನು ಎತ್ತಿ ತೋರಿಸಿದರು. ಧಾರವಾಡದ ಮಹಿಳಾ ಮತ್ತು ಮಕ್ಕಳ ಆರೋಗ್ಯ ತಜ್ಞರಾದ ಸಂಜೀವ ಕುಲಕರ್ಣಿ ಮತ್ತು ಎಸ್‌ಡಿಎಂ ದಂತ ಕಾಲೇಜಿನ ಡಾ।। ಗೋಪಾಲ ದಾಬಡೆ ಹಾಗೂ ಶುಭದಾ ಜನಸಾಮಾನ್ಯರ ಆರೋಗ್ಯದ ಕುರಿತು ಅಭ್ಯರ್ಥಿಗಳೊಂದಿಗೆ ಸಂವಾದದಲ್ಲಿ ಭಾಗವಹಿಸಿ ಸಮಸ್ಯೆಯ ವಿವಿಧ ಮುಖಗಳನ್ನು ಪರಿಚಯಿಸಿದರು. ಸಮುದಾಯದ ಕಾರ್ಯದರ್ಶಿ ಬಿ.ಐ.ಈಳಿಗೇರ ಮತ್ತು ಎಸ್‌ಎಫ್‌ಐ ಜಿಲ್ಲಾಕಾರ್ಯದರ್ಶಿ ಮಹೇಶ ಪತ್ತಾರ ವಿಡಿಯೋ ವೀಕ್ಷಣೆ, ಹೋರಾಟದ ಹಾಡುಗಳು ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಸಿ.ಆರ್.ಭಟ್‌ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬಂದಿದ್ದ ಜೀವವಿಮಾ ನಿಗಮದ ಗುಂಪು ವಿಮಾ ಶಾಖೆಯ ಹಿರಿಯ ಅಧಿಕಾರಿಗಳಾದ ಅಂಗಡಿ ಅವರು ಗ್ರಾಮೀಣ ಬಡಜನರಿಗೆ ಉಚಿತ ಹಾಗೂ ರಿಯಾಯಿತಿ ದರಗಳಲ್ಲಿ ಇರುವ ಸಾಮಾಜಿಕ ಭದ್ರತೆಯಾಗಿ ಸಿಗಲಿರುವ ವಿಮಾ ಯೋಜನೆಗಳ ಕುರಿತು ವಿವರಿಸಿದರು. ಗ್ರಾ.ಪಂ. ನೌಕರರ ಸಂಘದ ಚಿತ್ರದುರ್ಗ ಜಿಲ್ಲಾ ಅಧ್ಯಕ್ಷರಾದ ಎ.ಎಸ್.ಮೂರ್ತಿ ಮತ್ತು ಶಿವಮೊಗ್ಗ ಜಿಲ್ಲಾ ಕಾರ್ಯದರ್ಶಿ ಬೈರೇಶ್ ಅಭ್ಯರ್ಥಿಗಳ ಪರವಾಗಿ ಅಧ್ಯಯನ ಶಿಬಿರದ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಾ ಶುಭ ಕೋರಿದರು. ಶಿಬಿರದಲ್ಲಿ ಒಟ್ಟು 70 ಅಭ್ಯರ್ಥಿಗಳು ಭಾಗವಹಿಸಿದ್ದು ಅವರಿಗೆ ಬಿ.ಎಸ್.ಸೊಪ್ಪಿನ ಅವರಿಂದ ಅವರಿಂದ ಪ್ರಮಾಣ ಪತ್ರ ವಿತರಿಸಲಾಯಿತು. ಕೊನೆಯಲ್ಲಿ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಎ.ಬಿ.ಅಡರಕಟ್ಟಿ ವಂದಿಸಿದರು.

ವಿದ್ಯುಚ್ಛಕ್ತಿ ದರ ಏರಿಕೆಯ ವಿರುದ್ಧ ಪ್ರತಿಭಟನೆ

ಮಂಗಳೂರು : ಕರ್ನಾಟಕ ಸರಕಾರವು ವಿದ್ಯುಚ್ಛಕ್ತಿ ದರಗಳನ್ನು ಶೇಕಡಾ 15 ರಷ್ಟು ಏರಿಸಿರುವುದನ್ನು ಪ್ರತಿಭಟಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಜುಲೈ 15 ರಂದು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಪುರಭವನದ ಆವರಣ ದಿಂದ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ತೆರಳಿದ ನೂರಾರು ಕಾರ್ಯಕರ್ತರು ಎಕ್ಸಿಕ್ಯೂಟಿವ್ ಇಂಜಿನಿ ಯರ್(ಇಲೆಕ್ಟ್ರಿಕಲ್) ಅವರ ಕಚೇರಿಯ ಮುಂದೆ ಪ್ರದರ್ಶನ ನಡೆಸಿದರು. ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯ ಅಬ್ರಹಾಂ ಕರ್ಕಡ, ದ.ಕ.ಜಿಲ್ಲಾ ಸಮಿತಿಯ ಸೆಕ್ರೆಟಾರಿಯೆಟ್ ಸದಸ್ಯ ಬಿ.ಮಾಧವ, ಜಿಲ್ಲಾ ಸಮಿತಿಯ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ಕೆ.ಪೂವಪ್ಪ ಸಾಲಿಯಾನ್, ಕೆ.ಬಾಬು ದೇವಾಡಿಗ, ವಾಸುದೇವ ಆಚಾರಿ, ಕಮಲಾಕ್ಷ ಬಂಗೇರ, ಮಂಗಳೂರು ನಗರ ಸಮಿತಿಯ ಸದಸ್ಯರಾದ ವಸಂತ ಆಚಾರಿ, ಎ.ಈಶ್ವರ, ಜೆ.ಸದಾಶಿವ ಶೆಟ್ಟಿ, ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಕೆ.ಯಾದವಶೆಟ್ಟಿ, ಜನವಾದಿ ಮಹಿಳಾ ಸಂಘಟನೆಯ ನಗರ ಸಮಿತಿಯ ಅಧ್ಯಕ್ಷೆ ಜಯಂತಿ ಬಿ.ಶೆಟ್ಟಿ ಮೊದಲಾದವರು ವಹಿಸಿದ್ದರು.

ಜಿಲ್ಲಾ ಸಮಿತಿಯ ಪರವಾಗಿ ಒಂದು ನಿಯೋಗವು ಪ್ರಭಾರ ಎಕ್ಸಿಕ್ಯೂಟಿವ್ ಇಂಜನಿಯರ್ ಶ್ರೀ ಎಂ.ನಾರಾಯಣ ಅವರನ್ನು ಭೇಟಿಯಾಗಿ ಮನವಿ ಅರ್ಪಿಸಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಕಾಂ।। ಬಿ.ಮಾಧವ ಅವರು ಮಾತನಾ ಡುತ್ತಾ, ರಾಜ್ಯ ಸರಕಾರವು ಜನತೆಯ ಭಾವನೆಗಳನ್ನು ಧಿಕ್ಕರಿಸಿ ವಿದ್ಯುಚ್ಛಕ್ತಿ ದರವನ್ನು ವಿಪರೀತವಾಗಿ ಏರಿಸುವ ಮೂಲಕ ಜನತೆಯ ವಿಶ್ವಾಸಕ್ಕೆ ದ್ರೋಹ ಬಗೆದಿದೆ ಎಂದು ಹೇಳಿದರು. ರೈತರ ಪರವಾಗಿ ಕೆಲಸ ಮಾಡುವುದಾಗಿ ಬಡಾಯಿ ಕೊಚ್ಚಿಕೊಳ್ಳು ತ್ತಿರುವ ಜೆ.ಹೆಚ್.ಪಟೇಲರ ಸರಕಾರವು ಪಂಪ್‌ಸೆಟ್ಟುಗಳಿಗೆ ವಿದ್ಯುತ್ ದರವನ್ನು ಮೂರುಪಟ್ಟು ಏರಿಸಿ, ರೈತ ವಿರೋಧಿ ನೀತಿಯನ್ನು ಪ್ರದರ್ಶಿಸಿದೆ ಎಂದು ಹೇಳಿ ದರು. ಕೇಂದ್ರದಲ್ಲಿ ಕಳೆದ ಇಪ್ಪತ್ತೊಂದು ವರ್ಷಗಳಿಂದ ನೇಮಕಾತಿ ಗಳನ್ನು ಮಾಡದೆ, ಖಾಲಿ ಹುದ್ದೆಗಳನ್ನೂ ತುಂಬದೆ ನಿರುದ್ಯೋಗಿ ಯುವ ಜನತೆ ಯನ್ನು ಉದ್ಯೋಗ ವಕಾಶಗಳಿಂದ ವಂಚಿತ ರನ್ನಾಗಿ ಮಾಡಿರು ವುದಲ್ಲದೆ, ಸಂಸ್ಥೆಯ ದಕ್ಷತೆಯು ಸಂಪೂರ್ಣ ವಾಗಿ ಕುಂಠಿತ ವಾಗುವಂತೆ ಮಾಡಿದ ಸರಕಾ ರದ ನೀತಿಯನ್ನು ಅವರು ಖಂಡಿಸಿದರು.

ಯುವಜನರಿಗೆ ಮಾರ್ಗದರ್ಶಕವಾದ ದಾರಿ

ಇತ್ತೀಚೆಗೆ ಪ್ರಕಟವಾದ ಹೊತ್ತಿಗೆ 'ನಾನು ನಡೆದು ಬಂದ ದಾರಿ' ಕಾಂ.ಎನ್.ಕೆ.ಉಪಾಧ್ಯಾಯ ಇವರ ಆತ್ಮಕಥನ. ಇದು ಎನ್ಕೆಯವರು ನಡೆದು ಬಂದ ದಾರಿ ಹೇಗೋ ಹಾಗೆ ಯುವಕರಿಗೆ ಮಾರ್ಗದರ್ಶಕವಾದ ದಾರಿ ಕೂಡ.

ಅನೇಕರಲ್ಲಿ ಹೋರಾಟ ಅವರ ಜೀವನದ ಒಂದು ಅಂಗ ಆಗಿರಬಹುದು. ಆದರೆ ಕಮ್ಯುನಿಷ್ಟನೊಬ್ಬನ ಬದುಕಿನಲ್ಲಿ ಹೋರಾಟವೇ ಪ್ರಮುಖ ಆಗಿ ಜೀವನ ಅದರ ಅಂಗವಾಗಿರುತ್ತದೆ. ಕಷ್ಟ ಸುಖಗಳ ವ್ಯಾಖ್ಯಾನ ತನ್ನ ಸಂಘಟನೆಯೊಡನೆ ನಡೆದಿರುತ್ತದೆ. ಸಮಾಜ ಸುಖಿ ಆದಾಗ ಮಾತ್ರ ತನ್ನ ಕುಟುಂಬ, ತಾನು ಸುಖಿಯೆಂದು ಆತ ತಿಳಿಯುತ್ತಾನೆ. ಅಲ್ಲಿಯವರೆಗೆ ಆತನಿಗೆ ವಿಶ್ರಾಂತಿ ಇಲ್ಲ, ದಣಿವಿಲ್ಲ. ಎಂತಹ ಕಷ್ಟದ ಪರಂಪರೆಯೇ ಎದುರಾದರೂ ಕೂಡ ಪ್ರತಿಗಾಮಿ ಶಕ್ತಿಯೊಂದಿಗೆ ಆತ ರಾಜಿ ಆಗಲಾರದ ಛಲ ಮತ್ತು ಆತ್ಮವಿಶ್ವಾಸವನ್ನು ಹೊಂದಿರುತ್ತಾನೆ. ತಾನು ನಂಬಿದ ಸೈದ್ಧಾಂತಿಕ ನಿಲುವಿಗೆ ಬದ್ಧನಾಗಿದ್ದುಕೊಂಡು ಸಮಾಜದಲ್ಲಿ ಅದನ್ನು ಪ್ರತಿಷ್ಠಾಪಿಸಲು ಉತ್ಸುಕನಾಗಿರುತ್ತಾನೆ. ಇಂತಹ ಒಂದು ವ್ಯಕ್ತಿತ್ವ ಕಾಂ.ಎನ್.ಕೆ.ಉಪಾಧ್ಯಾಯರದ್ದು. ಇದು ದಾಖಲಾದದ್ದು ಅವರ ಇತ್ತೀಚಿನ ಕೃತಿ 'ನಾನು ನಡೆದು ಬಂದ ದಾರಿ' ಯಲ್ಲಿ.

ಸದ್ಯದ ವ್ಯವಸ್ಥೆಯಲ್ಲಿ ರಾಜಕಾರಣಿಯೊಬ್ಬ (ಯಾವುದೇ ಬಲಪಕ್ಷದ) ತನ್ನ ನೈತಿಕತೆಯನ್ನು ಕಳೆದುಕೊಂಡು ಜನಸಾಮಾನ್ಯರ ಅವಹೇಳನಕ್ಕೆ ಗುರಿ ಆದದ್ದನ್ನು ನೋಡುತ್ತೇವೆ. 'ನಾನು ನಡೆದು ಬಂದ ದಾರಿ' ನಾವು ರಾಜಕಾರಣ ಆಗಿರುವುದೇ ಸ್ವಾರ್ಥಕ್ಕಾಗಿ, ಸ್ವಜನ ಪಕ್ಷಪಾತಕ್ಕಾಗಿ' ಎಂಬ ನೀತಿಯಲ್ಲಿ ವರ್ತಿಸುತ್ತಿರುವ ಬಲಪಂಥೀಯ ರಾಜಕಾರಣಿಗಳಿಗೆ ಎನ್ಕೆಯವರ ಜೀವನ ಒಂದು ಪಾಠ. ಜನಸೇವಕನೊಬ್ಬ ಹೇಗಿರಬೇಕು? ಜನಸಾಮಾನ್ಯರೊಂದಿಗೆ ಆತನ ಸಂಬಂಧ ಹೇಗಿರಬೇಕು? ಆತನ ಕಾರ್ಯಕೇಂದ್ರ ಯಾವುದಾಗಿರಬೇಕು? ಎನ್ನುವುದನ್ನು ಕಾಂ.ಉಪಾಧ್ಯಾಯರ ಜೀವನವನ್ನೊಮ್ಮೆ ಅವಲೋಕಿಸಿ ತಿಳಿಯಬೇಕು. ಈ ಮೇಲಿನ ಪ್ರಶ್ನೆಗಳಿಗೆಲ್ಲ ಎನ್ಕೆಯವರ ಈ ಪುಸ್ತಕ ಸಮರ್ಥ ಉತ್ತರ.

ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ ಇವರು, ಇದೇ ಕಾರಣಕ್ಕಾಗಿ 1942 ರಲ್ಲಿ 2 ವರ್ಷಗಳ ಬಂಧನಕ್ಕೊಳಗಾದರು. ಬಿಡುಗಡೆಯ ನಂತರ 'ಗೇರಿಲ್ಲಾ ಯುದ್ಧ' ತರಬೇತಿ ಪಡೆದರು. ಅಲ್ಲಿಂದ ಬಿಜಾಪುರದ ಉರಿಬಿಸಿಲಿನಲ್ಲಿ ನೆಲನಿಂತು ಜನಸಮುದಾಯವನ್ನು ಸಂಘಟಿಸುವಲ್ಲಿ ಮುಂದಾದರು. ಕರ್ನಾಟಕದಲ್ಲಿ ಕೆಂಬಾವುಟವನ್ನು ಎತ್ತಿ ಮುನ್ನುಗ್ಗಲು ಕಳಿಸಿದ ಪ್ರಮುಖರಲ್ಲಿ ಎನ್ಕೆಯವರು ಪ್ರಮುಖರು. ಇಂದು ಒಬ್ಬ ಲೇಖಕರಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ ಸಮರ್ಥವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಈ ಪುಸ್ತಕದಲ್ಲಿ 'ನಾಸಿಕ್ ಜೈಲಿನಿಂದ ಬಿಜಾಪುರದತ್ತ' 'ಬಿಜಾಪುರದಲ್ಲಿ ಕಾರ್ಯಾರಂಭ' 'ಕಾರ್ಮಿಕರ ಸಂಘಟನೆಯಲ್ಲಿ' 'ರೈತ'-ಹಳ್ಳಿ ಜನರ ನಡುವೆ' 'ಬಿಜಾಪುರದಲ್ಲಿ ಕಮ್ಯುನಿಸ್ಟ್ ಪಕ್ಷ' 'ಐದು ದಶಕಗಳಲ್ಲಿ' ಹೀಗೆ 6 ಭಾಗಗಳಲ್ಲಿ 50 ವರ್ಷಗಳ ಧೀರ್ಘ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಕಾಂ. ಎನ್ಕೆಯವರು ಮೊದಲು ಬಂಧನಕ್ಕೊಳಗಾದದ್ದು 1940 ನವೆಂಬರ್ 6 ರಂದು. ಎನ್.ಎಲ್.ಉಪಾಧ್ಯಾಯರಂತಹ ನಾಯಕರೊಂದಿಗೆ ಇವರನ್ನು ಮುಂಬೈನಲ್ಲಿ ಬಂಧಿಸಿ ನಾಸಿಕ್ ಜೈಲಿನಲ್ಲಿ ಇಡಲಾಯಿತು. ಆಗ ಇವರು ನವೆಂಬರ್ 7 ರ ರಷ್ಯದ ಕ್ರಾಂತಿಯ ದಿನಾಚರಣೆಯಲ್ಲಿದ್ದರು.

1943ರ ಹೊತ್ತಿಗೆ ಬಿಡುಗಡೆ ಆದ ಎನ್ಕೆಯವರನ್ನು ರೈಲ್ವೆ ಕೆಲಸಗಾರರ ಸಂಘಟನೆಯಲ್ಲಿ ದುಡಿಯಲು ಪಕ್ಷ ಹುಬ್ಬಳ್ಳಿಗೆ ಕಳುಹಿಸಿಕೊಟ್ಟಿತು. ಆ ಸಂದರ್ಭದಲ್ಲಿ ರೈಲ್ವೆ ಕೆಲಸಗಾರರ ಮಧ್ಯ ಮಾತ್ರ ಕೆಲಸ ಮಾಡದೆ ಬೀಡಿ, ಹೋಟೆಲ್ ಕೆಲಸಗಾರರು, ಪ್ರೆಸ್ ಕೆಲಸಗಾರರನ್ನು ಸಂಘಟಿಸಲು ಮುಂದಾದರು. ಬೆಲೆ ಏರಿಕೆ ಹೆಚ್ಚಿದಾಗ ಬೀದಿಗಿಳಿದರು. ಈ ಕಮ್ಯುನಿಸ್ಟ ಹುಬ್ಬಳ್ಳಿ ಆಡಳಿತಕ್ಕೆ ತಲೆನೋವೆಂದೆನಿಸಿ, ಅವರನ್ನು ಎರಡು ವರ್ಷ ಗಡಿಪಾರು ಮಾಡಲಾಯಿತು.

1944 ರಲ್ಲಿ ಬಿಜಾಪುರದಲ್ಲಿ ಕಮ್ಯುನಿಸ್ಟ್ ಪಕ್ಷದ ಕೆಲಸ ಮಾಡಲು ಕಳುಹಿಸಿತು. ಅಲ್ಲಿ ಅವರು ಬೀಡಿ ಕೂಲಿಗಾರರ ಸಂಘ, ಮುನಿಸಿಪಲ್ ಕಾಮಗಾರ್ ಯೂನಿಯನ್, ಟಾಂಗಾ ಅಸೋಸಿಯೇಷನ್, ಹಮಾಲರ ಸಂಘ, ಎಕ್ಕಾಗಾಡಿ ಚಾಲಕರ ಸಂಘ, ಪ್ರೆಸ್ ವರ್ಕರ್ಸ್ ಯೂನಿಯನ್, ಹೋಟೆಲ್ ವರ್ಕರ್ಸ್ ಯೂನಿಯನ್, ಚುರುಮುರಿ ಕೆಲಸ ಗಾರರ ಸಂಘ, ನೇಕಾರರ ಸಂಘ, ಹಾಗೆ ಬಿಜಾಪುರ ಬಾಗಲಕೋಟೆಗಳಲ್ಲಿ, ಹುಬ್ಬಳ್ಳಿಗಳಲ್ಲಿ ದುಡಿವ ಜನರ ಸಂಘಟನೆಯನ್ನು ಕಟ್ಟಿ ಬೆಳೆಸಿದ್ದನ್ನು ಹೆಸರಿಸುತ್ತಾರೆ. ಬಹುಶಃ ಇದರ ವಿವರಕ್ಕೆ ಹೋದರೆ ಎನ್ಕೆಯವರು ಸಾವಿರಾರು ಪುಟದ ಪುಸ್ತಕವನ್ನೇ ಬರೆಯಬೇಕಾಗುತ್ತದೇನೋ?

ಕೆಲಸ ಮಾಡುತ್ತಲೇ ಉಪಾಧ್ಯಾಯರು ಎಲ್ಲಾ ಕಾರ್ಮಿಕರ ಪ್ರೀತಿಗೆ ಪಾತ್ರರಾಗಿದ್ದರು. ಇಂಥಹ ಒಂದು ಘಟನೆಯನ್ನು ಇಲ್ಲಿ ಉದಾ ಹರಿಸಬಹುದು. 1956 ರಲ್ಲಿ ಎನ್ಕೆಯವರಿಗೆ ಮಗು ಹುಟ್ಟಿದಾಗ ಇಲ್ಲಿಯ ಮುನ್ಸಿಪಲ್ ಕೆಲಸಗಾರರು 'ತಾವೇ ತೊಟ್ಟಿಲನ್ನು ಕೊಂಡು ತಂದು ಅದನ್ನು ಅಲಂಕರಿಸಿ, ಮಗುವಿಗೆ ಹಂಚಿಗೆ ಅಂಗಿ ತಾಯಿಯ ಸೀರೆಯನ್ನು ತೊಟ್ಟಿಲಲ್ಲಿಟ್ಟು ಊರಲ್ಲಿ ಮೆರವಣಿಗೆ ತೆಗೆದು ಶಿಕಾರ ಖಾನೆಯಲ್ಲಿದ್ದ ನಮ್ಮ ಮನೆಗೆ ಬಂದು ಮಗುವನ್ನು ತೊಟ್ಟಿಲಲ್ಲಿ ಹಾಕಿ ಹೆಸರಿಟ್ಟು ಹಾಡು ಹಾಡುತ್ತಾ ಶೋಭೆ ತಂದವರು...... ತಮಗೆ ಸಿಗುತ್ತಿದ್ದ ಅಲ್ಪ ಪಗಾರದಿಂದ ಹಣ ಸಂಗ್ರಹಿಸಿ ನನ್ನ ಮಗುವಿಗೆ ಕೊಂಡು ತಂದಿದ್ದ ತೊಟ್ಟಿಲು ಇಂದಿಗೂ ಹೊಸದಾಗಿ ಕಾಣುತ್ತಿದ್ದು 39 ವರ್ಷದಲ್ಲಿ 40 ಕ್ಕಿಂತಲೂ ಹೆಚ್ಚು ಮಕ್ಕಳನ್ನು ತೂಗಿಸಿ ಕೊಂಡು ಹೆತ್ತವರಿಗೆ ಸಂತೋಷ ತಂದಿದೆ" ಎನ್ನುವ ಎನ್ಕೆಯವರ ಮಾತು ಕಾರ್ಮಿಕರನ್ನು ಅವರು ಪ್ರೀತಿಸುತ್ತಿದ್ದ ರೀತಿಯನ್ನು ಸ್ಪಷ್ಟಪಡಿಸುತ್ತದೆ.

ಮೊಟ್ಟ ಮೊದಲ ಬಾರಿಗೆ ಕಮ್ಯುನಿಸ್ಟ್ ಪಕ್ಷ ಸೇರಿದ್ದನ್ನು ಎನ್ಕೆ ಹೀಗೆ ವಿವರಿಸುತ್ತಾರೆ - "1941 ರಲ್ಲಿ ನಾಸಿಕ್ ಜೈಲಿನಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಸದಸ್ಯತ್ವವನ್ನು ಸ್ವೀಕರಿಸಿ ಪಕ್ಷಕ್ಕಾಗಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಸಮತಾವಾದಿ ಕ್ರಾಂತಿಗಾಗಿ ತನು ಮನ ಧನದಿಂದ ದುಡಿಯುತ್ತೇನೆಂದು ಪ್ರತಿಜ್ಞೆ ಮಾಡಿಯೇ ಪಕ್ಷದ ಸದಸ್ಯನಾದೆ. ಜೈಲಿನಲ್ಲಿಯೇ ಕಮ್ಯುನಿಸಂನ ಹೆಚ್ಚಿನ ಪುಸ್ತಕಗಳನ್ನೆಲ್ಲ ಓದಿದೆ. .... ಜೈಲಿನಿಂದ ಹೊರಬಂದು ನೇರವಾಗಿ ಜನರ ಮಧ್ಯೆ ಹೋರಾಟಕ್ಕಿಳಿದೆ. ಜೈಲಿನಿಂದ ಬಂದ ನಂತರ ಪಕ್ಷದ ಕೇಂದ್ರ ಸಮಿತಿಯ ತೀರ್ಮಾನದಂತೆ ಕೆಲಸಕ್ಕೆ ಸೇರುವುದನ್ನು ಬಿಟ್ಟು ಕರ್ನಾಟಕಕ್ಕೆ ಪೂರ್ಣಾವಧಿ ಕಾರ್ಯಕರ್ತನಾಗಿ ಬಂದೆ' ಎಂದು ಪಕ್ಷದ ಕೆಲಸಕ್ಕಾಗಿ ಬಂದ ಮೊದಲ ಹೆಜ್ಜೆಗಳನ್ನು ನೆನಪಿಸಿಕೊಳ್ಳುತ್ತಾರೆ.

> **'ನಾನು ನಡೆದು ಬಂದ ದಾರಿ'**
> ಲೇಖಕರು
> ಎನ್.ಕೆ.ಉಪಾಧ್ಯಾಯ
> ಬೆಲೆ. 20 ರೂ.
> ಪ್ರ. 'ಕ್ರಿಯಾ ಪ್ರಕಾಶನ'
> ಕೋಶ ರಾಜ್ಯ ಕಟ್ಟಡ,
> ಗಾಂಧಿನಗರ,
> ಬೆಂಗಳೂರು-09

ಜನರಲ್ಲಿ ರಾಜಕೀಯ ಪ್ರಜ್ಞೆ ಉಂಟುಮಾಡುವ ಸಲುವಾಗಿ ಪತ್ರಿಕೆ, ಪುಸ್ತಕ ಮಾರಾಟದ ಕೆಲಸಗಳನ್ನು ಮುತುವರ್ಜಿಯಿಂದ ಮಾಡುತ್ತಾರೆ. ಪಕ್ಷದ ಪತ್ರಿಕೆ ಅರುಣ, ಪೀಪಲ್ಸ್ ವಾರ್, ನ್ಯೂಏಜ್, ಹುಬ್ಬಳ್ಳಿಯ ಜನಶಕ್ತಿ, ಸೋವಿಯತ್ ಪತ್ರಿಕೆಗಳನ್ನು 'ನಾನು ಮತ್ತು ಅಲ್ಲಾವುದ್ದೀನ್ ಹಿಪ್ಪರಗಿಯವರು ಅಂಗಡಿಗಳಿಗೆ ಹೋಗಿ ಸಾವಿರಾರು ಪ್ರತಿ ಪತ್ರಿಕೆ ಮಾರಾಟ ಮಾಡುತ್ತಿದ್ದೆವು, ಪುಸ್ತಕ ಮಾರಾಟ ಮಾಡುತ್ತಿದ್ದೆವು" ಎಂದು ವಿವರಿಸುತ್ತಾರೆ.

ಕೇವಲ ಕಾರ್ಮಿಕರ ಸಂಘಟನೆಯಲ್ಲದೆ ಎನ್.ಕೆ.ಉಪಾಧ್ಯಾಯರು ರಜಾಕರ ವಿರುದ್ಧ ಹೋರಾಟ, ಕರ್ನಾಟಕ ಏಕೀಕರಣ ಚಳುವಳಿ, ಗೋವಾ ವಿಮೋಚನಾ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಗೋವಾ ವಿಮೋಚನಾ ಹೋರಾಟದಲ್ಲಿ ಇವರ ನಾಯಕತ್ವದಲ್ಲಿ ಒಂದು ಪಡೆ ಕೂಡ ಇತ್ತು. ಗುಂಡಿಗೆ ಎದೆಯೊಡ್ಡಿ ಮುನ್ನುಗ್ಗಿದ ಎನ್.ಕೆ. ಯವರ ಸಂಗಡಿಗರು ಗುಂಡಿಗೆ ಬಲಿ ಆದರು. ಇವರು ಬದುಕಿದ್ದು ಒಂದು ಆಶ್ಚರ್ಯವಾಯಿತು.

1949 ರಷ್ಟೊತ್ತಿಗೆ ಕಮ್ಯುನಿಸ್ಟ್ ಪಕ್ಷದ ಮುದಾಳ್ತನದಲ್ಲಿ ಕೃಷ್ಣಾ ಮೇಲ್ದಂಡೆ(ಅರಿನಾವಟ್ಟಿ) ಯೋಜನೆಗಾಗಿ ಎನ್ಕೆಯವರು ಹೋರಾಟ ಮಾಡಿದರು. ಈ ಹೋರಾಟ ತೀವ್ರ ಸ್ವರೂಪವನ್ನು ತಾಳಿದ್ದನ್ನು ಎನ್ಕೆಯವರು ಇಲ್ಲಿ ನೆನಪಿಸಿಕೊಳ್ಳುತ್ತಾರೆ.

1944 ರಿಂದ 1994 ರವರೆಗಿನ 50 ವರ್ಷಗಳ ಸಮರ್ಥ ಹೋರಾಟದ ಬದುಕಲಿ ಎನ್ಕೆಯವರು ಸುಖದ ಸುಪ್ಪತ್ತಿಗೆಯ ಮೇಲೆ ಮಲಗಿದ ಕಥೆ ಎಲ್ಲೂ ಬರುವುದಿಲ್ಲ. ಬದಲಾಗಿ ರೈಲ್ವೇ ಸ್ಟೇಷನ್, ಬಸ್‌ಸ್ಟಾಂಡ್‌ಗಳಲ್ಲಿ, ಮಲಗಿ ಬೆಳಗು ಮೂಡಿದಂತೆ ಪೋಲೀಸರಿಂದ ತಪ್ಪಿಸಿ ಓಡಾಡುವ ಭೂಗತ ಜೀವನ ನಡೆಸಿದ ರೋಮಾಂಚಕಾರಿ ಅನುಭವ, ಊಟ ತಿಂಡಿಗಾಗಲೀ ಒಮ್ಮೊಮ್ಮೆ ಹಣವಿಲ್ಲದೆ ಹಸಿದ ಹೊಟ್ಟೆಯಲ್ಲಿಯೇ ಸಂಘಟನೆ ಕಟ್ಟುವ ರೀತಿ - ಹೀಗೆ ಅವರ ಬದುಕಿನ ಪ್ರತಿ ವರ್ಷವೂ ಮೈನವಿರೇಳಿಸುತ್ತದೆ. ಇಂಥ ಅಮೂಲ್ಯ ಅನುಭವ ಗಳ ಸಂಗ್ರಹ ನಮ್ಮ ಯುವಜನತೆ ಓದಲೇ ಬೇಕಾದ ಪುಸ್ತಕಗಳಲ್ಲಿ ಒಂದು

– ವಿಠಲ

ದಿಲ್ಲಿಯ ಪ್ರಗತಿಪರ ನಾಟಕ ತಂಡ 'ಜನಮ್'ಗೆ 25 ವರ್ಷ

ದಿಲ್ಲಿಯ ಪ್ರಸಿದ್ಧ ಪ್ರಗತಿಪರ ನಾಟಕ ತಂಡ 'ಜನನಾಟ್ಯ ಮಂಚ್'(ಜನಮ್) 1997-98 ನ್ನು ತನ್ನ ಬೆಳ್ಳಿಹಬ್ಬದ ವರ್ಷವಾಗಿ ಆಚರಿಸುತ್ತಿದೆ. ಈ ವರ್ಷ ಅದು ಬೀದಿ ನಾಟಕಗಳ ಪ್ರದರ್ಶನ ಆರಂಭಿಸಿದ 20ನೇ ವರ್ಷವೂ ಹೌದು. ಇದನ್ನು ಬೆಳ್ಳಿಹಬ್ಬದೊಂದಿಗೆ ಆಚರಿಸಲು ಜನಮ್ ವ್ಯಾಪಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ಅದರ ಸಂಯೋಜಕರಾದ ಮಲಯಶ್ರಿ ಹಾಶ್ಮಿ ತಿಳಿಸಿದ್ದಾರೆ.

1973 ರಲ್ಲಿ ದಿಲ್ಲಿಯ ಕೆಲವು ಪ್ರಗತಿಪರ ಹವ್ಯಾಸಿ ನಾಟಕ ಕಲಾವಿದರು ಆರಂಭಿಸಿದ ಈ ತಂಡ ಈಗಾಗಲೇ 10 ರಂಗನಾಟಕಗಳನ್ನು ಹಾಗೂ ಅಕ್ಟೋಬರ್ 1978 ರಿಂದ ಆರಂಭಿಸಿ ಕಳೆದ ಇಪ್ಪತ್ತು ವರ್ಷಗಳಲ್ಲಿ 47 ಬೀದಿ ನಾಟಕಗಳನ್ನು ಪ್ರದರ್ಶಿಸಿದೆ. ಈ ನಾಟಕಗಳ 6500 ಪ್ರದರ್ಶನಗಳು ನಡೆದಿವೆ. ಇದರಿಂದಾಗಿ ಅದೀಗ ದೇಶದಲ್ಲಿ ಬೀದಿನಾಟಕ ಆಂದೋಲನ ಪ್ರವರ್ತಕ ತಂಡಗಳಲ್ಲಿ ಒಂದು ಎಂಬ ಖ್ಯಾತಿ ಪಡೆದಿದೆ.

1975-77 ರಲ್ಲಿ ತುರ್ತುಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವ ಸಂಘಟನೆಗಳ ಮೇಲೆ ಧಾಳಿ ನಡೆಸಿದ ಸಂದರ್ಭದಲ್ಲಿ ಬೀದಿ ನಾಟಕದ ವಿಚಾರ ಮೂಡಿಬಂತು. ಅಕ್ಟೋಬರ್ 1978 ರಲ್ಲಿ 'ಮಶಿನ್' ಬೀದಿನಾಟಕದ ಯಶಸ್ಸಿನಿಂದ ಹುರುಪು ಪಡೆದ ಅಂದಿನಿಂದ ಸತತವಾಗಿ ಈ ರಂಗದಲ್ಲಿ ಹೊಸ ಹೊಸ ಪ್ರಯತ್ನಗಳನ್ನು ನಡೆಸುತ್ತಿರುವ ತಂಡ 'ಜನಮ್' ಕಾರ್ಖಾನೆ ಗೇಟುಗಳಲ್ಲಿ, ದುಡಿಯುವ ಜನರಿರುವ ಕೊಳಗೇರಿಗಳಲ್ಲಿ, ಶಾಲೆ-ಕಾಲೇಜುಗಳಲ್ಲಿ, ಕಚೇರಿಗಳ ಆವರಣಗಳಲ್ಲಿ, ಮಾರುಕಟ್ಟೆಗಳಲ್ಲಿ, ಪಾರ್ಕುಗಳಲ್ಲಿ, ಹಳ್ಳಿಗಳಲ್ಲಿ ಸುತ್ತ ನೆರೆಯುವ ಪ್ರೇಕ್ಷಕರ ನಡುವೆ ಪ್ರದರ್ಶಿಸುವ ಈ ಬೀದಿ ನಾಟಕಗಳು ದಿಲ್ಲಿಯಲ್ಲಿ ಬಹಳ ಜನಪ್ರಿಯವಾದವು. ಇದಕ್ಕೆ ಟಿಕೇಟು ಇರುವುದಿಲ್ಲ. ಪ್ರತಿಯೊಂದು ಪ್ರದರ್ಶನದ ನಂತರ ಪ್ರೇಕ್ಷಕರಿಂದ ಕಾಣಿಕೆಗಳನ್ನು ಕೇಳಲಾಗುವುದು.


ಇಂತಹ ಒಂದು ಬೀದಿ ನಾಟಕ 'ಹಲ್ಲಾಬೋಲ್'ನ ಪ್ರದರ್ಶನದ ಸಂದರ್ಭದಲ್ಲೇ ದಿಲ್ಲಿಯ ಹೊರವಲಯದಲ್ಲಿರುವ ಝುಂಡಾಪುರ್‌ನಲ್ಲಿ ಕಾಂಗ್ರೆಸ್(ಐ) ಬೆಂಬಲಿತ ಗೂಂಡಾಗಳ ಧಾಳಿಗೆ ಈತಂಡದ ಪ್ರಮುಖ ಕಲಾವಿದರಾದ, ನಾಟಕಕಾರ, ಕವಿಯೂ ಆಗಿದ್ದ ಸಫ್ದರ್‌ಹಾಶ್ಮಿ ಬಲಿಯಾದರು-ಜನವರಿ 1, 1989 ರಂದು. ದಿಲ್ಲಿಯಲ್ಲಿ ಸಿಐಟಿಯು ನೇತೃತ್ವದಲ್ಲಿ ಒಂದು ವಾರದ ಯಶಸ್ವಿ ಮುಷ್ಕರದ ಸಂದರ್ಭದಲ್ಲಿ ಈ ಪ್ರದರ್ಶನ ನಡೆದಿತ್ತು. ಸಫ್ದರ್ ಜೊತೆಗೆ ಒಬ್ಬ ಕಾರ್ಮಿಕ ರಾಮ್‌ಬಹದ್ದೂರ್ ಕೂಡಾ ಪ್ರಾಣಾರ್ಪಣೆ ಮಾಡಿದರು.

ಸಫ್ದರ್‌ರವರ ಸ್ಮರಣಾರ್ಥ 1993 ರಿಂದ ಭಾಷಣ ಮಾಲೆಯನ್ನೂ ಜನಮ್ ಆರಂಭಿಸಿದ್ದು ಇದರಲ್ಲಿ ಸಾಂಸ್ಕೃತಿಕ ರಂಗದ ಬಗ್ಗೆ ವಿಚಾರ ವಿನಿಮಯ ನಡೆಯುತ್ತಿದೆ.

ಬೆಳ್ಳಿ ಹಬ್ಬದ ಆಚರಣೆಯ ಭಾಗವಾಗಿ ಜನಮ್ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

- ದುಡಿಯುವ ವರ್ಗದ ಜನಗಳು ವಾಸಿಸುವ ಪ್ರದೇಶಗಳಲ್ಲಿ ಮಕ್ಕಳಿಗೆ ವರ್ಕ್‌ಶಾಪ್‌ಗಳು.
- ಹೊಸ ಪ್ರೊಸಿನಿಯಂ ನಾಟಕದ ಕನಿಷ್ಠ 50 ಪ್ರದರ್ಶನಗಳನ್ನು ಕಾರ್ಮಿಕ ವರ್ಗದ ಪ್ರದೇಶಗಳಲ್ಲಿ ನಡೆಸುವುದು. ಇದಕ್ಕಾಗಿ ಒಂದು ಚಲಿಸುವ ರಂಗಸ್ಥಳದ ರಚನೆ.
- 25 ಬೀದಿ ನಾಟಕ ತಂಡಗಳೊಂದಿಗೆ ಒಂದು ವಾರ ಪರಸ್ಪರ ವಿಚಾರ - ವಿನಿಮಯ ಕಾರ್ಯಕ್ರಮ
- ಜನವರಿ 1 ರಂದು ಝುಂಡಾಪುರದಲ್ಲಿ ದಿನವಿಡೀ ಸಾಂಸ್ಕೃತಿಕ ಚಟುವಟಿಕೆಗಳು.
- ರಾಷ್ಟ್ರೀಯ ಬೀದಿ ನಾಟಕ ದಿನ ಏಪ್ರಿಲ್ 12 ರಂದು 'ನುಕ್ಕಡ್ ಮೇಲಾ' ಅಂದರೆ ಬೀದಿ ನಾಟಕ ಮೇಳ.
- ದಿಲ್ಲಿಯ ಪುನರ್ವಸತಿ ಕಾಲನಿಗಳಲ್ಲಿ ಕಲಾ ಜಾಥಾಗಳು
- ಅಕ್ಟೋಬರ್‌ನಲ್ಲಿ ಸಫ್ದರ್ ಹಾಶ್ಮಿ ಸ್ಮಾರಕಭಾಷಣ
- ಜನಮ್‌ನ ಪತ್ರಿಕೆ 'ನುಕ್ಕಡ್ ಜನಮ್ ಸಂವಾದ'ದ ವಿಶೇಷ ಸಂಚಿಕೆ - ಜನಮ್ ಮತ್ತು ರಾಜಕೀಯ ನಾಟಕರಂಗದ ಬಗ್ಗೆ ವಿಶೇಷ ಲೇಖನಗಳು
- ಜನಮ್‌ನ ಎಲ್ಲಾ ಬೀದಿ ನಾಟಕಗಳ ಪ್ರಕಟಣೆ
- ಚರ್ಚೆ ಮಾಸ - ಕವನ ವಾಚನ, ಸ್ವಯಂ ತರಬೇತಿ ವರ್ಕ್‌ಶಾಪ್‌ಗಳು ಮತ್ತು ಹೊಸಬೀದಿ ನಾಟಕಗಳ ತಯಾರಿ.
- ಜನಮ್‌ನ 25 ವರ್ಷಗಳ ಕೆಲಸ ಕುರಿತಾದ ಒಂದು ಗಂಭೀರ, ವಿಮರ್ಶಾತ್ಮಕ ಸಂಸ್ಮರಣ ಗ್ರಂಥ.
- ಹೆಚ್ಚಿನ ಪ್ರದೇಶಗಳಲ್ಲಿ ನಾಟಕ ಪ್ರದರ್ಶನ ನಡೆಸಲು ಅನುಕೂಲವಾಗುವಂತೆ ಒಂದು ವಾಹನ ಖರೀದಿ.
- ಕ್ರಾಂತಿಕಾರಿ ಗೀತೆಗಳು ಮತ್ತು ರಂಗ ಗೀತೆಗಳ ಆಡಿಯೋ ಕ್ಯಾಸೆಟ್‌ಗಳ ಪ್ರಕಟಣೆ.
- ಒಂದು ಖಾಯಂ ಕಚೇರಿ ಮತ್ತು ರಂಗ ಪುಸ್ತಕ ಭಂಡಾರ ರಚನೆ.

ಕಳೆದ ಸಂಚಿಕೆಯಲ್ಲಿ ಕ್ಯೂಬಾದಲ್ಲಿ ಜುಲೈ 28 ರಿಂದ ಆಗಸ್ಟ್ 5 ರ ವರೆಗೆ ನಡೆಯಲಿರುವ 14 ನೇ ವಿಶ್ವ ವಿದ್ಯಾರ್ಥಿ ಯುವಜನೋತ್ಸವದ ಬಗ್ಗೆ ಓದಿರುವಿರಿ. ಈ ಸಂದರ್ಭದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ ಪ್ರಕಟಿಸಿರುವ ಒಂದು ಪೋಸ್ಟರ್‌ನಲ್ಲಿರುವ ಚಿತ್ರ ಹಾಗೂ ಅದರೊಂದಿಗಿನ ಕವನದ ಕನ್ನಡ ಅನುವಾದವನ್ನು ಇಲ್ಲಿ ಕೊಡಲಾಗಿದೆ. ಈಗಾಗಲೇ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್, ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್ ಹಾಗೂ ಪತ್ರಕರ್ತ ಬಿ.ಎನ್.ಮೋಹನ್ ಕರ್ನಾಟಕದ ಇತರ ಪ್ರತಿನಿಧಿಗಳೊಂದಿಗೆ ಕ್ಯೂಬಾಕ್ಕೆ ತೆರಳಿದ್ದಾರೆ.



KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು